ಸಂಪುಟ: 05 ಸಂಚಿಕೆ: 17 ಪುಟಗಳು: 08 ಮಂಗಳವಾರ 01 ಏಪ್ರಿಲ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕಸಕ್ಕೆ ಸೆಸ್ ಜಾರಿ ಎಷ್ಟು ಚದರ ಕಟ್ಟಡಕ್ಕೆ ಎಷ್ಟು ತೆರಿಗೆ

• ಉದಯವಾಹಿನಿ, ಬೆಂಗಳೂರು

ಮೆಟ್ರೋ ದರ, ಹಾಲಿನ ದರ, ವಿದ್ಯುತ್ ದರದ ಬಳಿಕ ಈಗ ಬೆಂಗಳೂರಿಗರಿಗೆ ಮತ್ತೊಂದು ದರ ಏರಿಕೆ ಬಿಸಿ ತಟ್ಟಲಿದೆ. ಕಸದ ಮೇಲೆ ಸೆಸ್ ಜಾರಿ ಆಗಲಿದೆ. ಮನೆ ಮನೆ ಕಸ ಸಂಗ್ರಹಿಸಲು ಇನ್ನೂ ಮುಂದೆ ತೆರಿಗೆ ಕಟ್ಟಬೇಕು. ಘನತ್ಯಾಜ್ಯ ನಿರ್ವಹಣೆ ಸಂಸ್ಥೆಯಿಂದ ಕಸದ ಮೇಲೆ ಸೆಸ್ ವಿಧಿಸಲಾಗಿದೆ. ಪ್ರತಿ ತಿಂಗಳು ಕಸ ಸಂಗ್ರಹ ಹಾಗೂ ವಿಲೇವಾರಿ ವೆಚ್ಚ ಎಂದು ವಸೂಲಿ ಮಾಡಲು ಬಿಬಿಎಂಪಿಮುಂದಾಗಿದೆ. ಅಂಗಡಿ, ಹೋಟೆಲ್‌ಗಳಿಗೆ ಒಂದು ತೆರಿಗೆ, ರೆಸಿಡೆನ್ಷಿಯಲ್ ಕಟ್ಟಡಗಳಿಗೆ ಮತ್ತೊಂದು ರೀತಿ ಕಸದ ಸೆಸ್ ವಿಧಿಸಲು ನಿರ್ಧರಿಸಲಾಗಿದೆ. ಹೋಟೆಲ್‌ಗಳಿಗೆ ಮೊದಲು ಒಂದು ಕೆಜಿ ಕಸಕ್ಕೆ 5 ರೂ. ನಿಗದಿ ಮಾಡಲಾಗಿತ್ತು. ಈಗ 12 ರೂ.ಗೆ ಏರಿಸಲಾಗಿದೆ. ರೆಸಿಡೆನ್ಸಿಯಲ್ ಕಟ್ಟಡಗಳಿಗೆ ಕಟ್ಟಡದ ಚದರ ಅಡಿ ಲೆಕ್ಕದಲ್ಲಿ ಕಸಕ್ಕೆ ಸೆಸ್ ಹಾಕಲಿದ್ದಾರೆ. ಆಸ್ತಿ ತೆರಿಗೆಯಲ್ಲಿ ಕಸದ ತೆರಿಗೆಯನ್ನು ವಾರ್ಷಿಕವಾಗಿ



| ಎಷ್ಟು ಚದರ ಕಟ್ಟಡಕ್ಕೆ ಎಷ್ಟು ತೆರಿಗೆ | |
|---|---|
| 600 ಚದರ ಅಡಿವರೆಗಿನ ಕಟ್ಟಡಗಳಿಗೆ | ತಿಂಗಳಿಗೆ 10 ರೂ. |
| 600 ಚದರ ದಿಂದ 1000 ಚದರವರೆಗಿನ ಕಟ್ಟಡಗಳಿಗೆ | ತಿಂಗಳಿಗೆ 50 ರೂ. |
| 1 ಸಾವಿರದಿಂದ 2 ಸಾವಿರ ಚದರ ಅಡಿಗಳ ಕಟ್ಟಡಗಳಿಗೆ | ತಿಂಗಳಿಗೆ 100 ರೂ. |
| 2 ಸಾವಿರದಿಂದ 3 ಸಾವಿರ ಚದರ ಅಡಿಗಳ ಕಟ್ಟಡಗಳಿಗೆ | ತಿಂಗಳಿಗೆ 150 ರೂ. |
| 3 ಸಾವಿರ ದಿಂದ 4 ಸಾವಿರ ಚದರ ಅಡಿಗಳ ಕಟ್ಟಡಗಳಿಗೆ | ತಿಂಗಳಿಗೆ 200 ರೂ. |
| 4 ಸಾವಿರ ಚದರ ಅಡಿಗಳ ಮೇಲ್ಪಟ್ಟ ಕಟ್ಟಡಗಳಿಗೆ | ತಿಂಗಳಿಗೆ 400 ರೂ. |

ಬಿಬಿಎಂಪಿ ವಸೂಲಿ ಮಾಡಲಿದೆ. ಇದರಿಂದ ಘನತ್ಯಾಜ್ಯ ನಿರ್ವಹಣೆ ಸಂಸ್ಥೆಗೆ ವಾರ್ಷಿಕ 600 ಕೋಟಿ ರೂ. ಆದಾಯ ನಿರೀಕ್ಷೆ ಮಾಡಲಾಗಿದೆ

## ಹೊಸ ಹಿಂದೂ ಪಕ್ಷ ಸ್ಥಾಪನೆ ಅಗುತ್ತಾ? ಯತ್ನಾಳ್ ಲೆಕ್ಕಾಚಾರ?

• ಉದಯವಾಹಿನಿ, ಬೆಂಗಳೂರು

ರಾಜ್ಯಾಧ್ಯಕ್ಷ ವಿಜಯೇಂದ್ರ, ಮಾಜಿ ಸಿಎಂ ಯಡಿಯೂರಪ್ಪ ವಿರುದ್ಧ ವಾಗ್ದಾಳಿ ನಡೆಸಿ ಬಿಜೆಪಿಯಿಂದ 6 ವರ್ಷ ಉಚ್ಚಾಟನೆಗೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ಈಗ ಹೊಸ ಪಕ್ಷ ಸ್ಥಾಪನೆಗೆ ಮುಂದಾಗಿದ್ದಾರೆ. ಅಭಿಮಾನಿಗಳಿಂದ ಒತ್ತಡ ಇದೆ ಎಂದಿರುವ ಯತ್ನಾಳ್, ರಾಜ್ಯವೆಲ್ಲಾ ಸುತ್ತಾಡಿ ಜನಾಭಿಪ್ರಾಯ ಸಂಗ್ರಹಿಸಿ ಮುಂದಿನ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದ್ದಾರೆ.
ಯತ್ನಾಳ್ ಪ್ರಖರ ಹಿಂದುತ್ವವಾದಿಯಾಗಿದ್ದು ಅದೇ ಅವರ ಶಕ್ತಿ. ಹಿಂದುತ್ವ ಪರಿಕಲ್ಪನೆ ಇಟ್ಟುಕೊಂಡು ಪಕ್ಷ ಸ್ಥಾಪನೆ ಮಾಡುವುದು ದೇಶದಲ್ಲಿ ಹೊಸದಲ್ಲ. ಈ ಹಿಂದೆ ಮಹಾರಾಷ್ಟ್ರದಲ್ಲಿ ಬಾಳಾ ಠಾಕ್ರೆ ಈ ಕಲ್ಪನೆ ಇಟ್ಟುಕೊಂಡು ಶಿವಸೇನೆ ಸ್ಥಾಪಿಸಿದ್ದರು. ಆದರೆ ಕರ್ನಾಟಕದ ಮಟ್ಟಿಗೆ ಹೊಸದು. ಹಿಂದುತ್ವದ ಜೊತೆಗೆ ಉತ್ತರ ಕರ್ನಾಟಕ ಅಭಿವೃದ್ಧಿ ಉದ್ದೇಶ ಹೊಸ ಪಕ್ಷಕ್ಕೆ ಬೂಸ್ಟ್ ಸಿಗಲಿದೆ. ಹಿಂದುತ್ವ ಪರ ಇರುವ ನಾಯಕರಿಂದ ಪ್ರತ್ಯಕ್ಷ, ಪರೋಕ್ಷ ಬೆಂಬಲ ಸಿಗುವ ಸಾಧ್ಯತೆಯಿದೆ.

ಹಿಂದುತ್ವ ಪರ ಇರುವ ಸಂಘಟನೆಗಳಿಂದಲೂ ಬೆಂಬಲ ಸಿಗಲಿದೆ. ಯತ್ನಾಳ್ ಉಚ್ಚಾಟನೆಯಿಂದ ಹಿಂದುತ್ವದ ಸರ್ಕಲ್‌ನಲ್ಲಿ ಅನುಕಂಪದ ಅಲೆ ಈಗ ಸ್ವಲ್ಪ ಎದ್ದಿದೆ. ಹಿಂದುತ್ವವಾದಿ ನಾಯಕರು ಒಂದೇ ವೇದಿಕೆಯಲ್ಲಿ ಸಮಾಗಮವಾಗಲಿದ್ದಾರೆ. ಮಾಧ್ಯಮಗಳ ಮುಂದೆ ಸಿಡಿಮಿಡಿಗೊಂಡ ಯತ್ನಾಳ್ ಹೊಸ ಪಕ್ಷ ಯಶಸ್ವಿಯಾಗುತ್ತಾ ಇಲ್ವೋ ಎನ್ನುವುದಕ್ಕೆ ಚುನಾವಣೆ ಉತ್ತರ ನೀಡಲಿದೆ. ಆದರೆ ಬಿಜೆಪಿಯಿಂದ ಹೊರ ಬಂದ ಕಾರಣ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಪಂಚಮಸಾಲಿಗಳು ನಿರ್ಣಾಯಕರಾಗಿರುವ ಕೆಲ ಕ್ಷೇತ್ರಗಳಲ್ಲಿ ಬಿಜೆಪಿಗೆ ಹೊಡೆತ ಬೀಳುವ ಸಾಧ್ಯತೆಯಿದೆ.

## ಈ ವರ್ಷ ಉದ್ಘಾಟನೆಯಾಗಲ್ಲ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ

• ಉದಯವಾಹಿನಿ, ಬೆಂಗಳೂರು

ಈ ವರ್ಷ ಬೆಂಗಳೂರು- ಚೆನ್ನೈ ಎಕ್ಸ್‌ಪ್ರೆಸ್ ವೇ ಉದ್ಘಾಟನೆಯಾಗಲ್ಲ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಮಾಹಿತಿ ನೀಡಿದ್ದಾರೆ. ಖಾಸಗಿ ಕಾರ್ಯಕ್ರಮವೊಂದರಲ್ಲಿ ಈ ಕುರಿತು ಮಾತನಾಡಿದ ಅವರು, ಜೂನ್ 2026ಕ್ಕೆ ಎಕ್ಸ್‌ಪ್ರೆಸ್ ವೇ ಕಾಮಗಾರಿ ಮುಗಿಸುವ ಸಾಧ್ಯತೆ ಇದೆ. ಸದ್ಯಕ್ಕೆ 70 ಕಿ.ಮೀ ಎಕ್ಸ್‌ಪ್ರೆಸ್ ವೇ ಪೂರ್ಣಗೊಂಡಿದೆ. ಬೆಂಗಳೂರು ಟು ಚೆನ್ನೈ ಅಂದಾಜು 2 ರಿಂದ 2:30 ಗಂಟೆಯಲ್ಲಿ ತಲುಪಬಹುದು ಎಂದು ತಿಳಿಸಿದರು. ದಕ್ಷಿಣ ಭಾರತದ ಅತಿ ದೊಡ್ಡ ಎಕ್ಸ್‌ಪ್ರೆಸ್ ವೇನಲ್ಲಿ ಒಂದಾಗಿರುವ ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್ ವೇ ಕರ್ನಾಟಕ ಭಾಗದಲ್ಲಿ ಸಂಚಾರಕ್ಕೆ ಮುಕ್ತವಾಗಿದೆ. ಈ ಹೆದ್ದಾರಿ ಎರಡು ಪ್ರಮುಖ ನಗರಗಳ ನಡುವೆ ಉತ್ತಮ ಸಂಪರ್ಕ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆರ್ಥಿಕವಾಗಿ ಎರಡು ನಗರಗಳಿಗೆ ಇದು ಸಹಕಾರಿಯಾಗಲಿದೆ. ಒಟ್ಟು 17,000 ಕೋಟಿಯ ಪ್ರಾಜೆಕ್ಟ್ ಇದಾಗಿದ್ದು, ಒಟ್ಟು 260 ಕಿ.ಮೀ ಉದ್ದದ ರಸ್ತೆ ಇದಾಗಿದೆ. ಕರ್ನಾಟಕ ಭಾಗದ ಮಾರ್ಗದ ಕೆಲಸಗಳು ಸಂಪೂರ್ಣಗೊಂಡ ಹಿನ್ನೆಲೆ ರಾಜ್ಯದಲ್ಲಿ ಸಂಚಾರ ಮುಕ್ತಗೊಳಿಸಲಾಗಿದೆ. ತಾತ್ಕಾಲಿಕವಾಗಿ ಟೋಲ್ ಇಲ್ಲದೆ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಮಾರ್ಗಸೂಚಿ ಫಲಕಗಳು, ನಾಮಫಲಕಗಳು, ಡಿಜಿಟಲ್ ಫಲಕಗಳು ಸೇರಿದಂತೆ ರಾಜ್ಯ ಭಾಗದ 71 ಕಿ.ಮೀನ ಸಂಪೂರ್ಣ ಕಾರ್ಯ ಮುಕ್ತಾಯಗೊಂಡ ಹಿನ್ನೆಲೆ ಸಂಚಾರ ಮುಕ್ತಗೊಳಿಸಲಾಗಿದೆ.

## ಸರ್ಕಾರ ಗಾಳಿಯೊಂದನ್ನ ಬಿಟ್ಟು ಎಲ್ಲಾ ಬೆಲೆ ಏರಿಕೆ ಮಾಡಿದೆ

• ಉದಯವಾಹಿನಿ, ಬೆಂಗಳೂರು

ಸರ್ಕಾರ ಗಾಳಿಯೊಂದನ್ನ ಬಿಟ್ಟು ಎಲ್ಲಾ ಬೆಲೆ ಏರಿಕೆ ಮಾಡಿದೆ. ಸಾಮಾನ್ಯ ಜನ, ರೈತರನ್ನ ಈ ಸರ್ಕಾರ ಅರ್ಥ ಮಾಡಿಕೊಂಡಿಲ್ಲ. ಕಾಂಗ್ರೆಸ್‌ಗೆ ಜನ ಆಶೀರ್ವಾದ ಮಾಡಿದ್ದಾರೆ. ಆದರೆ ಈ ಸರ್ಕಾರ ಮತದಾರರಿಗೆ ವರದಾನ ಆಗೋ ಬದಲು ಶಾಪಗ್ರಸ್ತವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಕಿಡಿಕಾರಿದ್ದಾರೆ. ಬೆಲೆ ಏರಿಕೆ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಲೆ ಏರಿಕೆ ಅಂದರೆ ಎಲ್ಲಾ ಏರಿಕೆ ಮಾಡಿದೆ. ವಿದ್ಯುತ್ ದರ ಏರಿಕೆ ಮಾಡಿದ್ದಾರೆ. ಹಾಲಿನ ದರ ಮೂರು ಬಾರಿ ಏರಿಕೆ ಮಾಡಿದ್ದಾರೆ. ಈಗ ಮತ್ತೆ ಏರಿಕೆ ಆಗಿದೆ. ಸರ್ಕಾರಿ ಆಸ್ಪತ್ರೆ ಚಿಕಿತ್ಸೆ ವೆಚ್ಚವನ್ನು ಜಾಸ್ತಿ ಮಾಡಿದ್ದಾರೆ. ಹೊರ ರೋಗಗಳ ಶುಲ್ಕ, ಮರಣೋತ್ತರ ಪರೀಕ್ಷೆ ಶುಲ್ಕ, ವೈದ್ಯಕೀಯ ಪ್ರಮಾಣ ಪತ್ರದ ದರ ಜಾಸ್ತಿ ಆಗಿದೆ. ಲ್ಯಾಬ್ ಶುಲ್ಕ ಜಾಸ್ತಿ ಆಗಿದೆ. ಬಡವರಿಗೂ ಬರೆ ಎಳೆಯೋ ಕೆಲಸ ಈ ಸರ್ಕಾರ ಮಾಡಿದೆ. ನೋಂದಣಿ-ಮುದ್ರಾಂಕ ಶುಲ್ಕ ಜಾಸ್ತಿ ಆಗಿದೆ. ಪ್ರೊಫೆಷನಲ್ ಟ್ಯಾಕ್ಸ್ ಜಾಸ್ತಿ ಮಾಡಿದ್ದಾರೆ. ಬಸ್ ಟಿಕೆಟ್ ದರ ಏರಿಕೆ ಆಗಿದೆ. ಬೀಜಗಳ ಬೆಲೆ ಜಾಸ್ತಿ ಮಾಡಿದ್ದಾರೆ. ನೀರಿನ ದರ ಜಾಸ್ತಿ ಮಾಡಿದ್ದಾರೆ. ಈ ಸರ್ಕಾರ ಜನರಿಗೆ, ಮತದಾರರಿಗೆ ಶಾಪ ಕೊಡುವ ಕೆಲಸ ಮಾಡಿದೆ ಎಂದು ವಾಗ್ದಾಳಿ ನಡೆಸಿದರು.

## ವೈರಲ್ ಆಯ್ತು ಆಡಿಯೋ ರಾಜಣ್ಣ ಪುತ್ರ ಅಯ್ಯಯ್ಯೋ

ಆಡಿಯೋ ಕೇಳಿ ರಾಜಣ್ಣ ಪುತ್ರ ರಾಜೇಂದ್ರ ಶಾಕ್...!

ರಾಜೇಂದ್ರ ಅವರ ಸುಪಾರಿಗೆ ಸಂಚು ರೂಪಿಸಿದ್ದು ಎನ್ನಲಾದ ಆಡಿಯೋದಲ್ಲಿ ಸ್ಫೋಟಕ ಸಂಗತಿಗಳ ಬಗ್ಗೆ ಚರ್ಚೆ

ಸುಪಾರಿಗೆ ಸೋಮನಿಗೆ 5 ಲಕ್ಷ ಹಣ ಬಂದಿದ್ದು ನಿಜ



ತುಮಕೂರು ಎಸ್‌ಪಿಗೆ ದೂರು

• ಉದಯವಾಹಿನಿ, ಬೆಂಗಳೂರು

ಸಹಕಾರ ಸಚಿವ ಕೆಎನ್ ರಾಜಣ್ಣ ಅವರ ಪುತ್ರ, ಎಂಎಲ್‌ಸಿ ರಾಜೇಂದ್ರ ಕೊಲೆ ಯತ್ನ ಸಂಚಿನ ಸಂಬಂಧ ಈಗಾಗಲೇ ದೂರು ದಾಖಲಾಗಿದ್ದು,

ಎಫ್‌ಐಆರ್ ಕೂಡ ದಾಖಲಾಗಿದೆ. ಈ ಮಧ್ಯೆ, ಕೊಲೆ ಸಂಚಿಗೆ ಸಂಬಂಧಿಸಿದ ಆಡಿಯೋವನ್ನೂ ಸಹ ಪೊಲೀಸರಿಗೆ ನೀಡಿದ್ದಾಗಿ ರಾಜೇಂದ್ರ ಹೇಳಿದ್ದರು. ಇದೀಗ ಆ ಆಡಿಯೋ ಬಹಿರಂಗವಾಗಿದ್ದು, ಅನೇಕ ಸ್ಫೋಟಕ ವಿಚಾರಗಳು ಬೆಳಕಿಗೆ ಬಂದಿವೆ. ಸೋಮ ಎಂಬಾತನ ಆಪ್ತೆ ಪುಷ್ಪಾ ಎಂಬಾಕೆ ರಾಜೇಂದ್ರ ಆಪ್ತ ರಾಕಿ ಜತೆ ನಡೆಸಿದ ಸಂಭಾಷಣೆ ಲಭ್ಯವಾಗಿದೆ. ಜೀವ ಹೋದ್ರೂ ಬಾಯ್ಬಿಡಲ್ಲ, ಬಾಸ್‌ಗಾಗಿ ಜೀವನ ಪೂರ್ತಿ ಜೈಲಲ್ಲಿರ್ತಾನೆ'' ಇತ್ಯಾದಿಯಾಗಿ ಮಹಿಳೆ ಆಡಿರುವ ಮಾತುಗಳು ಆಡಿಯೋದಲ್ಲಿವೆ. ಎಂಎಲ್‌ಸಿ ರಾಜೇಂದ್ರ ಅವರು ಕೊಲೆ ಯತ್ನದ ಬಾಂಬ್ ಸಿಡಿಸಿದ್ದಾರೆ. ಈ ಪ್ರಕರಣ ಈಗಾಗಲೇ ದೂರು ದಾಖಲಾಗಿ ಎಫ್‌ಐಆರ್ ಕೂಡ ಆಗಿದೆ. ಈ ಬಗ್ಗೆ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಶಾಕಿಂಗ್ ವಿಚಾರಗಳು ತಿಳಿದುಬಂದಿದೆ.

ಇದೀಗ ರಾಜೇಂದ್ರ ಅವರ ಹತ್ಯೆಗೆ ಸಂಬಂಧಿಸಿದ್ದು ಎನ್ನಲಾದ ಆಡಿಯೋ ಸಿಕ್ಕಿದೆ. ಇದರಲ್ಲಿ ರಾಜೇಂದ್ರ ಅವರ ಕೊಲೆ ನಡೆಸುವ ಸಂಬಂಧ ಸ್ಫೋಟಕ ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ. ಇದರಲ್ಲಿ ಮಹಿಳೆಯೊಬ್ಬರು ಮಾತನಾಡಿದ್ದಾರೆ.

ರಾಜೇಂದ್ರ ಅವರ ಸುಪಾರಿಗೆ ಸಂಚು ರೂಪಿಸಿದ್ದು ಎನ್ನಲಾದ ಆಡಿಯೋದಲ್ಲಿ ಸ್ಫೋಟಕ ಸಂಗತಿಗಳ ಬಗ್ಗೆ ಚರ್ಚೆಯಾಗಿದೆ. ಸುಪಾರಿಯ ಇಂಚಿಂಚೂ ಮಾಹಿತಿ ಇದರಲ್ಲಿದ್ದು, ರಾಜೇಂದ್ರ ಅವರಿಗೂ ಈ ಆಡಿಯೋ ಸಿಕ್ಕಿದ ನಂತರವೇ ತಮ್ಮ ಮೇಲೆ ಕೊಲೆಗೆ ಸಂಚು ನಡೆದಿರುವುದು ಗೊತ್ತಾಗಿದೆ. ಇದೇ ಆಡಿಯೋ ಅನ್ನು ರಾಜೇಂದ್ರ ಅವರು ಪೊಲೀಸರಿಗೆ ಸಲ್ಲಿಸಿ ದೂರು ನೀಡಿದ್ದಾರಂತೆ. ಈ ಆಡಿಯೋದಲ್ಲಿ ಪುಷ್ಪಾ ಎಂಬ ಮಹಿಳೆ ಹಾಗೂ ರಾಕಿ ಎಂಬುವವರ ನಡುವೆ ಸಂಭಾಷಣೆ ನಡೆದಿದೆ. ಈಗಾಗಲೇ ಸುಪಾರಿ ಸಂಬಂಧ ಎ1 ಆರೋಪಿಯಾಗಿರುವ ಸೋಮನ ಆಪ್ತೆಯೇ ಈ ಮಹಿಳೆ ಎನ್ನಲಾಗಿದೆ. ಸುಪಾರಿ ಬಗ್ಗೆ ಮಹಿಳೆ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ರಾಜೇಂದ್ರ ಅವರನ್ನು ಕೊಲೆ ಮಾಡಲು ಸುಪಾರಿ ಪಡೆದಿದ್ದಾಗಿ ಆರೋಪಿ ಸೋಮ ಈ ಮಹಿಳೆಗೆ ಹೇಳಿಕೊಂಡಿದ್ದ. ಬಳಿಕ ಈಕೆ ಸುಪಾರಿ ಬಗ್ಗೆ ಹೆಚ್ಚಿನ ಮಾಹಿತಿ ಪಡೆದಿದ್ದರು. ಬಳಿಕ ಈ ಎಲ್ಲಾ ವಿಚಾರ ತಿಳಿದುಕೊಂಡು ಅದನ್ನ ರಾಜೇಂದ್ರ ಅವರ ಗಮನಕ್ಕೆ ತರಲು ರಾಕಿ ಎಂಬ ಯುವಕನ ಜೊತೆ ಮಾತನಾಡಿದ್ದಾರೆ ಎನ್ನಲಾದ ವಿಡಿಯೋ ಮಾಧ್ಯಮಗಳಿಗೆ ಲಭ್ಯವಾಗಿದೆ. ಇನ್ನು ಪುಷ್ಪಾ ಎನ್ನುವ ಮಹಿಳೆ ಮಾತನಾಡಿದ್ದನ್ನ ರಾಕಿ ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದ. ಇದಾದ ನಂತರ ರಾಜೇಂದ್ರ ಅವರಿಗೆ ಆಡಿಯೋ ತಲುಪಿಸಲಾಗಿತ್ತು. ಈ ಆಡಿಯೋ ಕೇಳಿ ರಾಜೇಂದ್ರ ಅವರು ಶಾಕ್ ಆಗಿದ್ದರು. ಬಳಿಕ ಸೀದಾ ಹೋಗಿ ತುಮಕೂರು ಎಸ್‌ಪಿಗೆ ದೂರು ಕೂಡ ಕೊಟ್ಟಿದ್ದರು.

ಆಡಿಯೋದಲ್ಲಿ ಸುಪಾರಿ ಬಗ್ಗೆ ಮಾತನಾಡಿದ್ದ ಮಹಿಳೆ, ಕಳೆದ ನವೆಂಬರ್‌ನಲ್ಲೇ ರಾಜೇಂದ್ರ ಅವರ ಮಗಳ ಹುಟ್ಟುಹಬ್ಬಕ್ಕೆ ಜೈಪುರದ ಇಬ್ಬರು ಹುಡುಗರು ಬಂದಿದ್ದರು. ಆಗಲೇ ಸೋಮ ಹತ್ಯೆಗೆ ಯತ್ನ ನಡೆಸಿದ್ದ. ಕೊಲೆ ಸುಪಾರಿಗೆ ಸೋಮನಿಗೆ 5 ಲಕ್ಷ ಹಣ ಬಂದಿದ್ದು ನಿಜ, ಬೇಕಾದ್ರೆ ಸೋಮನ್ನ ಪೊಲೀಸರು ವಿಚಾರಿಸಿದ್ರೆ ಎಲ್ಲಾ ಹೊರಬರುತ್ತೆ. ಈ ವಿಚಾರನ ನಾನೇ ಬೇಕಾದ್ರೆ ರಾಜೇಂದ್ರ ಅವರಿಗೆ ಹೇಳ್ತೀನಿ. ನನ್ನ ಅವರ ಬಳಿ ಕರ್ಕೊಂಡು ಹೋಗು ಎಂದು ರಾಕಿಗೆ ಕೇಳಿದ್ದಾರೆ.

### ಮೂವರನ್ನು ವಶಕ್ಕೆ ಪಡೆದು ವಿಚಾರಣೆ!

ಆಡಿಯೋ ಬಗ್ಗೆ ವಿಚಾರಣೆಗೆ ಮಾಡಲು ಪುಷ್ಪ ಎಂಬ ಮಹಿಳೆಯನ್ನು ತನಿಖಾ ತಂಡ ವಶಕ್ಕೆ ಪಡೆದಿದೆ. ಪುಷ್ಪ ಎಂಬ ಮಹಿಳೆ ಜೊತೆ ಮಾತಾಡಿದ್ದ ಮತ್ತಿಬ್ಬರು ಯುವಕರನ್ನು ಕೂಡ ಪೊಲೀಸರು ಬಂಧಿಸಿದ್ದಾರೆ. ರಾಜೇಂದ್ರ ಹತ್ಯೆಗೆ ಸುಫಾರಿ ನೀಡಿದ ವಿಚಾರಕ್ಕೆ ಶಂಕಿತರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ತೀವ್ರ ವಿಚಾರಣೆ ನಡೆಸುತ್ತಿದ್ದಾರೆ. ಈ ಮಹಿಳೆಯ ಆಡಿಯೋ ಆಧರಿಸಿ ದೂರು ದಾಖಲಿಸಿದ **ಎಂಎಲ್ಸಿ ರಾಜೇಂದ್ರ:** ಸುಪಾರಿ ಸಂಚಿನ ಇಂಚಿಂಚು ಮಾಹಿತಿಯ ಆಡಿಯೋದಿಂದಲೇ ಕೊಲೆ ಸುಪಾರಿಯ ವಿಚಾರ ರಾಜೇಂದ್ರಗೆ ತಿಳಿದಿದೆ. ದೂರಿನ ಜೊತೆ ಪೆನ್ ಡ್ರೈವ್ ನೀಡಲಾಗಿದ್ದು, ಅದರಲ್ಲಿ ರಾಜೇಂದ್ರ ಹತ್ಯೆಗೆ ಸುಪಾರಿ ನೀಡಿರುವ ಬಗ್ಗೆ ಮಹಿಳೆ ಪುಷ್ಪ ಅವರಿಗೆ ಆರೋಪಿ ರಾಕಿ ಇಂಚಿಂಚು ವಿವರಿಸಿದ್ದಾರೆ. ಇದೇ ಮಹಿಳೆಯ ಆಡಿಯೋ ಆಧರಿಸಿ ಎಂಎಲ್ಸಿ ರಾಜೇಂದ್ರ ದೂರು ದಾಖಲಿಸಿದ್ದಾರೆ.

### ಎ1 ಆರೋಪಿ ಜೈಪುರ ಸೋಮನಿಗೆ ಪುಷ್ಪ ಪರಿಚಯ

ಡಿ.ಪುಷ್ಪ ಹಾಗೂ ರಾಕಿ ಎನ್ನುವವರ ನಡುವೆ ನಡೆದ ಸಂಭಾಷಣೆಯ ಆಡಿಯೋ ಅದಾಗಿದ್ದು, ಪ್ರಕರಣದ ಎ1 ಆರೋಪಿ ಸೋಮನ ಪ್ಲಾನ್ ಬಗ್ಗೆ ಮಹಿಳೆ ಇಂಚಿಂಚು ವಿವರಿಸಿದ್ದಾರೆ. ಆರೋಪಿ ಜೈಪುರ ಸೋಮನಿಗೆ ಪುಷ್ಪ ಪರಿಚಯಸ್ಥಳಾಗಿದ್ದಾಳೆ. ರಾಜೇಂದ್ರರನ್ನ ಹತ್ಯೆ ಮಾಡಲು ಸುಪಾರಿ ಪಡೆದಿರೋದಾಗಿ ಸೋಮ, ಪುಷ್ಪಾಳ ಬಳಿ ಹೇಳಿಕೊಂಡಿದ್ದನಂತೆ. ಆ ಬಳಿಕ ಸುಪಾರಿಯ ಬಗ್ಗೆ ಪುಷ್ಪ ಹೆಚ್ಚಿನ ಮಾಹಿತಿ ಕಲೆಹಾಕಿದ್ದಾರೆ ಎಂದು ಹೇಳಲಾಗಿದೆ. ಸೋಮನ ಜೊತೆಗಿದ್ದುಕೊಂಡೇ ಪುಷ್ಪ ಅವರು ಕೊಲೆ ಸಂಚಿನ ಮಾಹಿತಿ ಕಲೆಹಾಕಿದ್ದರಂತೆ ಆಬಳಿಕ ಕೊಲೆ ಸಂಚಿನ ವಿಚಾರವನ್ನ ರಾಜೇಂದ್ರರಿಗೆ ತಿಳಿಸಲು ಪುಷ್ಪಾ ಪ್ಲಾನ್ ಮಾಡಿದ್ದಾರೆ. ರಾಜೇಂದ್ರಗೆ ವಿಚಾರ ಮುಟ್ಟಿಸಲು ರಾಕಿ ಎನ್ನುವ ಹುಡುಗನನ್ನ ಬಳಸಿಕೊಂಡಿದ್ದಾರೆ. ಕೊಲೆ ಸಂಚಿನ ಬಗ್ಗೆ ಪುಷ್ಪ ಹೇಳಿದ್ದನ್ನ ರಾಕಿ ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದಾರೆ. ಆ ಬಳಿಕ ರಾಜೇಂದ್ರಗೆ ಈ ಆಡಿಯೋ ತಲುಪಿಸಲಾಗಿದೆ.

1 ತುಮಕೂರಿನಲ್ಲಿ ಎಂಎಲ್ಸಿ ರಾಜೇಂದ್ರ ಅವರ ಹತ್ಯೆಗೆ ಸಂಚು ರೂಪಿಸಲಾಗಿತ್ತು

2 ಈ ಬಗ್ಗೆ ಆಡಿಯೋ ಒಂದು ಲಭ್ಯವಾಗಿದ್ದು, ಸಂಚಿನ ಬಗ್ಗೆ ಮಾಹಿತಿ ಬಹಿರಂಗವಾಗಿದೆ

3 ಪ್ರಕರಣದ ಎ1 ಆರೋಪಿ ಸೋಮನ ಯೋಜನೆಯ ಬಗ್ಗೆ ಪುಷ್ಪ ಎಂಬ ಮಹಿಳೆ ಆಡಿಯೋದಲ್ಲಿ ವಿವರಿಸಿದ್ದಾಳೆ.

### ಐವರ ವಿರುದ್ಧ ತನಿಖೆ

ಆಡಿಯೋ ಕೇಳಿ ಶಾಕ್ ಆದ ರಾಜೇಂದ್ರ, ತಕ್ಷಣ ಎಚ್ಚೆತ್ತುಕೊಂಡ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಆಡಿಯೋ ಬೆನ್ನತ್ತಿ ತನಿಖೆ ನಡೆಸುತ್ತಿದ್ದಾರೆ. ಫೋನ್ ಆಡಿಯೋದಲ್ಲಿ ಆರೋಪಿಗಳಾದ ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಪೊಲೀಸರು ಈ ಐವರ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ರಾಕಿ ಎಂಬಾತ ಪುಷ್ಪ ಎಂಬುವವರಿಂದ ಮಾಹಿತಿ ಪಡೆದಿದ್ದಾರೆ. ರಾಜೇಂದ್ರ ಅವರ ಮಗಳ ಹುಟ್ಟುಹಬ್ಬದ ಅಲಂಕಾರಕ್ಕೆ ಜೈಪುರದಿಂದ ಇಬ್ಬರು ಹುಡುಗರನ್ನು ಕರೆಸಲಾಗಿತ್ತು. ಅವರನ್ನು ಕಳುಹಿಸಿದ್ದು ಸೋಮ ಎಂದು ಪುಷ್ಪ ಹೇಳಿದ್ದಾರೆ. ಕಳೆದ ನವೆಂಬರ್‌ನಲ್ಲಿ ರಾಜೇಂದ್ರ ಅವರ ಹಿರಿಯ ಮಗಳ ಹುಟ್ಟುಹಬ್ಬ ನಡೆದಿತ್ತು. ಈ ಬಗ್ಗೆ ಆಡಿಯೊದಲ್ಲಿ ಮಾಹಿತಿ ಇದೆ. ಸೋಮನಿಗೆ 5 ಲಕ್ಷ ಹಣ ಬಂದಿರುವುದು ಸತ್ಯ ಎಂದು ಪುಷ್ಪ ಹೇಳಿದ್ದಾರೆ. ಪೊಲೀಸರು ವಿಚಾರಣೆ ನಡೆಸಿದರೆ ಎಲ್ಲವೂ ತಿಳಿಯುತ್ತದೆ. ರಾಜೇಂದ್ರ ಅವರ ಮುಂದೆಯೇ ತಾನು ಹೇಳುವುದಾಗಿ, ತನ್ನನ್ನು ಕರೆದುಕೊಂಡು ಹೋಗಿ ಎಂದು ಪುಷ್ಪ ಹೇಳಿದ್ದಾರೆ.

ಅಲ್ಲದೆ ಸೋಮ ಅವನ ಜೀವ ಹೋದ್ರೂ ಬಾಯಿ ಬಿಡೋದಿಲ್ಲ, ಅವನಿಗೆ ಎಲ್ಲಾ ಗೊತ್ತು, ಅವನ ಬಾಸ್‌ಗೋಸ್ಕರ ಜೈಲಿಗೆ ಬೇಕಾದ್ರೂ ಹೋಗಿ ಇದ್ದುಬಿಡುತ್ತಾನೆ. ಇದನ್ನೆಲ್ಲ ನಾನು ರಾಜೇಂದ್ರ ಅವರಿಗೆ ಹೇಳೇ ಹೇಳ್ತೀನಿ, ನಿಂಗ್ಯಾಕೆ ನನ್ನನ್ನ ಅವರ ಬಳಿ ಕರ್ಕೊಂಡು ಹೋಗು ಎಂದು ಮಾತನಾಡಿರುವುದು ಈ ಆಡಿಯೋ ದಲ್ಲಿದೆ.

## ಬಹು ನಿರೀಕ್ಷಿತ ನಮ್ಮ ಮೆಟ್ರೋ ಹಳದಿ ಮಾರ್ಗ ಆರಂಭ

### ಸಂಚಾರಕ್ಕೆ ಅಗತ್ಯವಿರುವ 2 ರೈಲುಗಳು ಕೂಡ ಆಗಮಿಸಿದ್ದು, ಇನ್ನೊಂದು ರೈಲು ಬಂದ ಕೂಡಲೇ ವಾಣಿಜ್ಯ ಸಂಚಾರ ಆರಂಭ

• ಉದಯವಾಹಿನಿ, ಬೆಂಗಳೂರು

ಬಹು ನಿರೀಕ್ಷಿತ ನಮ್ಮ ಮೆಟ್ರೋ ಮಾರ್ಗಗಳಲ್ಲಿ ಹಳದಿ ಮಾರ್ಗ (ಯೆಲ್ಲೋ ಲೈನ್) ಒಂದಾಗಿದೆ. ಆರ್‌ವಿ ರಸ್ತೆ - ಬೊಮ್ಮಸಂದ್ರ ನಡುವಿನ 18.8 ಕಿ.ಮೀ ಉದ್ದದ ಈ ಮಾರ್ಗದಲ್ಲಿ ಒಟ್ಟು 16 ನಿಲ್ದಾಣಗಳು ಬರಲಿವೆ. ಮಾರ್ಗವು ದಕ್ಷಿಣ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ವ್ಯಾಪಿಸಿದೆ. ಜತೆಗೆ ಗ್ರೀನ್‌ಲೈನ್ ಜತೆ ಸಂಪರ್ಕ ಹೊಂದಿರುವುದರಿಂದ ಈ ಮಾರ್ಗವು ದಕ್ಷಿಣ ಬೆಂಗಳೂರು ಜನರನ್ನು ನಗರ ಕೇಂದ್ರ ಭಾಗಕ್ಕೆ ಸಂಪರ್ಕ ಕಲ್ಪಿಸಲು ಸಹಕಾರಿಯಾಗಲಿದೆ.

ಈ ಮಾರ್ಗದ ಕಾಮಗಾರಿ ಈಗಾಗಲೇ ಪೂರ್ಣವಾಗಿದ್ದು, ರೈಲು ಸಂಚಾರ ಪ್ರಾಯೋಗಿಕ ಪರೀಕ್ಷೆಯೂ ಮುಕ್ತಾಯವಾಗಿದೆ. ಸಂಚಾರಕ್ಕೆ ಅಗತ್ಯವಿರುವ 2 ರೈಲುಗಳು ಕೂಡ ಆಗಮಿಸಿದ್ದು, ಇನ್ನೊಂದು ರೈಲು ಬಂದ ಕೂಡಲೇ ವಾಣಿಜ್ಯ ಸಂಚಾರ ಆರಂಭವಾಗಿದೆ.

ಹಳದಿ ಮಾರ್ಗಕ್ಕೆ ಸದ್ಯ 2 ರೈಲುಗಳು ಆಗಮಿಸಿದ್ದು, ಏಪ್ರಿಲ್ ಹಾಗೂ ಮೇನಲ್ಲಿ ಇನ್ನೆರಡು ರೈಲುಗಳು ಆಗಮಿಸಲಿವೆ. ಒಟ್ಟು ನಾಲ್ಕು ರೈಲು ಲಭ್ಯವಾದ ಕೂಡಲೇ ಅಂದರೆ, ಮೇನಲ್ಲಿ ವಾಣಿಜ್ಯ ಸಂಚಾರ ಆರಂಭಿಸುವ ಸಾಧ್ಯತೆ ಇದೆ.

**ಪ್ರಸ್ತುತ ಸ್ಥಿತಿಗತಿ ಏನು:** ಹಳೆ ಮಾರ್ಗದ ಪ್ರಯೋಗಿಕ ಪರೀಕ್ಷೆ ಮುಕ್ತಾಯವಾಗಿ ಪ್ರಮಾಣ ಪತ್ರವೂ ಬಂದಿದೆ. ರೈಲು ಪೂರೈಕೆಗೆ ಗುತ್ತಿಗೆ ಪಡೆದಿರುವ ಕಂಪನಿಯು ಸಿಆರ್‌ಆರ್‌ಸಿ ಚೀನಾದಿಂದ ಒಂದು ರೈಲು, ಕೊಲ್ಕತ್ತಾದಿಂದ ಜನವರಿ 6 ರಂದು 2ನೇ ರೈಲನ್ನು ಕಳುಹಿಸಿ ಕೊಟ್ಟಿದೆ. ಮೂರನೇ ರೈಲು ಫೆಬ್ರವರಿಯಲ್ಲಿ ಆಗಮಿಸಲಿದೆ.

**ವಾಣಿಜ್ಯ ಯಾವಾಗ ಆರಂಭ ಸಾಧ್ಯತೆ:** ಸಂಚಾರಕ್ಕೆ 3 ರೈಲುಗಳು ಅಗತ್ಯವಿದೆ. ಸದ್ಯ 2 ರೈಲು ಲಭ್ಯವಿದ್ದು, ಮತ್ತೊಂದು ರೈಲು ಬಂದ ಕೂಡಲೇ ವಾಣಿಜ್ಯ ಸೇವೆ ಆರಂಭವಾಗಲಿದೆ. ಅಂದಾಜು ಮಾರ್ಚ್ ಮೊದಲ ವಾರದಲ್ಲಿ ರೈಲು ಸಂಚಾರ ಆರಂಭವಾಗುವ ಸಾಧ್ಯತೆಗಳಿವೆ.

**3 ಲಕ್ಷಕ್ಕೂ ಅಧಿಕ ಮಂದಿ ಪ್ರಯಾಣಿಸುವ ಸಾಧ್ಯತೆ:** ಈ ಮಾರ್ಗದಲ್ಲಿ ಆರಂಭದಲ್ಲಿ ಅರ್ಧಗಂಟೆಗೆ ಒಮ್ಮೆ ರೈಲು ಚಲಿಸಲಿದೆ. ಆಗ ನಿತ್ಯ 50 ಸಾವಿರ ಜನರು ಪ್ರಯಾಣಿಸುವ ನಿರೀಕ್ಷೆ ಇದೆ. ಮುಂದಿನ ದಿನಗಳಲ್ಲಿ ರೈಲುಗಳು, ಟ್ರಿಪ್‌ಗಳ ಸಂಖ್ಯೆ ಹೆಚ್ಚಳವಾಗಿ ನಿತ್ಯ 3.5 ಲಕ್ಷ ಮಂದಿ ಪ್ರಯಾಣಿಸಬಹುದು ಎಂದು ಬಿಎಂಆರ್‌ಸಿಎಲ್ ಅಂದಾಜಿಸಿದೆ.

### ಹಳದಿ ಮಾರ್ಗದ ನಿಲ್ದಾಣಗಳು

- ಬೊಮ್ಮಸಂದ್ರ
- ಹೆಬ್ಬಗೋಡಿ
- ಹುಸ್ಕೂರ್ ರಸ್ತೆ
- ಇನ್ಫೋಸಿಸ್ ಫೌಂಡೇಶನ್
- ಕೋನಪ್ಪನ ಅಗ್ರಹಾರ
- ಎಲೆಕ್ಟ್ರಾನಿಕ್ ಸಿಟಿ
- ಬಿರಿಟೇನ ಅಗ್ರಹಾರ
- ಹೊಸ ರೋಡ್ ಸಿಂಗಸಂದ್ರ
- ಕೂಡ್ಲು ಗೇಟ್
- ಹೊಂಗಸಂದ್ರ
- ಬೊಮ್ಮನಹಳ್ಳಿ
- ಸೆಂಟ್ರಲ್ ಸಿಲ್ಕ್ ಬೋರ್ಡ್
- ಬಿಟಿಎಂ ಲೇಔಟ್
- ಜಯದೇವ ಆಸ್ಪತ್ರೆ
- ರಾಗಿ ಗುಡ್ಡ ದೇವಸ್ಥಾನ
- ಆರ್.ವಿ (ರಾಷ್ಟ್ರೀಯ ವಿದ್ಯಾಲಯ) ರಸ್ತೆ



### ಈ ಮಾರ್ಗದ ಅನುಕೂಲಗಳೇನು

- ಬೆಂಗಳೂರಿನ ಐಟಿ ಹಬ್ ಎಲೆಕ್ಟ್ರಾನಿಕ್ ಸಿಟಿಯಿಂದ ಬೆಂಗಳೂರಿನ ಕೇಂದ್ರ ಭಾಗಕ್ಕೆ ತ್ವರಿತ ಸಂಪರ್ಕ ಕಲ್ಪಿಸಲಿದೆ
- ಮೆಟ್ರೋ ಬಳಸುವುದರಿಂದ ಈ ಮಾರ್ಗದಲ್ಲಿ ವಾಹನ ಸಂಚಾರ ಕಡಿಮೆಯಾಗಿ ಟ್ರಾಫಿಕ್ ದಟ್ಟಣೆ ತಗ್ಗಲಿದೆ.
- ಎಚ್‌ಎಸ್‌ಆರ್ ಲೇಔಟ್, ಬಿಟಿಎಂ, ಸಿಂಗಸಂದ್ರ, ಬೊಮ್ಮನಹಳ್ಳಿ, ಜಯನಗರ, ತಿಲಕ್‌ನಗರ ಸೇರಿದಂತೆ ಹಲವು ವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲಿದೆ.
- ಪ್ರತಿಷ್ಠಿತ ಜಯದೇವ ಆಸ್ಪತ್ರೆ, ಇನ್ಫೋಸಿಸ್‌ಗೆ ತೆರಳುವ ಸಾವಿರಾರು ಜನರಿಗೆ ಅನುಕೂಲವಾಗಲಿದೆ.
- ಬೆಂಗಳೂರಿನಿಂದ ತಮಿಳುನಾಡ (ಹೊಸೂರು) ಭಾಗಕ್ಕೆ ತೆರಳುವ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

| 3 ಇಂಟರ್‌ಚೇಂಜ್ ನಿಲ್ದಾಣ | | |
|---|---|---|
| ನಿಲ್ದಾಣ | ಮಾರ್ಗ | ಎಲ್ಲಿಂದ - ಎಲ್ಲಿಗೆ |
| ರಾಷ್ಟ್ರೀಯ ವಿದ್ಯಾಲಯ ರಸ್ತೆ (ಆರ್‌ವಿ ರೋಡ್) | ಹಸಿರು ಮಾರ್ಗ | ರೇಷ್ಮೆ ಸಂಸ್ಥೆ - ಮಾದಾವರ |
| ಜಯದೇವ ಆಸ್ಪತ್ರೆ | ಗುಲಾಬಿ ಮಾರ್ಗ | ನಾಗಾವರ - ಕಾಳೇನ ಅಗ್ರಹಾರ |
| ಸಿಲ್ಕ್ ಬೋರ್ಡ್ | ನೀಲಿ ಮಾರ್ಗ (2ಎ) | ಸಿಲ್ಕ್‌ಬೋರ್ಡ್ - ಕೆಆರ್ ಪುರಂ |



ಈ ದಿನದ ದರ ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,191/Gram24ct ₹8,425/Gram22ct ಬೆಳ್ಳಿ: ₹104.00/Gram

ಅಂತರಾಳದಿಂದ... EDITORIAL

# ನ್ಯಾಯ ವ್ಯವಸ್ಥೆಯೇ
## ವಿಶ್ವಾಸಾರ್ಹತೆ ಕಳೆದುಕೊಂಡರೆ

ಮಾರ್ಚ್ 14ರಂದು ದಿಲ್ಲಿ ಹೈಕೋರ್ಟ್ ನ್ಯಾಯಾಧೀಶ ಯಶವಂತ್ ವರ್ಮಾ ಅವರ ಮನೆಯಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿಶಾಮಕ ದಳ ಅದನ್ನು ನಂದಿಸಲು ಹೋಗಿತ್ತು. ಈ ಸಂದರ್ಭದಲ್ಲಿ ಸಿಬ್ಬಂದಿಗೆ ಭಾರೀ ಪ್ರಮಾಣದಲ್ಲಿ ನೋಟಿನ ಕಟ್ಟುಗಳು ಕಾಣಿಸಿಕೊಂಡಿದ್ದವು. ನಿವಾಸಕ್ಕೆ ಬಿದ್ದ ಬೆಂಕಿಯೇನೋ ಅಗ್ನಿಶಾಮಕ ದಳದವರು ನಂದಿಸಿದರು. ಆದರೆ ಅಲ್ಲಿ ಕಂಡ ನೋಟುಗಳ ಕಂತೆ, ಬೆಂಕಿಯ ರೂಪದಲ್ಲಿ ಇಡೀ ನ್ಯಾಯ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಸುಡತೊಡಗಿತು. ಸುದ್ದಿ ಮಾಧ್ಯಮಗಳಲ್ಲಿ ತೀವ್ರ ಚರ್ಚೆಗೆ ಒಳಗಾಗುತ್ತಿರುವಂತೆಯೇ ಕೆಲವರು ನ್ಯಾಯಾಧೀಶರ ಪರವಾಗಿ ವಕಾಲತ್ತು ಆರಂಭಿಸಿದರೆ, ಇನ್ನು ಕೆಲವರು ಯಶವಂತ್ ವರ್ಮಾ ಅವರ ನೋಟಿನ ಕಂತೆಯ ಹಿಂದಿರುವ ರಾಜಕಾರಣಿಗಳ ಹೆಸರುಗಳನ್ನು ಉಲ್ಲೇಖಿಸತೊಡಗಿದರು. ಪ್ರಕರಣ ಸುಪ್ರೀಂಕೋರ್ಟ್ ಮುಂದೆ ಬಂದು ನಿಂತಿತು. ತನ್ನ ಮಾನ ಉಳಿಸಿಕೊಳ್ಳಲು ಸುಪ್ರೀಂಕೋರ್ಟ್ ಅಂತರಿಕ ತನಿಖೆ ನಡೆಸಲು ಮೂವರ ಸಮಿತಿಯೊಂದನ್ನು ನೇಮಕ ಮಾಡಿತು. ದಿಲ್ಲಿ ಹೈಕೋರ್ಟಿನ ಮುಖ್ಯನ್ಯಾಯಮೂರ್ತಿ ಈ ಸಂಬಂಧ ವರ್ಮಾ ಅವರನ್ನು ವಿಚಾರಣೆ ನಡೆಸಿ, ವರದಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದರು.

**ಒಂದು ಕಾಲದಲ್ಲಿ ಸುಪ್ರೀಂಕೋರ್ಟ್, ಹೈಕೋರ್ಟ್‌ಗಳಲ್ಲಿ ನ್ಯಾಯಾಧೀಶರು ನೀಡುವ ತೀರ್ಪುಗಳು ಚರ್ಚೆಗೊಳಗಾಗುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ತೀರ್ಪುಗಳಿಗಿಂತ ತೀರ್ಪುಗಳನ್ನು ನೀಡುವ ನ್ಯಾಯಾಧೀಶರೇ ಹೆಚ್ಚು ಚರ್ಚೆಯಲ್ಲಿದ್ದಾರೆ. ಹೆಚ್ಚಿನ ತೀರ್ಪುಗಳಲ್ಲಿ ಸಂವಿಧಾನದ ಹಿತಾಸಕ್ತಿಗಿಂತ ನ್ಯಾಯಾಧೀಶರ ವೈಯಕ್ತಿಕ ಹಿತಾಸಕ್ತಿಗಳೇ ಮುಂಚೂಣಿಯಲ್ಲಿರುತ್ತವೆ. ಪರಿಣಾಮವಾಗಿ ಸಣ್ಣ ಕೋರ್ಟ್‌ನಲ್ಲಿ ನ್ಯಾಯಾಧೀಶರು ನೀಡುವ ತೀರ್ಪನ್ನು ಆಕ್ಷೇಪಿಸಿ ಉನ್ನತ ನ್ಯಾಯಾಲಯಗಳು ಖಂಡಿಸುವುದು, ಕಳವಳ ವ್ಯಕ್ತಪಡಿಸುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಇದೀಗ, ಹೈಕೋರ್ಟ್ ನ್ಯಾಯಾಧೀಶರೊಬ್ಬರ ನಿವಾಸದಲ್ಲಿ ಕೋಟ್ಯಂತರ ರೂಪಾಯಿ ಪತ್ತೆಯಾಗಿರುವ ಆರೋಪ ನ್ಯಾಯ ವ್ಯವಸ್ಥೆಯನ್ನು ತಲ್ಲಣಕ್ಕೀಡು ಮಾಡಿದೆ.**



ಹೈಕೋರ್ಟ್ ನ್ಯಾಯಮೂರ್ತಿಗಳ ಮುಂದೆ ವರ್ಮಾ ಆರೋಪವನ್ನು ಸಂಪೂರ್ಣವಾಗಿ ನಿರಾಕರಿಸಿದ್ದರು. ಇದೇ ಸಂದರ್ಭದಲ್ಲಿ ಅಗ್ನಿಶಾಮಕ ದಳದ ಅಧಿಕಾರಿಗಳು ಎರಡೇ ದಿನದಲ್ಲಿ ತನ್ನ ಹೇಳಿಕೆಯನ್ನು ಬದಲಿಸಿದರು. ಹಾಗಾಗಿ ಇಡೀ ಪ್ರಕರಣ ಗೊಂದಲದ ಗೂಡಾಗಿದೆ. ವರ್ಮಾರನ್ನು ದಿಲ್ಲಿ ಹೈಕೋಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾಯಿಸಲು ಕೊಲಿಜಿಯಂ ಶಿಫಾರಸು ಮಾಡಿದ್ದು, ಕಾನೂನು ಸಚಿವಾಲಯವು ಈ ಸಂಬಂಧ ಅಧಿಸೂಚನೆಯನ್ನು ಹೊರಡಿಸಿದೆ. ಹೈಕೋರ್ಟ್ ನ್ಯಾಯಾಧೀಶರೊಬ್ಬರ ನಿವಾಸದಲ್ಲಿ ಕೋಟ್ಯಂತರ ರೂಪಾಯಿ ಪತ್ತೆಯಾಗಿದೆ ಎನ್ನುವ ಆರೋಪ ಬಹಳ ಗಂಭೀರವಾದುದು. ಆದರೆ ಅದಕ್ಕೆ ಬೇಕಾದ ಸಾಕ್ಷ್ಯಗಳು ಎಷ್ಟರಮಟ್ಟಿಗೆ ಗಟ್ಟಿಯಾಗಿವೆ ಎನ್ನುವುದು ಇನ್ನಷ್ಟೇ ಗೊತ್ತಾಗಬೇಕು. ಆದರೆ ಬರೇ ವದಂತಿಯನ್ನು ಆಧಾರವಾಗಿಟ್ಟುಕೊಂಡು ಸುಪ್ರೀಂಕೋರ್ಟ್ ಆಂತರಿಕ ಸಮಿತಿಯೊಂದನ್ನು ರಚಿಸಿ ತನಿಖೆಗೆ ಆದೇಶಿಸುತ್ತಿರಲಿಲ್ಲ. ಆದುದರಿಂದ ಆರೋಪವನ್ನು ಸಮರ್ಥಿಸಲು ಬೇಕಾದ ಕೆಲವು ಸಾಕ್ಷ್ಯಗಳಾದರು ಸುಪ್ರೀಂಗೆ ಸಿಕ್ಕಿರಬೇಕು. ತನಿಖೆ ಮುಗಿದು ಸಮಿತಿ ಸತ್ಯಸತ್ಯಾತೆಯನ್ನು ಬಹಿರಂಗ ಪಡಿಸುವವರೆಗೂ ವರ್ಮಾ ಅವರ ವಿಶ್ವಾಸಾರ್ಹತೆ ಪ್ರಶ್ನೆಗೊಳಗಾಗುತ್ತಲೇ ಇರುತ್ತವೆ. ಇದೇ ಸಂದರ್ಭದಲ್ಲಿ ಅಲಹಾಬಾದ್, ಗುಜರಾತ್, ಕೇರಳ, ಕರ್ನಾಟಕ, ಲಕ್ನೋ ಹೈಕೋರ್ಟ್ ಬಾರ್ ಅಸೋಸಿಯೇಶನ್‌ಗಳು ಸುಪ್ರೀಂಕೋರ್ಟ್‌ಗೆ ಮನವಿ ನೀಡಿದ್ದು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿವೆ. ಈ ಸಂಬಂಧ ವರ್ಮಾ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಆಗ್ರಹಿಸಿವೆ. ಅಲಹಾಬಾದ್ ಹೈಕೋರ್ಟ್ ನ್ಯಾಯವಾದಿಗಳಂತೂ, ನಮ್ಮ ಕೋರ್ಟಿಗೆ ವರ್ಮಾ ಅವರನ್ನು ವರ್ಗಾಯಿಸಿರುವುದು ಎಷ್ಟು ಸರಿ' ಎಂದು ಕೇಳಿ, ಬೀದಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ದಿಲ್ಲಿ ಹೈಕೋರ್ಟ್‌ನಲ್ಲಿ ಕೆಲಸ ಮಾಡಲು ಅನರ್ಹವಾಗುವವರು, ಅಲಹಾಬಾದ್ ಹೈಕೋರ್ಟ್‌ನಲ್ಲಿ ಕೆಲಸ ಮಾಡಲು ಅರ್ಹರಾಗುವುದು ಹೇಗೆ ಎಂದು ಅವರು ಕೇಳುತ್ತಿದ್ದಾರೆ. ದಿಲ್ಲಿ ಹೈಕೋರ್ಟ್‌ಗೆ ಬೇಡವಾದುದನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾಯಿಸಲು, ನಮ್ಮ ಕೋರ್ಟ್ ಕಸದ ಬುಟ್ಟಿಯೇ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನ್ಯಾಯವಾದಿಗಳು ಮತ್ತು ನ್ಯಾಯಾಧೀಶರ ನಡುವಿನ ಸಂಘರ್ಷಕ್ಕೂ ಇದು ಕಾರಣವಾಗಿದೆ. ಸದ್ಯಕ್ಕೆ ವರ್ಮಾ ಅವರನ್ನು ಅಲಹಾಬಾದ್ ಹೈಕೋರ್ಟಿಗೆ ಸರಕಾರ ವರ್ಗಾಯಿಸಿದೆಯಾದರೂ, ಅವರು ನ್ಯಾಯ ಕಲಾಪಗಳಲ್ಲಿ ಭಾಗವಹಿಸಿದರೆ ಅದರಿಂದ ತೀರ್ಪಿನ ಮೇಲೆ ಪರಿಣಾಮಗಳಾಗುವುದಿಲ್ಲವೇ ಎನ್ನುವ ಪ್ರಶ್ನೆಗಳನ್ನು ನ್ಯಾಯವಾದಿಗಳೇ ಕೇಳುತ್ತಿರುವುದರಿಂದ, ಸುಪ್ರೀಂಕೋರ್ಟ್‌ಗೊಂದಲವನ್ನು ನಿವಾರಿಸಬೇಕಾಗಿದೆ. ನ್ಯಾಯವಾದಿಗಳೇ ಕೇಳಿಕೊಳ್ಳುವಂತೆ, ಕೋಟ್ಯಂತರ ರೂಪಾಯಿ ಹೈಕೋರ್ಟ್ ನ್ಯಾಯಾಧೀಶರ ನಿವಾಸದಲ್ಲಿ ಹೇಗೆ ಬಂತು ಎನ್ನುವುದು ಇತ್ಯರ್ಥವಾಗುವವರೆಗೆ, ಅವರನ್ನು ನ್ಯಾಯ ಕಲಾಪದಲ್ಲಿ ಮುಂದುವರಿಸಿದರೆ ಅದು ತಪ್ಪು ಸಂದೇಶವನ್ನು ನೀಡುತ್ತದೆ. ಮಾತ್ರವಲ್ಲ ಒಂದು ವೇಳೆ ತನಿಖೆಯಿಂದ ಹಣ ಅಲ್ಲಿ ಇದ್ದುದು ನಿಜ ಎನ್ನುವುದು ಬೆಳಕಿಗೆ ಬಂದದ್ದೇ ಆದರೆ, ಅವರು ಈವರೆಗೆ ಕೊಟ್ಟಿರುವ ತೀರ್ಪುಗಳು ಪ್ರಶ್ನೆಗೊಳಪಡುತ್ತವೆ. ತನಿಖೆ ಪೂರ್ಣವಾಗಿ ಮುಗಿದು ಅವರು ನಿರಪರಾಧಿ ಎನ್ನುವುದು ಘೋಷಣೆಯಾಗುವವರೆಗೂ ಅವರನ್ನು ರಜೆಯಲ್ಲಿ ಕಳುಹಿಸುವುದು ಸೂಕ್ತವಾದುದು. ಸ್ವತಃ ಭ್ರಷ್ಟತೆಯ ಆರೋಪವನ್ನು ಹೊತ್ತ ನ್ಯಾಯಾಧೀಶನೊಬ್ಬ ತನ್ನ ಮುಂದೆ ಬಂದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳಿಗೆ ಯಾವ ನೈತಿಕತೆಯ ತಳಹದಿಯ ಮೇಲೆ ತೀರ್ಪು ನೀಡಬಲ್ಲ ಆರೋಪ ಸಾಬೀತಾಗಿಲ್ಲ ಎನ್ನುವುದು ನಿಜವೇ ಆಗಿದ್ದರೂ, ಆರೋಪ ಸಾಬೀತಾದರೆ ನೀಡಿದ ತೀರ್ಪುಗಳ ಸ್ಥಿತಿ ಏನಾಗಬೇಕು ಇಂತಹ ಪ್ರಶ್ನೆ ಹಲವು ನ್ಯಾಯಾಧೀಶರ ಬಗ್ಗೆ ತಲೆಯೆತ್ತಿದೆ.

---

# ರಾಮಾಯಣ



ಲಕ್ಷ್ಮಣನು ವನವಾಸಕ್ಕೆ ಬರುವುದನ್ನು ಶ್ರೀರಾಮನು ಒಪ್ಪಿದ್ದು

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ನೀನು ಮಹಾ ಪರಾಕ್ರಮಿಯು; ನನ್ನ ಒಡಹುಟ್ಟಿದವನು; ನನ್ನ ಪ್ರಾಣಕ್ಕೆ ಸಮಾನನು. ಆದರೆ ನಾನು ವನಕ್ಕೆ ಹೋಗಿ ನೀನೂ ಇಲ್ಲಿಲ್ಲದಿದ್ದರೆ ಕೌಸಲಾದೇವಿಯನ್ನೂ ಸುಮಿತ್ರಾ ದೇವಿಯನ್ನೂ ರಕ್ಷಿಸುವವರಾರು ಭರತನು ರಾಜ್ಯಾಧಿಪತ್ಯವನ್ನು ಮಾಡಿಕೊಂಡು ತನ್ನ ತಾಯಿಯಾದ ಕೈಕೇಯಾದೇವಿಯ ವಶನಾಗಿ ಆ ದೇವಿಯು ಹೇಳುವಹಾಗೆ ಕೇಳಿಕೊಂಡು ಮತ್ತೊಬ್ಬರನ್ನು ವಿಚಾರಿಸದೆ ಇರಬಹುದು. ಆದಕಾರಣ ನೀನು ಮಹಾರಾಜನ ಅಪ್ಪಣೆಯಿಂದಾದರೂ ಕೌಸಲ್ಯಾದೇವಿಯನ್ನೂ ಸುಮಿತ್ರಾದೇವಿಯನ್ನೂ ರಕ್ಷಿಸಿಕೊಂಡಿರು. ನನ್ನ ಮಾತನ್ನು ಕೇಳು. ನೀನು ನನಗೆ ಪ್ರಿಯನಾದವನು, ಮಗನಿಗೆ ತಾಯಿ ತಂದೆಗಳ ಸೇವೆಯನ್ನು ಮಾಡುವುದೇ ಧರ್ಮ, ಆದಕಾರಣ ನೀನು ನನ್ನ ಮಾತಿನಂತೆ ತಾಯಿತಂದೆಗಳ ಸೇವೆಯನ್ನು ಮಾಡಿಕೊಂಡು ಸುಖವಾಗಿರು. ನಾವಿಬ್ಬರೂ ಹೋದರೆ ಕೌಸಲ್ಯಾದೇವಿಗೂ ಸುಮಿತ್ರಾದೇವಿಗೂ ಸುಖವಿಲ್ಲ ಎಂದು ನುಡಿದನು. ಲಕ್ಷ್ಮಣನು ಅತಿವಿನಯಗೂಡಿದ ಮೃದುವಚನಗಳಿಂದ ಅಣ್ಣನನ್ನು ಕುರಿತು ಹೀಗೆಂದನು: ಅಣ್ಣ, ನಿನ್ನ ಪ್ರಭಾವದಿಂದ ಭರತನೇ ಕೌಸಲ್ಯಾದೇವಿಯನ್ನೂ ಸುಮಿತ್ರಾದೇವಿಯನ್ನೂ ರಕ್ಷಿಸುವನು. ಈ ವಿಷಯದಲ್ಲಿ ಸಂಶಯವಿಲ್ಲ. ಭರತನು ರಕ್ಷಿಸದ ಪಕ್ಷದಲ್ಲಿ ಕೌಸಲ್ಯಾದೇವಿಯು ನಮ್ಮಂಥ ಸಾವಿರ ಮಂದಿಯನ್ನು ರಕ್ಷಿಸಬಲ್ಲಳು. ಆ ದೇವಿಗೆ ಉಂಬಳಿಯಾಗಿ ಸಾವಿರ ಗ್ರಾಮಗಳು ಕೊಡಲ್ಪಟ್ಟಿವೆ. ಅವುಗಳಿಂದ ಕೌಸಲ್ಯಾದೇವಿಯು ತನ್ನನ್ನು ರಕ್ಷಿಸಿಕೊಂಡು ನಮ್ಮಂಥವರನೇಕಮಂದಿಯನ್ನೂ ರಕ್ಷಿಸುವಳು. ನೀನು ನನ್ನನ್ನು ಸೇವಕನನ್ನಾಗಿ ಭಾವಿಸು.ನಾನು ನಿನ್ನ ಸೇವೆಯನ್ನು ಮಾಡಿ ಕೃತಾರ್ಥನಾಗುವನು. ಬಿಲ್ಲು ಬಾಣಗಳನ್ನು ಧರಿಸಿಕೊಂಡು ವನದಲ್ಲಿ ಗೆಡ್ಡೆ ಗೆಣಸುಗಳನ್ನು ತರುವುದಕ್ಕೆ ಹಾರೆ ಮಕ್ಕರಿಗಳನ್ನು ತೆಗೆದುಕೊಂಡು ನಿಮ್ಮ ಮುಂದೆ ನಡೆಯುವೆನು. ವನದಲ್ಲಿ ದೇವಪೂಜೆ ಅಗ್ನಿ ಹೋತ್ರಗಳಿಗೂ ಬರುವ ಅತಿಥಿಗಳ ಸತ್ಕಾರಕ್ಕೂ ಯೋಗ್ಯವಾಗಿ ವನದಲ್ಲಿರುವ ಕಂದ ಮೂಲ ಫಲಗಳನ್ನು ತರುವೆನು. ನೀನು ಪರ್ವತದ ತಪ್ಪಲುಗಳಲ್ಲಿಯೂ ಪುಣ್ಯವೃಕ್ಷಗಳ ನೆಳಲುಗಳಲ್ಲಿಯೂ ಸೀತಾದೇವಿಯೊಡನೆ ವಿಹರಿಸುತ್ತಿರಬಹುದು. ನಾನು ಜಾಗ್ರತ್ಸ್ವಪ್ನಾವಸ್ಥೆಗಳಲ್ಲಿಯೂ ಎಡೆಬಿಡದೆ ನಿನ್ನ ಸೇವೆಯನ್ನು ಮಾಡುವೆನು ಎಂದು ನುಡಿದನು. ಆ ಮಾತನ್ನು ಕೇಳಿ ಶ್ರೀರಾಮನು ಸುಪ್ರೀತನಾಗಿ ಲಕ್ಷ್ಮಣ, ನೀನು ನಿನಗೆ ಇಷ್ಟರಾದ ಜನರಿಗೆ ಹೇಳಿ ಅವರಿಂದ ಬೀಳ್ಕೊಂಡು ಬಾ. ಜನಕಚಕ್ರೇಶ್ವರನ ಯಾಗಕಾಲದಲ್ಲಿ ವರುಣನು ಕೊಟ್ಟಂಥ ದಿವ್ಯವಾದ ಬಿಲ್ಲನ್ನೂ ಅಕ್ಷಯವಾದ ಬತ್ತಳಿಕೆಯನ್ನೂ ಸೂರಮಂಡಲದಂತೆ ಬೆಳಗುವ ಎರಡು ಖಡ್ಗಗಳನ್ನೂ ನಮ್ಮ ಗುರುವಾದ ವಸಿಷ್ಠ ಮುನೀಶ್ವರನ ವಶದಲ್ಲಿಟ್ಟಿದ್ದೇನೆ. ನೀನು ಆತನ ಸಮೀಪಕ್ಕೆ ಹೋಗಿ ಆ ಬಿಲ್ಲು ಬತ್ತಳಿಕೆಗಳನ್ನೂ ಖಡ್ಗಗಳನ್ನೂ ತೆಗೆದುಕೊಂಡು ನಿನ್ನ ಸ್ನೇಹಿತರಿಗೂ ನಿನ್ನನ್ನು ಅನುಸರಿಸಿದವರಿಗೂ ಹೇಳಿ ಶೀಘ್ರದಲ್ಲಿ ಬಾ ಎಂದು ಹೇಳಿದನು.

**ಮುಂದುವರಿಯುವುದು...**

---

☛ ವಿಶ್ವಾಸ್.ಡಿ.ಗೌಡ



# ಶ್ರೀಗಳ ನುಡಿಮುತ್ತುಗಳು ಎಲ್ಲರಿಗೂ ದಾರಿದೀಪ...!



● ಉದಯವಾಹಿನಿ, ವಿಶೇಷ

ಕಾಯಕಯೋಗಿಯ 15 ನುಡಿಮುತ್ತುಗಳು: ಪಾಲಿಸಿದರೆ ಕೈಲಾಸವೇ ನಮ್ಮದು ತ್ರಿವಿಧ ದಾಸೋಹಿ, ಬಸವಣ್ಣನವರ ತತ್ವ ಕಾಯಕವೇ ಕೈಲಾಸವನ್ನು ಚಾಚೂ ತಪ್ಪದೇ ಪಾಲಿಸಿದ ಶತಾಯುಷಿ, ತುಮಕೂರಿನ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಯವರ ಜೀವನ ಇತರರಿಗೆ ಸ್ಫೂರ್ತಿ ನೀಡುವಂತಹುದ್ದು. ಅತ್ಯಂತ ಸರಳ ಹಾಗೂ ಸಾರ್ಥಕ ಜೀವನ ನಡೆಸಿ ಹಲವರಿಗೆ ಭವಿಷ್ಯ ಕಲ್ಪಿಸಿದ ನಡೆದಾಡುವ ದೇವರ ಕೆಲ ನುಡಿ ಮುತ್ತುಗಳು.

ಜನ ಸೇವೆಯೇ ಜನಾರ್ಧನ ಸೇವೆ ಎಂದು ನಿಸ್ವಾರ್ಥ ಬದುಕು ಬಾಳಿದ ಶ್ರೀಗಳ ಈ ನುಡಿಮುತ್ತುಗಳು ಎಲ್ಲರಿಗೂ ದಾರಿದೀಪ... ಮಾತು ಮಿತವಾಗಿರಬೇಕು, ಹಿತವಾಗಿರಬೇಕು, ಪ್ರೀತಿಯಿಂದಿರಬೇಕು, ಸರಳವಾಗಿರಬೇಕು, ಮಧುರವಾಗಿರಬೇಕು, ಮೃದುವಾಗಿರಬೇಕು, ತಪಸ್ಸಿನಂತಿರಬೇಕು. ಮಾನವ ಪ್ರಜ್ಞೆ ಜಾಗೃತವಾಗದ ಹೊರತು ಇಂದಿನ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಸಹಜ ಪ್ರೀತಿ ಕಲ್ಲನ್ನೂ ಕರಗಿಸುತ್ತದೆ; ಕಟುಕನನ್ನು ಕರುಣಾಮಯಿಯನ್ನಾಗಿಸುತ್ತದೆ. ಕ್ರಮಬದ್ಧ ಜೀವನ ಪ್ರಗತಿಯ ಮೂಲ, ಅಕ್ರಮ ಜೀವನ ವಿನಾಶಕ್ಕೆ ಹಾದಿ. ಸೇವೆ ಪ್ರಚಾರದ ಸರಕಲ್ಲ; ಅದು ಗುಪ್ತಶಕ್ತಿ; ವ್ಯಕ್ತಿಯನ್ನು ಆರೋಗ್ಯವಂತನನ್ನಾಗಿಡುವ ಸಂಜೀವಿನಿ. ಸ್ತ್ರೀಯರು ಸಂಸ್ಕಾರವಂತರಾಗಿ, ಸಮಾಜದ ಕಣ್ಣಾದರೆ ಧರ್ಮ ತತ್ವಗಳು ಉಳಿಯುತ್ತದೆ. ಕರ್ತನೆಂಬ ಅಹಂಕಾರ ಬಿಡು. ಕಿಂಕರನೆಂಬ ಭಾವ ಬೆಳೆಸಿಕೋ. ದೃಷ್ಟಿ ಪವಿತ್ರವಾಗಿರಲಿ, ಭಾವ ಶುದ್ಧವಾಗಿರಲಿ, ಬದುಕು ಭಕ್ತಿಯಿಂದೊಡಗೂಡಿರಲಿ.

### ಶ್ರೀಗಳ ಕಿರು ಪರಿಚಯ

- ಜನನ: 1 ಏಪ್ರಿಲ್ 1907
- ಜನನಸ್ಥಳ: ವೀರಾಪುರ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ
- ನಿಧನ: 21 ಜನವರಿ 20191
- ಗುರು: ಶ್ರೀ ಉದ್ಧಾನ ಸ್ವಾಮೀಜಿಗಳು
- ಶಿಷ್ಯರು: ಸಿದ್ದಗಂಗಾ ಶಿಕ್ಷಣ ಸಂಸ್ಥೆಯಲ್ಲಿ ವಿಧ್ಯಾಭ್ಯಾಸ ಮಾಡಿದ ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ದೇಶದ ಅಸಂಖ್ಯಾತ ಭಕ್ತವರ್ಗ
- ತತ್ವಜ್ಞಾನ: ಕಾಯಕವೇ ಕೈಲಾಸ
- ಪ್ರಶಸ್ತಿಗಳು/ಬಿರುದುಗಳು: ಕರ್ನಾಟಕ ರತ್ನ, ಪದ್ಮಭೂಷಣ,(ನಡೆದಾಡುವ ದೇವರು, ತ್ರಿವಿಧ ದಾಸೋಹಿ, ಕಾಯಕ ಯೋಗಿ, ಆದುನಿಕ ಬಸವಣ್ಣ,)
- ನುಡಿ:ಕಾಯಕವೇ ಕೈಲಾಸ

ಸಮಾಜ ಪರಿಶುದ್ಧವಾಗಬೇಕೆಂದರೆ ಜನನಾಯಕರು ನೀತಿವಂತರಾಬೇಕು. ನಮ್ಮ ಪೂರ್ವಿಕರಿಗೆ ಮಾನವೀಯತೆಯೇ ಜೀವನವಾಗಿತ್ತು. ತಮಗಾಗಿ ದುಡಿದ ಎತ್ತು, ಹೋರಿ, ಹಸುಗಳು ಸತ್ತಾಗ ಸಮಾಧಿ ಮಾಡುತ್ತಿದ್ದರೇ ಹೊರತು, ಕಟುಕರಿಗೆ ಮಾರುತ್ತಿರಲಿಲ್ಲ. ಶಿಕ್ಷಣ ವ್ಯಾಪಾರವಲ್ಲ, ಅದು ದಾಸೋಹದ ರೀತಿಯಲ್ಲಿ ಪಸರಿಸಬೇಕು. ಉತ್ತಮ ಸಮಾಜಕ್ಕಾಗಿ ಜ್ಞಾನದ ಬೀಜ ಬಿತ್ತಬೇಕು.

ಬೆವರು ಸುರಿಸದೇ, ಯಾವುದಾದರೂ ಒಂದು ರೀತಿಯ ಕಾಯಕ ಮಾಡದೆ ಫಲ ಅನುಭವಿಸಲು ಯಾರಿಗೂ ಹಕ್ಕಿಲ್ಲ. ಮನಸ್ಸನ್ನು ಯಾವಾಗಲೂ ಪವಿತ್ರತೆಯಿಂದಿರುವಂತೆ ಜೋಪಾನ ಮಾಡಬೇಕು. ಮದುವೆ ಸಮಾರಂಭಗಳು ಸರಳವಾಗಿರಬೇಕು.

ಪ್ರೀತಿ ಪ್ರೇಮಗಳ ಆತ್ಮೀಯ ಮಂಗಳ ಕಾರ್ಯಕ್ರಮಗಳಾಗಬೇಕು. ಉಭಯ ಕುಟುಂಬಗಳ ಬೆಳಕಿನ ಹಬ್ಬವಾಗಬೇಕು. ದುಡಿಮೆ ಸತ್ಯಶುದ್ಧವಾಗಿದ್ದು, ಪರರಿಗೆ ಉಪಕಾರವಾಗುವಂತಿರಬೇಕು. ಗ್ರಂಥದಲ್ಲಿ, ಗುಡಿಯಲ್ಲಿ ಧರ್ಮವಿಲ್ಲ. ಬದುಕಿನಲ್ಲಿದೆ, ಹೃದಯವಂತಿಕೆಯಲ್ಲಿದೆ.

---

# ಮಾತನಾಡುತಿದೆ ಮನೆಯ ತೋರಣ



ಅದೇನು ಸಂಭ್ರವೋ
ನಾ ಕಾಣೆ
ಹಬ್ಬ ಬಂದರೆ ಹೊರ
ಬರುವ ಮನೆಯ
ತೋರಣಕೆ
ಅದೆಷ್ಟು ಸಂವತ್ರರಗಳ
ಕಂಡಿತೋ ನಾಕಾಣೆ
ಇಂದಿಗೂ ಮದುವಣಗಿತ್ತಿಯಂತೆ
ಕಂಗೊಳಿಸಿ ನಳನಳಿಸುತಿದೆ
ನಿನ್ನ ಹೆಣೆದವರ್ಯಾರೋ
ಬಣ್ಣ ಬಣ್ಣದ ಹೂ ತುಂಬಿ
ಅಂದಗೊಳಿಸಿದವರು ಇಂದಿಲ್ಲ
ನೆನಪಿಟ್ಟುಕೊಡಿರುವೆ
ಮಧುರ ಕ್ಷಣಗಳ
ನಿನ್ನೊಡಲ ಗರ್ಭದಲ್ಲಿ
ಓ...ಬಾಗಿಲ ತೋರಣವೇ
ಸಿಂಗರಿಸಿ ಹಬ್ಬ ಹರಿದಿನಗಳ ಸಂಭ್ರಮ
ಹೆಚ್ಚಿಸಿ ಮರೆಯಾಗುವೆ
ಮರಳಿ ಬರುವೆ
ಮುಂದಿನ ಸಂವತ್ಸರದ
ಹಬ್ಬಗಳಿಗೆ
ತೋರಣವೆ.... ಕಂಗೊಳಿಸುತಿರು
ಅನುದಿನವು
ಹರುಷ, ನೆಮ್ಮದಿಯ
ಹೊನಲು ಸೂಸಿ


■ ರಚನೆ: ಗುರಾನಿ

---

# ಸೂರ್ಯ ಗ್ರಹಣ ವೇಳೆ ಗರ್ಭಿಣಿಯರು ಮಲಗಿದ್ರೆ..!

ಸೂರ್ಯ ಗ್ರಹಣದ ಸಂದರ್ಭ ಹೊರಗಡೆ ಹೋಗಬಾರದು, ಆಹಾರ ತಿನ್ನಬಾರದು, ಮಲಗಬಾರದು ಎನ್ನುವುದನ್ನು ಬಹಳ ಹಿಂದಿನಿಂದಲೂ ಹೇಳಲಾಗುತ್ತಿದೆ. ಸೂರ್ಯ ಗ್ರಹಣದ ವೇಳೆ ಮಲಗುವುದರಿಂದ ಹೊಟ್ಟೆಯಲ್ಲಿನ ಮಗುವಿಗೆ ನಿಜಕ್ಕೂ ಹಾನಿಯಾಗುತ್ತಾ ಈ ಸೂರ್ಯಗ್ರಹಣದಲ್ಲಿ, ಸೂರ್ಯನ ಒಂದು ಭಾಗ ಮಾತ್ರ ಚಂದ್ರನನ್ನು ಆವರಿಸುತ್ತದೆ. ಸೂರ್ಯಗ್ರಹಣದ ಬಗ್ಗೆ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಹಲವು ರೀತಿಯ ನಂಬಿಕೆಗಳು ಮತ್ತು ಮೂಢ ನಂಬಿಕೆಗಳು ಪ್ರಚಲಿತದಲ್ಲಿವೆ. ವಿಶೇಷವಾಗಿ ಗರ್ಭಿಣಿಯರು ಸೂರ್ಯ ಗ್ರಹಣದ ಸಮಯದಲ್ಲಿ ಕೆಲವು ವಿಶೇಷ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗುತ್ತದೆ. ಸೂರ್ಯಗ್ರಹಣದ ಸಮಯದಲ್ಲಿ ಗರ್ಭಿಣಿಯರು ಮಲಗಿದರೆ, ಅದು ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದು ಹೇಳಲಾಗುತ್ತದೆ. ಆದರೆ ಅದು ನಿಜವೋ ಎನ್ನುವುದು ತಿಳಿದಿಲ್ಲ.

**ಗರ್ಭಾವಸ್ಥೆಯಲ್ಲಿ ಸೂರ್ಯಗ್ರಹಣ ಮಗುವಿನ ಮೇಲೆ ಯಾವ ಪ್ರಭಾವ ಬೀರುತ್ತದೆ?:** ಡಾ. ಚಂಚಲ್ ಶರ್ಮಾ ಅವರ ಪ್ರಕಾರ, ಸೂರ್ಯಗ್ರಹಣದ ಪರಿಣಾಮವನ್ನು ದೇಹ ಮತ್ತು ಮನಸ್ಸು ಎರಡರ ಮೇಲೂ ಪರಿಗಣಿಸಲಾಗುತ್ತದೆ.



ಸೂರ್ಯಗ್ರಹಣದ ಸಮಯದಲ್ಲಿ, ಭೂಮಿಯ ಮೇಲಿನ ಸೂರ್ಯನ ಬೆಳಕು ಕಡಿಮೆಯಾಗುತ್ತದೆ ಮತ್ತು ನಕಾರಾತ್ಮಕ ಶಕ್ತಿಯ ಪ್ರಸರಣ ಹೆಚ್ಚಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ದೇಹದ ಸುತ್ತಲೂ ಅನೇಕ ಸೂಕ್ಷ್ಮ ಬದಲಾವಣೆಗಳು ಸಂಭವಿಸುತ್ತವೆ, ಇದು ದೇಹದ ದೋಷಗಳ ಮೇಲೆ ಪರಿಣಾಮ ಬೀರುತ್ತದೆ. ಈ ಸಮಯವು ಗರ್ಭಿಣಿಯರ ದೇಹದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ ಎಂದು ಕಂಡುಬರುತ್ತದೆ.

**ಮಗುವಿಗೆ ದೈಹಿಕ ದೋಷಗಳು ಕಾಡುತ್ತಾ:** ಸೂರ್ಯ ಗ್ರಹಣದ ಸಮಯದಲ್ಲಿ ಗರ್ಭಿಣಿಯರು ನಿದ್ರಿಸಿದರೆ, ಹುಟ್ಟಲಿರುವ ಮಗುವಿಗೆ ದೇಹದ ಭಾಗಗಳು, ಜನ್ಮ ಗುರುತುಗಳು ಮುಂತಾದ ದೈಹಿಕ ದೋಷಗಳು ಉಂಟಾಗಬಹುದು ಎಂದು ಹೇಳಲಾಗುತ್ತದೆ.

ಆದರೆ ಇದು ನಿಜವಾಗಿಯೂ ಸಂಭವಿಸುತ್ತದೆಯೇ ಇದರ ಹಿಂದಿನ ಸತ್ಯಾಸತ್ಯತೆ ಏನು ಎನ್ನುವುದನ್ನು ಆಶಾ ಆಯುರ್ವೇದದ ನಿರ್ದೇಶಕಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಚಂಚಲ್ ಶರ್ಮಾ ಅವರ ಓನ್ಲಿ ಮೈ ಹೆಲ್ತ್‌ಗೆ ತಿಳಿಸಿದ್ದಾರೆ.

**ಜಡತ್ವ ಹೆಚ್ಚಾಗುತ್ತದೆ:** ಸೂರ್ಯಗ್ರಹಣದ ಸಮಯದಲ್ಲಿ ನಿದ್ರಿಸುವುದರಿಂದ ದೇಹದಲ್ಲಿ ಜಡತ್ವ ಹೆಚ್ಚಾಗುತ್ತದೆ. ಇದು ಭ್ರೂಣದ ಮೇಲೆ ಸ್ವಲ್ಪ ಪರಿಣಾಮ ಬೀರುತ್ತದೆ. ಆದರೆ ಇದು ತುಂಬಾ ಕಡಿಮೆ ಮಟ್ಟದ್ದಾಗಿದ್ದು ಆದ್ದರಿಂದ ಇದರ ಬಗ್ಗೆ ಭಯಪಡುವ ಅಗತ್ಯವಿಲ್ಲ. ಆದರೆ ಮಹಿಳೆ ಮಾನಸಿಕವಾಗಿ ಗ್ರಹಣದ ಭಯದಲ್ಲಿದ್ದರೆ, ಈ ಒತ್ತಡವು ಗರ್ಭದಲ್ಲಿರುವ ಮಗುವಿನ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ.

**ಸೂರ್ಯಗ್ರಹಣದ ಸಮಯದಲ್ಲಿ ಗರ್ಭಿಣಿಯರು ಏನು ಮಾಡಬೇಕು:** ಸೂರ್ಯಗ್ರಹಣದ ಸಮಯದಲ್ಲಿ ಗರ್ಭಿಣಿ ಮಹಿಳೆ ನಿದ್ರಿಸಿದರೆ, ಅದು ಮಗುವಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಡಾ.



ಚಂಚಲ್ ಶರ್ಮಾ ಹೇಳುತ್ತಾರೆ. ಆದರೆ ಆಯುರ್ವೇದದಲ್ಲಿ, ಸೂರ್ಯಗ್ರಹಣದ ಸಮಯದಲ್ಲಿ ಮಹಿಳೆಯರಿಗಾಗಿ ಕೆಲವು ನಿಯಮಗಳನ್ನು ನಿಗದಿಪಡಿಸಲಾಗಿದೆ, ಮಹಿಳೆಯರು ಈ ನಿಯಮಗಳನ್ನು ಪಾಲಿಸಿದರೆ, ಅವರಿಗೆ ಅದರಿಂದ ಪ್ರಯೋಜನ ಸಿಗುತ್ತದೆ.

---


# ಹಾರ್ಟ್‌ಗೆ ಸಮಸ್ಯೆ ಬರಲ್ಲ,
## ಶುಗರ್ ಕೂಡ ಕಂಟ್ರೋಲ್ ತಪ್ಪಲ್ಲ!

ಆರೋಗ್ಯವು ಉತ್ತಮವಾಗಿ ಇರಬೇಕಾದರೆ ಆಗ ದೈಹಿಕ ಚಟುವಟಿಕೆಗಳಾದ ವ್ಯಾಯಾಮ, ನಡಿಗೆ, ಓಟ, ಸರಿಯಾದ ಆಹಾರ ಕ್ರಮ ಇವೆಲ್ಲವೂ ಬೇಕು. ಆದರೆ ಎಲ್ಲವನ್ನು ಎಲ್ಲರಿಂದಲೂ ಮಾಡಲು ಆಗಲ್ಲ. ಹೀಗಾಗಿ ಒಂದೊಂದು ಆಯ್ಕೆ ಮಾಡಿಕೊಂಡು ದೈಹಿಕವಾಗಿ ಫಿಟ್ನೆಸ್‌ನ್ನು ಕಾಪಾಡಬಹುದು ಈ ನಿಟ್ಟಿನಲ್ಲಿ ನೋಡುವುದಾದರೆ ಬೆಳಗಿನ ಸಮಯದ ನಡಿಗೆ ತುಂಬಾನೇ ಉಪಯುಕ್ತ ಅದರಲ್ಲೂ ಪ್ರತಿದಿನ ಅರ್ಧ ಗಂಟೆ ವಾಕಿಂಗ್ ಮಾಡುವುದರಿಂದ ಅನೇಕ ಪ್ರಯೋಜನಗಳನ್ನು ನೀಡುವುದಲ್ಲದೇ, ಆರೋಗ್ಯಕರವಾದ ಜೀವನ ಸಾಗಿಸಲು ಅನುವು ಮಾಡಿಕೊಡುತ್ತದೆ. ಆರೋಗ್ಯದ ಬಗ್ಗೆ ಕಾಳಜಿ ಇರುವವರು ಏನಾದರೊಂದು ವ್ಯಾಯಾಮ, ಆಹಾರ ಕ್ರಮ ಇತ್ಯಾದಿಗಳನ್ನು ಸರಿಯಾಗಿಟ್ಟುಕೊಳ್ಳುವರು. ಅದರಲ್ಲೂ ನಿತ್ಯವೂ ನಡೆದರೆ, ಆಗ ಇದರಿಂದ ಆರೋಗ್ಯ ತುಂಬಾ ಸುಧಾರಣೆ ಆಗುವುದು ಎಂದು ಹೇಳಲಾಗಿದೆ. ಇಂದಿನ ದಿನಗಳಲ್ಲಿ ಹೆಚ್ಚಿನವರು ನಡೆಯುವುದಕ್ಕೆ ಪ್ರಾಮುಖ್ಯತೆ ನೀಡುವರು. ದಿನಕ್ಕೆ ಒಂದು ಸೇಬು ತಿಂದರೆ ವೈದ್ಯರಿಂದ ದೂರವಿರಬಹುದು ಎನ್ನುವ ಮಾತೇ ಇದೆ. ಅದೇ ರೀತಿಯಲ್ಲಿ ದಿನಕ್ಕೆ 30 ನಿಮಿಷ ನಡೆದರೆ, ಆಗ ಇದರಿಂದ ಹಲವಾರು ಅನಾರೋಗ್ಯವನ್ನು ಮೈಲು ದೂರ ಇಡಬಹುದು ಎಂದು ವೈದ್ಯರು ಹೇಳುವರು. ಡಾ. ಸಿ.ಕೆ. ಬಿರ್ಲಾ ಆಸ್ಪತ್ರೆಯ ವೈದ್ಯರಾಗಿರುವಂತಹ ಡಾ. ತುಷಾರ್ ತಯಾಲ್ ಅವರು ಹೇಳುವ ಪ್ರಕಾರ, ದಿನಕ್ಕೆ 30 ನಿಮಿಷ ನಡೆದರೆ ಆಗ ಇದರಿಂದ ಹಲವಾರು ಲಾಭಗಳಿವೆ. ಪ್ರಮುಖವಾಗಿ ನಡಿಗೆಯಿಂದ ಸ್ನಾಯುಗಳ ಶಕ್ತಿ ವೃದ್ಧಿಸುತ್ತದೆ. ದೇಹದ ಎಲ್ಲಾ ಸ್ನಾಯುಗಳೂ ಚಲನಶೀಲವಾಗುತ್ತವೆ. ಇನ್ನು ಜಿಮ್‌ನಲ್ಲಿ ಗಂಟೆಗಟ್ಟಲೆ ವ್ಯಾಯಾಮ ಮಾಡಿದರೆ ಹೇಳಿಕೊಳ್ಳುವಂತಹ ಫಲಿತಾಂಶ ಸಿಗಲಾರದು ಪ್ರಮುಖವಾಗಿ ಹೃದಯದ ರಕ್ತನಾಳಗಳ ಆರೋಗ್ಯದ ಮಟ್ಟಿಗೆ ನಡಿಗೆಯೇ ಅತ್ಯುತ್ತಮ. ಆದರೆ ನಿಮಗೆಗೊತ್ತಿರಲಿ ಸಾಮಾನ್ಯ ನಡಿಗೆಗಿಂತ ವೇಗದ ನಡಿಗೆ ಉತ್ತಮ. ಆದರೆ, ಕೆಲವರಿಗೆ ವೇಗದ ನಡಿಗೆ ಮಾಡಲು ಮಂಡಿಯ ಕೀಲುಗಳು ಸಹಕರಿಸಲಾರವು. ಅದಕ್ಕಾಗಿ ನಿಮಗೆ ಹಿತವೆನಿಸುವಷ್ಟು ವೇಗದ ನಡಿಗೆ ಮಾಡಬಹುದು.

**ಹೃದಯ ಸಂಬಂಧಿ ಸಮಸ್ಯೆಗಳು ದೂರವಾಗುತ್ತದೆ:** ಡಾ. ತಯಾಲ್ ಅವರ ಪ್ರಕಾರ, ನಿಯಮಿತವಾಗಿ ನಡೆದರೆ ಆಗ ಇದರಿಂದ ಹೃದಯ ಸಂಬಂಧಿ ಸಮಸ್ಯೆಗಳು ದೂರವಾಗುವುದು. ನಡೆದರೆ ಆಗ ಇದರಿಂದ ಹೃದಯವು ಬಲವಾಗುವುದು ಮತ್ತು ರಕ್ತದೊತ್ತಡ ನಿಯಂತ್ರಿಸಲು ಇದು ಸಹಕಾರಿ.

**ಮಧುಮೇಹ ಇರುವವರಿಗೆ ಒಳ್ಳೆಯದು :** ಪ್ರತಿ ದಿನ ವಾಕಿಂಗ್ ಮಾಡುವ ಅಭ್ಯಾಸ ಇದ್ದವರಿಗೆ ಸಾಮಾನ್ಯವಾಗಿ ಶುಗರ್ ನಿಯಂತ್ರಣದಲ್ಲಿರುತ್ತದೆ ಎನ್ನುತ್ತಾರೆ ತಜ್ಞರು ಹೀಗಾಗಿ ಶುಗರ್ ಕಾಯಿಲೆ ಯಿಂದ ಬಳಲುತ್ತಿರುವ ವಯಸ್ಕರು, ಮಧ್ಯ ವಯಸ್ಸಿನವರು ಹಾಗೂ ಇಳಿ ವಯಸ್ಸಿನವರು ಪ್ರತಿದಿನ ತಮ್ಮ ಕೈಲಾದಷ್ಟು ವಾಕಿಂಗ್ ಮಾಡುವ ಜೊತೆಗೆ ದೇಹಕ್ಕೆ ಸ್ವಲ್ಪ ಕಸರತ್ತು ನೀಡುವ ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ದೇಹದ ಜಡತ್ವ ದೂರವಾಗಿ ಆರೋಗ್ಯಕರವಾದ ದೈಹಿಕ ಸದೃಢತೆ ಸಿಗುತ್ತದೆ.

**ಮೂಳೆಗಳ ಸಮಸ್ಯೆಯನ್ನು ದೂರವಿಡುವುದು!:** ನಡೆಯುವುದರಿಂದ ಮೂಳೆಗಳೂ ಬಲಿಷ್ಠವಾಗುವುದು ಮತ್ತು ಗಂಟುಗಳ ಮೇಲೆ ಬೀಳುವ ಒತ್ತಡವು ಕಡಿಮೆ ಆಗುವುದು. ಇದರಿಂದ ಅಸ್ಥಿರಂಧ್ರತೆ ಮತ್ತು ಸಂಧಿವಾತದಂತಹ ಸಮಸ್ಯೆಯನ್ನು ದೂರವಿಡಬಹುದು. ವೈದ್ಯರ ಪ್ರಕಾರ, ಮೂಳೆಗಳೂ ಬಲಿಷ್ಠವಾಗಿದ್ದರೆ, ಆಗ ಇದು ಮೂಳೆಗಳ ಸಮಸ್ಯೆಯನ್ನು ದೂರ ವಿಡುವುದು.



ಅರ್ಧ ಗಂಟೆ ನಡೆಯಿರಿ ಸಾಕು

---

# ಗಾರ್ಲಿಕ್ ಬಟರ್ ಚಿಕನ್ ಮಾಡೋದು



ಸುಲಭ ರೀತಿಯಲ್ಲಿ ತಯಾರು ಮಾಡಬಹುದಾದ ಯಾವುದಾದರೂ ಅಡುಗೆ ಇದ್ದರೆ, ನಾವು ಅದನ್ನು ಮಿಸ್ ಮಾಡಿಕೊಳ್ಳಲೇಬಾರದು. ಅದರಲ್ಲೂ ಮನೆಯಲ್ಲಿ ಎಲ್ಲಾ ಪದಾರ್ಥಗಳು ಇದ್ದೂ ಕೂಡ, ಸುಮ್ಮನಿದ್ದರೆ ನಮ್ಮಂತಹ ನತದೃಷ್ಟರು ಬೇರೊಬ್ಬರಿಲ್ಲ. ಮಾಂಸಾಹಾರಿ ಪ್ರಿಯರಾಗಿ ಚಿಕನ್ ಎಂದರೆ ಇಷ್ಟ ಎನ್ನುವವರು ಇಲ್ಲಿ ನಾವು ಎಂದು ನಿಮಗೆ ತಿಳಿಸಲು ಹೊರಟಿರುವ ಗಾರ್ಲಿಕ್ ಬಟರ್ ಚಿಕನ್ ಒಮ್ಮೆ ಟ್ರೈ ಮಾಡಬಹುದು.

ರುಚಿ ಹಾಗೂ ಸ್ವಾದದಲ್ಲಿ ಇದನ್ನು ಮೀರಿಸುವ ಮತ್ತೊಂದು ಅಡುಗೆ ಇಲ್ಲ. ಇದರಲ್ಲಿ ಹಾಕುವ ಸಾಮಗ್ರಿಗಳು ಕೂಡ ಎಲ್ಲವೂ ಆರೋಗ್ಯಕರವಾಗಿವೆ. ಹಾಗಿದ್ದ ಮೇಲೆ ಅತ್ಯಂತ ಕಡಿಮೆ ಸಮಯದಲ್ಲಿ ಈ ರುಚಿಕರ ಖಾದ್ಯವನ್ನು ನೀವು ತಯಾರು ಮಾಡಿ ಮನೆಯವರೆಲ್ಲರ ಜೊತೆ ಕುಳಿತು ಸವಿಯಿರಿ.

ಬೇಕಾಗಿರುವ ಮುಖ್ಯ ಸಾಮಗ್ರಿಗಳು
250 ಗ್ರಾಂ ಕೋಳಿ ಮಾಂಸ
25 ಗ್ರಾಂ ಬೆಣ್ಣೆ
1 ಚಮಚ ಲೈಟ್ ಸೋಯಾ ಸಾಸ್
1 ಅಗತ್ಯವಿರುವಷ್ಟು ಉಪ್ಪು
2 ಮೊಟ್ಟೆಯ ಬಿಳಿ ಭಾಗ
2 ಚಮಚ ಹಸಿರು ಮೆಣಸಿನಕಾಯಿಗಳು
1 ಚಮಚ ಕಾರ್ನ್ ಹಿಟ್ಟು
1 ಚಮಚ ಬಿಳಿ ಮೆಣಸಿನ ಪುಡಿ
8 ಚಮಚ ಕರಿಮೆಣಸು
1 ಎಸಳು ಬೆಳ್ಳುಳ್ಳಿ
1 ಚಮಚ ಶುಂಠಿ ಪೇಸ್ಟ್
1 ಚಮಚ ಬೆಳ್ಳುಳ್ಳಿ ಪೇಸ್ಟ್
2 ಕಪ್ ಸ್ಪ್ರಿಂಗ್ ಈರುಳ್ಳಿ

ಮೊದಲಿಗೆ ನೀವು ತೆಗೆದುಕೊಂಡ ಚಿಕನ್ ಅನ್ನು ಸ್ವಲ್ಪ ಉಪ್ಪು, ಮೊಟ್ಟೆಯ ಬಿಳಿಯ ಭಾಗ, ಸೋಯಾ ಸಾಸ್, ಬಿಳಿ ಮೆಣಸಿನಪುಡಿ, ವಿನೆಗರ್ ಮತ್ತು ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ ಮ್ಯಾರಿನೆಟ್ ಮಾಡಿ ಮತ್ತು 15 ರಿಂದ 20 ನಿಮಿಷಗಳು ಇದು ಹಾಗೆ ಇರಲು ಬಿಡಿ. ಒಂದು ಪ್ಯಾನ್‌ನಲ್ಲಿ ಸ್ವಲ್ಪ ಎಣ್ಣೆ ಹಾಕಿ ಅದನ್ನು ಬಿಸಿ ಮಾಡಿ. ಎಣ್ಣೆ ಬಿಸಿಯಾಗುತ್ತಿದ್ದಂತೆ ಅದಕ್ಕೆ ಚಿಕನ್ ಪೀಸ್‌ಗಳನ್ನು ಹಾಕಿ. ಸ್ವಲ್ಪ ಪ್ರಮಾಣದಲ್ಲಿ ಗೋಲ್ಡನ್ ಕಲರ್ ಬರುವವರೆಗೂ ಎಣ್ಣೆಯಲ್ಲಿ ಬಾಡಿಸಿ.
ಈಗ ಒಂದು ಪ್ಯಾನ್ ತೆಗೆದುಕೊಂಡು ಅದಕ್ಕೆ ಸ್ವಲ್ಪ ಬೆಣ್ಣೆ ಮತ್ತು ಬೆಳ್ಳುಳ್ಳಿ ಹಾಕಿ ಸ್ವಲ್ಪ ಹೊತ್ತು ಹುರಿದು, ಹೆಚ್ಚಿದ ಹಸಿ ಮೆಣಸಿನಕಾಯಿ ಮತ್ತು ಈರುಳ್ಳಿ ಹೂವು ಸೇರಿಸಿ. ಕೆಲವು ಸೆಕೆಂಡುಗಳವರೆಗೆ ಇದನ್ನು ತಿರುಗಿಸಿ ಅದಕ್ಕೆ ಕಪ್ಪು ಮೆಣಸಿನ ಪುಡಿ, ಸ್ವಲ್ಪ ಉಪ್ಪು, ಕಾರ್ನ್ ಫ್ಲೋರ್ ಪೇಸ್ಟ್ ಎಲ್ಲವನ್ನೂ ಸೇರಿಸಿ ಒಂದು ನಿಮಿಷ ಚೆನ್ನಾಗಿ ಬೇಯಿಸಿ. ಇದು ಗಟ್ಟಿಯಾಗುತ್ತಿದ್ದಂತೆ ಸ್ವಲ್ಪ ನೀರು ಹಾಕಿ ಒಂದು ನಿಮಿಷ ಮತ್ತೆ ಬೇಯಿಸಿ.

ಈಗ ನೀವು ಹುರಿದುಕೊಂಡ ಚಿಕನ್ ಪೀಸ್‌ಗಳನ್ನು ಇದರಲ್ಲಿ ಸೇರಿಸಿ ಎಲ್ಲವನ್ನೂ ಒಮ್ಮೆ ತಿರುಗಿಸಿ ಮತ್ತೆ ಒಂದು ನಿಮಿಷ ಬಿಸಿ ಮಾಡಿ. ಈಗ ನಿಮ್ಮ ಗಾರ್ಲಿಕ್ ಬಟರ್ ಚಿಕನ್ ರೆಡಿ....





# ಮಿನಿ ನ್ಯೂಸ್

## ಅಶಕ್ತರ ಬೆನ್ನೆಲುಬು ಧರ್ಮಸ್ಥಳ ಕಾರ್ಯ: ಕಂದಕೂರ

• ಉದಯವಾಹಿನಿ ಸೈದಾಪುರ

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಗಳು ಗ್ರಾಮೀಣ ಭಾಗದ ಅಶಕ್ತರು ಮತ್ತು ಅಸಾಹಯಕರ ಬೆನ್ನೆಲುಬಾಗಿವೆ ಎಂದು ಗುರುಮಠಕಲ್ ಮತಕ್ಷೇತ್ರದ ಶಾಸಕ ಶರಣಗೌಡ ಕಂದಕೂರ ಅಭಿಪ್ರಾಯಪಟ್ಟರು.

ಸಮೀಪದ ಕಾಳೆಬೆಳಗುಂದಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಕನಸಿನ ಕೂಸು ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ನಿರ್ಮಿಸಿದ ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮದಲ್ಲಿ ಭಾಗವಹಿಸಿ



ಉದಯವಾಹಿನಿ ಚಿತ್ರ

ಮಾತನಾಡಿದರು. ಸಮಾಜ ಮತ್ತು ಸಮುದಾಯವನ್ನು ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಮುಖ್ಯ ವಾಹಿನಿಗೆ ಕರೆತರಲು ಹತ್ತು-ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನು??ಠನ ಮಾಡಲಾಗುತ್ತಿದೆ. ಜೊತೆಗೆ ಸರ್ಕಾರ ಮಾಡದೇ ಇರುವ ಅನೇಕ ಸಮಾಜಮುಖಿ ಕಾರ್ಯಗಳಾದ ಕೆರೆ ಅಭಿವೃದ್ಧಿಪಡಿಸುವುದು, ದೇವಸ್ಥಾನಕ್ಕೆ ಸಹಾಯಧನ, ಶುದ್ಧ ಕುಡಿಯುವ ನೀರಿನ ಘಟಕ, ಹಿಂದು ರುದ್ರಭೂಮಿ ಅಭಿವೃದ್ಧಿಯನ್ನು ಕೂಡ ನಿರಂತರವಾಗಿ ಮಾಡುತ್ತ ಬರುತ್ತಿದೆ. ಅಸಹಾಯಕರನ್ನು ಗುರುತಿಸಿ ಅವರಿಗೆ ವಾತ್ಸಲ್ಯದಿಂದ ಉಪಚರಿಸಿ ಸಮಾಜದಿಂದ ಹೊರ ಗುಳಿದ ಅನೇಕರ ಕಣ್ಣೀರು ಒರೆಸುವ ಕಾರ್ಯಗಳು ಶ್ಲಾಘನೀಯವಾದವು ಎಂದರು. ಇದಕ್ಕೂ ಮೊದಲು ಮಾಶಾಸನ ಫಲಾನುಭವಿ ಪಾರ್ವತಮ್ಮ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು.

## ರಂಜಾನ್ ಸಾಮೂಹಿಕ ಪ್ರಾರ್ಥನೆ ಸ್ಥಳಕ್ಕೆ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಭೇಟಿ

• ಉದಯವಾಹಿನಿ ಸೇಡಂ

ಪಟ್ಟಣದ ಸಾದೆ ಸಾಬ್ ಈದ್ಗಾ ಮೈದಾನದಲ್ಲಿಂದು ರಂಜಾನ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಸ್ಥಳಕ್ಕೆ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್ ಊಡಗಿ ರವರು ಭಾಗಿಯಾಗಿ ಶುಭ ಕೋರಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಾಗೇಶ್ವರರಾವ್ ಮಾಲಿ ಪಾಟೀಲ್, ಶಿವಶರಣ ರೆಡ್ಡಿ ಪುರಸಭೆ ಅಧ್ಯಕ್ಷರಾದ ವಿರೇಂದ್ರ ರುದ್ನೂರ್, ಮಾಜಿ ಕಾಡಾ ಅಧ್ಯಕ್ಷ ಮಹಾಂತಪ್ಪ



ಉದಯವಾಹಿನಿ ಚಿತ್ರ

ಸಂಗಾವಿ, ಸತೀಶ್ ರೆಡ್ಡಿ, ಸಂತೋಷ್ ಕುಲಕರ್ಣಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಜನಾರ್ದನರೆಡ್ಡಿಗೆ ಈ ತೀರ್ಪು ರಿಲೀಫ್ ನೀಡುತ್ತಾ, ಇಲ್ಲ ಜೈಲಿಗೆ ಕಳಿಸುತ್ತ ಎಂಬುದು ಚರ್ಚೆ

# ಓಎಂಸಿ ಅಕ್ರಮ ಮೈನಿಂಗ್ ಕೇಸ್ ಸಿಬಿಐ ಕೋರ್ಟ್ ಜಡ್ಜ್‌ಮೆಂಟ್ ಡೇ

• ಉದಯವಾಹಿನಿ ಬಳ್ಳಾರಿ

ಮಾಜಿ ಸಚಿವ ಗಾಲಿ ಜನಾರ್ಧನರೆಡ್ಡಿ ಸೇರಿದಂತೆ ಹಲವರು ಭಾಗಿಗಳಾಗಿದ್ದಾರೆ ಎನ್ನಲಾದ ಓಬಳಾಪುರಂ ಮೈನಿಂಗ್ ಕಂಪನಿಯ ಅಕ್ರಮ ಗಣಿಗಾರಿಕೆಯ ಪ್ರಕರಣದ ತೀರ್ಪು ಬರುವ ಮೇ 6 ರಂದು ಪ್ರಕಟಿಸುವುದಾಗಿ ಹೈದ್ರಾಬಾದ್ ನ ಸಿಬಿಐ ಕೋರ್ಟಿನ ನ್ಯಾಯಾಧೀಶ ಟಿ.ರಘುರಾಂ ಹೇಳಿದ್ದಾರೆ. ನಾನು ಒಂದಿಂಚು ರಾಜ್ಯದ ಗಡಿ ಒತ್ತುವರಿಮಾಡಿಲ್ಲ. ಒಂದು ಟನ್ ಅಕ್ರಮ ಗಣಿಗಾರಿಕೆ ಮಾಡಿಲ್ಲ ಎನ್ನುತ್ತಿದ್ದ ಜನಾರ್ದನರೆಡ್ಡಿ ಅವರಿಗೆ ಈ ತೀರ್ಪು ರಿಲೀಫ್ ನೀಡುತ್ತಾ ಇಲ್ಲ ಜೈಲಿಗೆ ಕಳಿಸುತ್ತ ಎಂಬುದು ಈಗ ಚರ್ಚೆ.

ಆಂದ್ರ ಪ್ರದೇಶದಲ್ಲಿ ಡಾ.ರಾಜಶೇಖರರೆಡ್ಡಿ ಸರ್ಕಾರ ಇತ್ತ ಕರ್ನಾಟಕದಲ್ಲಿ ಯಡಿಯೂರಪ್ಪ ಅವರ ಸರ್ಕಾರ ಆಡಳಿತದಲ್ಲಿದ್ದಾಗ ಆಂದ್ರ ಮತ್ತು ಕರ್ನಾಟಕದ ಗಡಿ ಭಾಗಕ್ಕೆ ಹೊಂದಿಕೊಂಡು ನಡೆದ ಡಿ.ಹಿರೆಹಾಳ್ ಮಂಡಲದ ಸಿದ್ದಾಪುರ ಬಳಿ ಓಬಳಾಪುರಂ ಬೆಟ್ಟ ಪ್ರದೇಶದಲ್ಲಿ ನಡೆದ ಕಬ್ಬಿಣ ಅದಿರಿನ ಗಣಿಕಾರಿಕೆಗೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ಬಿ.ವಿ.ಶ್ರೀನಿವಾಸರೆಡ್ಡಿ ಓಎಂಸಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ(ಎಂ.ಡಿ)ರಾಗಿದ್ದರು. ಹಾಲಿ ಗಂಗಾವತಿ ಶಾಸಕರು, ಮಾಜಿ ಸಚಿವ ಗಾಲಿ ಜನಾರ್ದನರೆಡ್ಡಿ ಈ ಕಂಪನಿಯ ಮುಖ್ಯಸ್ಥರಾಗಿದ್ದರು.

### 2009ರಲ್ಲಿ ಈ ಪ್ರಕರಣ ಸಿಬಿಐ ತನಿಖೆಗೆ

**ಅಂದ್ರ ಪ್ರದೇಶದ ಅನಂತಪುರಂ ಜಿಲ್ಲೆಯ ಡಿಎಫ್ಒ ಕಲೋಲ್ ಬಿಸ್ವಾಸ್ ಅವರು ಬಳ್ಳಾರಿಯ ಡಿಎಫ್ ಓ ಅವರಿಗೆ ಪತ್ರ ಬರೆದು ಕರ್ನಾಟಕದಿಂದ ಆಂದ್ರಕ್ಕೆ ಅಕ್ರಮವಾಗಿ ಕಬ್ಬಿಣ ಅದಿರು ಬರುತ್ತಿದೆ ತಡೆಯಬೇಕೆಂದು ಪತ್ರ ಬರೆದಿದ್ದರು. ಇದರ ಮೇಲೆ ಓಎಂಸಿ ಕಂಪನಿ ಪ್ರಕರಣ ದಾಖಲಿಸಿದ್ದರಿಂದ ಈ ವಿಷಯವನ್ನು ಆಂದ್ರ ಪ್ರದೇಶದ ಪ್ರತಿಪಕ್ಷಗಳು ಸದನದಲ್ಲಿ ತನಿಖೆಗೆ ಆಗ್ರಹ ಮಾಡಿದವು ಆಗ ಸಮ್ಮಿರೆಡ್ಡಿ ನೇತೃತ್ವದಲ್ಲಿ ರಚನೆಯಾದ ತ್ರಿ ಸದಸ್ಯರ ಸಮಿತಿ ತನಿಕೆ ಮಾಡಿ ನೀಡಿದ ವರದಿ ಮೇಲೆ ಅಂದು ಮುಖ್ಯಂಮತ್ರಿ ಆಗಿದ್ದ ಕಾಂಗ್ರೇಸ್‌ನ ರೋಷಯ್ಯ ಅವರು 2009 ರಲ್ಲಿ ಈ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಿದ್ದರು.**

ಈ ಕಂಪನಿಗೆ ಗಣಿಗಾರಿಕೆ ಮಂಜೂರಾತಿ ನೀಡುವಲ್ಲಿ ಅರಣ್ಯ ಇಲಾಖೆ, ಗಣಿ ಇಲಾಖೆಯಿಂದಲೂ ಅಕ್ರಮ ನಡೆದಿತ್ತು. ಅಲ್ಲದೆ, ನಿಗಧಿಗಿಂತ ಹೆಚ್ಚು ಅದಿರನ್ನು




ಉದಯವಾಹಿನಿ ಚಿತ್ರ

ಅಕ್ರಮವಾಗಿ ತೆಗೆದು ಸಾಗಾಣೆ ಮಾಡಲಾಗಿತ್ತು. ಈ ವೇಳೆ ಕರ್ನಾಟಕದ ಗಡಿಯನ್ನು ಒತ್ತುವರಿಮಾಡಿ ಅದಿರನ್ನು ಲೂಟಿಮಾಡಿತ್ತು ಎಂಬ ಆರೋಪ ಇತ್ತು.

ಇದೇ ವೇಳೆ ಬೆಟ್ಟದ ಮೇಲೆ ಇದ್ದ ಸುಂಕ್ಲಮ್ಮ ದೇವಸ್ಥಾನದ ಕೆಳಗಡೆ ಲಕ್ಷಾಂತರ ಟನ್ ಐರನ್ ಓರ್ ಇದೆಂದು ದೇವಸ್ಥಾನವನ್ನು ಬೆಟ್ಟದ ಕೆಳಗೆ ಸ್ಥಳಾಂತರಿಸಿ ಮೇಲಿನ ದೇವಸ್ಥಾನ ಧ್ವಂಸ ಮಾಡಿತ್ತು ಎಂಬ ಆರೋಪವೂ ಇತ್ತು. ಈ ಪ್ರಕರಣದಲ್ಲಿ ಶ್ರೀನಿವಾಸರೆಡ್ಡಿ, ಜನಾರ್ದನರೆಡ್ಡಿ, ಮೆಹಫೂಜ್ ಅಲ್ಲದೇ ಖಾನ್, ಗಣಿ ಇಲಾಖೆಯ ನಿರ್ದೇಶಕರಾಗಿದ್ದ ವಿ.ಡಿ.ರಾಜಗೋಪಾಲ್, ಆಂದ್ರದ ಮಾಜಿ ಸಚಿವೆ ಸಬಿತಾ ಇಂದ್ರಾರೆಡ್ಡಿ, ನಿವೃತ್ತ ಐಎಎಸ್ ಅಧಿಕಾರಿ ಕೃಪಾನಂದ, ಶ್ರೀಲಕ್ಷ್ಮೀ ಮೊದಲಾದವರು ಇದ್ದರು. ಶ್ರೀಲಕ್ಷ್ಮಿ ಅವರನ್ನು ಕೇಸಿನಿಂದ ಕೈ ಬಿಡಲಾಗಿದೆ. ಲಿಂಗಾರೆಡ್ಡಿ ಎಂಬುವವರು ಸಾವನ್ನಪ್ಪಿದ್ದಾರೆ.

> **ಜನಾರ್ದನರೆಡ್ಡಿಯ ಓಎಂಸಿ ಕಂಪನಿ ಕರ್ನಾಟಕದ ಬೌಂಡರಿ ಬದಲುಮಾಡಿ ಅಕ್ರಮ ಗಣಿಗಾರಿಕೆ ನಡೆಸಿ ಲಕ್ಷಾಂತರ ಟನ್ ಅದಿರನ್ನು ಲೂಟಿ ಮಾಡಿದ್ದಾರೆ ಎಂಬುದಕ್ಕೆ ಸಾಕಷ್ಟು ಸಾಕ್ಷಾಗಳನ್ನು ಒದಗಿಸಿದೆ. ನ್ಯಾಯಾಲಯದ ಮೇಲೆ ನಮಗೆ ನಂಬಿಕೆ ಇದೆ ಜನಾರ್ದನರೆಡ್ಡಿಗೆ ಶಿಕ್ಷೆ ಆಗುತ್ತೆ ಎಂದು. ಮೇ 6ರಂದು ಕಾದು ನೋಡಬೇಕಿದೆ**
>
> **-ಟಪಾಲ್ ಗಣೇಶ್**
>
> **ಪ್ರಕರಣ ಸಾಕ್ಷಿ, ಗಣಿ ಉದ್ಯಮಿ, ಬಳ್ಳಾರಿ.**

ಈ ಪ್ರಕರಣದಲ್ಲಿ 3400 ಕ್ಕೂ ಹೆಚ್ಚು ದಾಖಲೆಗಳ ಪರಿಶೀಲನೆ, 219 ಕ್ಕೂ ಹೆಚ್ಚು ಸಾಕ್ಷಿಗಳ ವಿಚಾರಣೆ ನಡೆದಿದೆ. ಎ.1 ಸಾಕ್ಷಿ ಟಪಾಲ್ ಏಕಾಂಬರಂ, ಎ.3 ಸಾಕ್ಷಿ ಟಪಾಲ್ ಗಣೇಶ್ ಸೇರಿದ್ದಾರೆ.

ರೆಡ್ಡಿ ಪರ ವಾದ ಮಂಡಿಸಿದ್ದ ವಕೀಲರು ಅಸಮನದ್ರ ಮತ್ತು ಕರ್ನಾಟಕದ ಗಡಿ ವಿವಾದ ಇನ್ನೂ ಬಗೆಹರಿದಿಲ್ಲ ಹೀಗಿರುವಾಗ ಈ ಪ್ರಕರಣ ಇತ್ಯರ್ಥ ಮಾಡುವುದು ಹೇಗೆ, ವಿನಾ ಆರೋಪದ ಪ್ರಕರಣವನ್ನು ಕೈಬಿಡಬೇಕೆಂದು ವಾದ ಮಂಡಿಸಿದ್ದರು.

ಮೊದಲಿಗೆ ರೆಡ್ಡಿಯವರು 25 ಹೆಕ್ಟೇರನ ಜಿಆರ್ ಆರ್ ಮೈನ್ ಲೀಜನ್ನು ಓಎಂಸಿಗೆ ಪಡೆದು

> **2011 ರ ಸೆಪ್ಟೆಂಬರ್ 5 ರಂದು ಜನಾರ್ದನರೆಡ್ಡಿ, ಶ್ರೀ ನಿವಾಸರೆಡ್ಡಿ ಅವರನ್ನು ಸಿಬಿಐನ ಅಧಿಕಾರಿ ಲಕ್ಷ್ಮಿನಾರಾಯಣ ಅವರು ಬಳ್ಳಾರಿಗೆ ಬಂದು ಅರೆಸ್ಟ್ ಮಾಡಿ ಕರೆದುಕೊಂಡು ಚಂಚಲಗುಡ ಜೈಲಿಗೆ ಕಳುಹಿಸಿದ್ದರು. ಐದು ವರ್ಷಗಳ ಕಾಲ ಚಂಚಲಗುಡ ಮತ್ತು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲು ವಾಸದಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿ ಜನಾರ್ದನರೆಡ್ಡಿ ಅವರು ಈಗ ಗಂಗಾವತಿ ಶಾಸಕರಾಗಿದ್ದಾರೆ.**

ಗಣಿಗಾರಿಕೆ ಆರಂಭಿಸುತ್ತಾರೆ. ನಂತರ ಎರಡನೆಯದಾಗಿ ಅಂತರಗಂಗಮ್ಮ ಕೊಂಡದಲ್ಲಿ ಒಎಂಸಿ ಕಂಪನಿಗೆ 68.5 ಮತ್ತು ಮೂರನೆಯದಾಗಿ 39.5 ಹೆಕ್ಟಾರ್ ಪ್ರದೇಶವನ್ನು ಗಣಿಗಾರಿಕೆಗೆ ಲೀಜ್ ನೀಡಿತ್ತು.

ಇದು ಸಹ ಅಕ್ರಮವಾಗಿ ಆಗಿದೆಂಬ ಆರೋಪ ಇದೆ.ಕನಾರ್ಟಕದ ಗಡಿಗೆ ಹೊಂದಿಕೊಂಡಿದ್ದ ಈ ಲೀಜ್ ಪ್ರದೇಶವನ್ನು ಬಳಸಿಕೊಂಡು ಆಂದ್ರದಲ್ಲಿ ಪರ್ಮಿಟ್ ಪಡೆದು ಕರ್ನಾಟಕದ ಗಡಿಯನ್ನು ಒತ್ತುವರಿಮಾಡಿ ರಾಜ್ಯದ 29 ಲಕ್ಷ ಟನ್ ಅದಿರನ್ನು ಲೂಟಿ ಮಾಡಿ 884 ಕೋಟಿ ರೂ ಆದಾಯ ಪಡೆದಿದ್ದಾರೆಂಬುದು ಆರೋಪ.

## ಸಹಾಯಕ ಆಯುಕ್ತ ಅಮಾನತು

• ಉದಯವಾಹಿನಿ ಉಡುಪಿ



ಉಡುಪಿ-ಕುಂದಾಪುರ ಉಪವಿಭಾಗದ ಸಹಾಯಕ ಆಯುಕ್ತ ಮಹೇಶ್ಚಂದ್ರ ಕೆ ಅವರನ್ನು ಉಡುಪಿ ಜಿಲ್ಲಾಧಿಕಾರಿ ಡಾ. ವಿದ್ಯಾಕುಮಾರಿ ಕೆ ಅವರು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಮಹೇಶ್ಚಂದ್ರ ಕೆ ಅವರು ಕುಂದಾಪುರ ಉಪವಿಭಾಗದ ಸಹಾಯಕ ಆಯುಕ್ತರಾಗಿ ಮತ್ತು ಉಡುಪಿ ನಗರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ವಿವಿಧ ವಿಷಯಗಳಲ್ಲಿ ಕರ್ತವ್ಯ ಲೋಪ ಎಸಗಿದ್ದಾರೆ ಎಂಬ ಆರೋಪ ಅವರ ಮೇಲಿದೆ. ಬ್ರಹ್ಮಾವರ ತಹಶೀಲ್ದಾರ್ ಶ್ರೀಕಾಂತ್ ಎಸ್ ಹೆಗಡೆ ಅವರಿಗೆ ಕುಂದಾಪುರ ಉಪವಿಭಾಗದ ಸಹಾಯಕ ಆಯುಕ್ತರ ಹೆಚ್ಚುವರಿ ಪ್ರಭಾರವನ್ನು ನೀಡಲಾಗಿದೆ.

## ಬೈಕ್-ಲಾರಿ ನಡುವೆ ಅಪಘಾತ ಪೊಲೀಸ್ ಕಾನ್ಸ್‌ಟೇಬಲ್ ಮೃತ್ಯು

• ಉದಯವಾಹಿನಿ ಕಾಸರಗೋಡು

ಬೈಕ್ ಮತ್ತು ಲಾರಿ ನಡುವೆ ಉಂಟಾದ ಅಪಘಾತದಲ್ಲಿ ಪೊಲೀಸ್ ಕಾನ್ಸ್ ಟೇಬಲ್ ರೋರ್ವರು ಮೃತಪಟ್ಟ ಘಟನೆ ಪಡನ್ನಕ್ಕಾಡ್ ಎಂಬಲ್ಲಿ ನಡೆದಿದೆ. ಹೊಸದುರ್ಗ ಪೊಲೀಸ್ ಠಾಣೆಯ ಪೊಲೀಸ್ ಕಾನ್ಸ್ ಟೇಬಲ್ ವಿನೀಶ್ (35) ಮೃತಪಟ್ಟವರು. ಕರಿವೆಳ್ಳೂರಿನ ಮನೆಯಿಂದ ಕರ್ತವ್ಯಕ್ಕೆ ಠಾಣೆಗೆ ಬೈಕ್ ನಲ್ಲಿ ಬರುತ್ತಿದ್ದಾಗ ಪಡನ್ನ ಕ್ಕಾಡ್ ರೈಲ್ವೆ ಮೇಲ್ಸೇತುವೆಯಲ್ಲಿ ನೀಲೇಶ್ವರ ಕಡೆಯಿಂದ ಕಾಞಂಗಾಡ್ ಕಡೆಗೆ ಬರುತ್ತಿದ್ದ ಟ್ಯಾಂಕರ್ ಲಾರಿ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಅವರ ತಲೆಗೆ ಗಂಭೀರ ಸ್ವರೂಪದ ಗಾಯವಾಗಿದ್ದು, ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಜೀವ ಉಳಿಸಲಾಗಲಿಲ್ಲ. ಮೃತದೇಹವನ್ನು ಜಿಲ್ಲಾಸ್ಪತ್ರೆಯಲ್ಲಿ ಇರಿಸಲಾಗಿದ್ದು, ಹೊಸದುರ್ಗ ಠಾಣಾ ಪೊಲೀಸರು ಮಹಜರು ನಡೆಸಿದರು.

## ಯುಗಾದಿ ಹಬ್ಬದ ನಿಮಿತ್ಯ ಪಂಡಿತರಾಧ್ಯ ವರದರಾಜ ಜೋಶಿ ಇವರಿಂದ ಪಂಚಾಂಗ ಶ್ರವಣ ಪಾರಾಯಣ ಕಾರ್ಯಕ್ರಮ

• ಉದಯವಾಹಿನಿ ಕಾರಟಗಿ

ಶ್ರೀ ವಿಶ್ವವಸು ನಾಮ ಸಂವತ್ಸರ ಚೈತ್ರ ಮಾಸ ವಸಂತ ಋತು ಉತ್ತರಾಯಣ ಶುಕ್ಲ ಪಕ್ಷ,,ಚೈತ್ರ ನವರಾತ್ರಿ, ಯುಗಾದಿ, ಪಾಡ್ಯ ದಂದು ಮಾರ್ಚ್ -30ಭಾನುವಾರ

ತಾಲ್ಲೂಕಿನ ಜೂರಟಗಿಯ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ ಪಂಡಿತರಾಧ್ಯ ಶ್ರೀ ವರದ ರಾಜ ಜೋಷಿ ಅವರಿಂದ ಸಂಜೆ 6 ಗಂಟೆಗೆ ಪಂಚಾಂಗ ಶ್ರವಣ ಪರಾಯಣ ಮಾಡಲಾಯಿತು. ಬೆಳಿಗ್ಗೆ ಶ್ರೀ ಆಂಜನೇಯ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಬೇವು ಬೆಲ್ಲ ಸವಿದು ಪಾಡ್ಯದಂದು ದೇವಸ್ಥಾನದಲ್ಲಿ ಭಜನೆ. ಮುಂತಾದ ಕಾರ್ಯಕ್ರಮಗಳು ಜರುಗಿದವು ಈ ಸಂದರ್ಭದಲ್ಲಿ ಪ್ರಲ್ಲದರ ದೇಸಾಯಿ ರಾಘವೇಂದ್ರ ದೇಸಾಯಿ ಬಿಂದು



ಉದಯವಾಹಿನಿ ಚಿತ್ರ

ರಾವ್ ದೇಸಾಯಿ ಅಚ್ಯುತ್ ರಾವ್ ಕುಲಕರ್ಣಿ ರಾಮ್ ರಾವ್ ಕುಲಕರ್ಣಿ ಮಲ್ಲರಾವ್ ವೆಂಕಟೇಶ್ ಕುಲಕರ್ಣಿ ಆನಂದ್ ಕುಲಕರ್ಣಿ ರವೀಂದ್ರ ದೇಸಾಯಿ ಲಲಿತಾ ಬಾಯಿ ದೇಸಾಯಿ ನರ್ಮದ ದೇಸಾಯಿ ರಘು ಮಾಲ ದೇಸಾಯಿ ಮತ್ತಿತರರು ಪಾಲ್ಗೊಂಡಿದ್ದರು.

## ಸಂಭ್ರಮದ ಈದುಲ್ ಫಿತ್ರ ಸಡಗರ

• ಉದಯವಾಹಿನಿ ಇಂಡಿ

ಕಳೆದ ಒಂದು ತಿಂಗಳಿಂದ ತಾಲ್ಲೂಕಿನಾದಂತ ರಮಜಾನ್ ಹಬ್ಬದ ಪ್ರಯುಕ್ತ ಉಪವಾಸ ವೃತ ಆಚರಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಪಟ್ಟಣದ ಈದಗಾ ಮೈದಾನದಲ್ಲಿ ಗುರುಗಳಾದ ಶಾಕೀರ ಹುಸೇನ ಮೌಲಾನಾ ಇವರು ಸಾವಿರಾರು ಮುಸ್ಲಿಂ ಬಾಂಧವರಿಗೆ ನಮಾಜು ಬೋಧಿಸಿದರು. ಗ್ರಾಮಗಳಲ್ಲಿ ಒಂದು ಕಡೆ ಸೇರಿ ಪ್ರಾರ್ಥನೆ ಸಲ್ಲಿಸಿದರು.

ಹೊಸ ಬಟ್ಟೆ ಧರಿಸಿ ಸಿಹಿ ತಿಂಡಿ ಷುರಕುಂಬಾ ಸೇವಿಸುವದು, ವಿಶೇಷ ತಿನಿಸುಗಳಿಗೆ ಬಕ್ಷಣೆ ಪರಸ್ಪರ ಪ್ರೀತಿ ಹಂಚಿಕೆ ಸಂತೋಷ ಸಡಗರ ಮತ್ತು ದಾನ ಮಾಡುವದು ಹಬ್ಬದ ವೈಶಿಷ್ಯವಾಗಿತ್ತು.

ಕಪ್ಪ ಧರಿಸಿ ನಮಾಜು ಕೇಂದ್ರ ಸರಕಾರ ಜಾರಿಗೆ ತರಲು ಬಯಸಿರುವ ವಕ್ಫ್ ಬೋರ್ಡು ಬಿಲ್ಲು ವಿರೋಧಿಸಿ ಇಂದು ಬಲಗೈಗೆ ಕಪ್ಪ ಬಟ್ಟಿ



ಉದಯವಾಹಿನಿ ಚಿತ್ರ

ಧರಿಸಿ ನಮಾಜು ಬೋಧಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಾಕೀರ ಹುಸೇನ ಕಾಶ್ಮಿ ಮಸೀದೆ, ದರ್ಗಾ, ಈದಗಾ, ಮದರಸಾ, ಸ್ಮಶಾನಭೂಮಿ ಇವುಗಳಿಗೆ ಧಕ್ಕೆ ತರುವ ಕಾನೂನು ಇದಾಗಿದೆ.

ಹೀಗಾಗಿ ಸರಕಾರದ ವಿರುದ್ಧ ಸರಕಾರಕ್ಕೆ ತಿಳಿಸುವ ನೆಪದಲ್ಲಿ ಕಪ್ಪು ಬಟ್ಟೆ ಧರಿಸಿ ನಮಾಜು ಮಾಡಲಾಗಿದೆ ಎಂದರು.

ಪ್ರಾರ್ಥನೆಯಲ್ಲಿ ಅಂಜುಮನ್ ಸಂಸ್ಥೆಯ ಅಧ್ಯಕ್ಷ ಹಜಿಯಾಲಿ ಬಾಗವಾನ, ಕಾರ್ಯದರ್ಶಿ ಹುಸೇನಸಾಬ ಜಮಾದಾರ, ಜಾವೇದ ಮೋಮೀನ, ಅಬ್ದುಲ ರಹಮಾನ ಅರಬ, ಅಯೂಬ ಬಾಗವಾನ, ಅಬ್ದುಲ ರಶೀದ ಅರಬ, ಬಾಬುಸಾಬ ಸೌದಾಗರ, ಜುನಾದ್ದೀನ ಬಾಗವಾನ, ರೈಸ ಅಷ್ಟೇಕರ, ಯಾಸೀನ ತುರ್ಕಿ, ಮುಸ್ತಾಕ ಇಂಡಿಕರ, ಮಹಿಬೂಬ ಅರಬ, ಅಬ್ದುಲ ರಶೀದ ಮುಗಳಿ,ತುರಬ ಪಠಾಣ, ನಿಸಾರ ಬಾಗವಾನ, ರಾಜ ಅಹಮ್ಮದ ತುರಕರಗೇರಿ, ಮುಸ್ತಾಕ ನಾಯಿಕೊಡಿ. ಮಹಮ್ಮದ ಗುಲಬರ್ಗಾ, ಮಹಿಬೂಬ ಮಕಾನದಾರ ಮತ್ತಿತರಿದ್ದರು.

## ಧರ್ಮಸ್ಥಳಕ್ಕೆ ರಷ್ಯಾದ ಪ್ರವಾಸಿಗರು



ಉದಯವಾಹಿನಿ ಚಿತ್ರ

• ಉದಯವಾಹಿನಿ ಉಜಿರೆ

ರಶ್ಯಾದಿಂದ 7 ಜನ ಪ್ರವಾಸಿಗರ ತಂಡ ಧರ್ಮಸ್ಥಳಕ್ಕೆ ಆಗಮಿಸಿದ್ದು, ದೇವರ ದರ್ಶನ ಮಾಡಿ, ಮಂಜೂಷಾ ವಿಂಟೇಜ್ ಕಾರುಗಳ ಸಂಗ್ರಹಾಲಯ, ಮಂಜೂಷಾ ವಸ್ತು ಸಂಗ್ರಹಾಲಯ, ಅನ್ನಪೂರ್ಣದಲ್ಲಿ ಅನ್ನದಾಸೋಹದ ವ್ಯವಸ್ಥೆ, ಬಾಹುಬಲಿ ಬೆಟ್ಟ, ಉದ್ಯಾನ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

## ದಾನ ಧರ್ಮದ ಪ್ರತೀಕ ಪವಿತ್ರ ರಂಜಾನ್ ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂಚೋಳಿ

ಅವಳಿ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ದಾನ ಧರ್ಮದ ಪ್ರತೀಕ ಪವಿತ್ರ ರಂಜಾನ್ ಹಬ್ಬದ ನಿಮಿತ್ತ ಅತ್ಯಂತ ಸಡಗರ ಸಂಭ್ರಮದಿಂದ ಮುಸ್ಲಿಂ ಬಾಂಧವರು ಈದ್ಗಾ ಮೈದಾನಗಳಲ್ಲಿ ಮತ್ತು ಮಜೀದ್ ಗಳಲ್ಲಿ ತೆರಳಿ ಈದ್ ಉಲ್ ಫೀತರ್ ನಮಾಜ್ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ರಂಜಾನ್ ಮಾಸದ ಒಂದು ತಿಂಗಳು ಉಪವಾಸ ವ್ರತವನ್ನು ಪವಿತ್ರ ಹಬ್ಬ ಭಕ್ತಿ ಶ್ರದ್ಧೆ ಸೌಹಾರ್ದತೆಯಿಂದ ಅಂತ್ಯಗೊಳಿಸಿ ರವಿವಾರ ಚಂದ್ರ ಕಾಣಿಸಿದ ಹಿನ್ನಲೆಯಲ್ಲಿ ಸೋಮವಾರ ಗ್ರಾಮ,ನಗರ ಪ್ರದೇಶಗಳಲ್ಲಿ ಮುಸ್ಲಿಂ ಬಾಂಧವರು ಬಣ್ಣ ಬಣ್ಣದ ಹೊಸ ಉಡುಪುಗಳು ತೊಟ್ಟು ಹಾಲು ಖಜೂರು ತಿಂದು ನಮಾಜ್ ಪ್ರಾರ್ಥನೆ ಮಾಡಲು ಈದ್ಗಾ ಮಸೀದಿಗಳಿಗೆ ತೆರಳಿ ಸಾಮೂಹಿಕ ನಮಾಜ ಮಾಡಿದ ನಂತರ ಹಿರಿಯರು ಕಿರಿಯರು ಮಕ್ಕಳು,ಪರಸ್ಪರ ಆಲಿಂಗನದ ಮೂಲಕ ಒಬ್ಬರಿಗೊಬ್ಬರು ಶುಭಾಷಯ ವಿನಿಮಯ ಮಾಡಿಕೊಂಡರು.

ಸಾಮಾಜಿಕ ಸ್ವಾಸ್ಥ್ಯಕ್ಕೆ ಮಾತ್ರವಲ್ಲ ದೈಹಿಕ ಮಾನಸಿಕ ಸ್ವಾಸ್ಥ್ಯಕ್ಕೂ ಸಂಯಮವೆ ಮೂಲ, ಶಾಂತಿಯ ಆರಂಭವೂ ಕೂಡ ಸಂಯಮದಿಂದಲೇ ಆಗುವುದು ರಂಜಾನ್ ಹಬ್ಬವು ಶಾಂತಿಯ ಸಂಕೇತವಾಗಿದೆ,ಒಂದು ತಿಂಗಳ ರಂಜಾನ್ ಉಪವಾಸ ಬದುಕಿನ ಈ ಎಲ್ಲಾ ಆಳ ವಿಚಾರ ಮತ್ತು ವಿವೇಕವನ್ನು ಪ್ರಾಯೋಗಿಕವಾಗಿ ಆರಿಸುತ್ತಾ,ಶಾಂತಿ ಸೌಹಾರ್ದದಿಂದ ಹಬ್ಬ ಆಚರಿಸುತ್ತಾರೆ.

ತಾಲ್ಲೂಕಿನ ಅವಳಿ ಪಟ್ಟಣ ಸೇರಿದಂತೆ ಅಣವಾರ,ಪೋಲಕಪಳ್ಳಿ,ನಾಗಯಿದ್ಲಾಯಿ,ಚಿಮ್ಮಾಯಿ,ನೀಮಾ ಹೋಸಳ್ಳಿ, ದಸ್ತಾಪೂರ,ಸುಲೇಪೇಟ,ಚಿಮ್ಮನಚೋಡ,ದೋಟಿಕೋಳ ಕನಕಪುರ,ಐನಾಪೂರ,ತುಮಕುಂಟಾ,ಪಸ್ತಾಪೂರ,ದೇಗಲಮಡಿ,ಮಿರಿಯಾಣ,ಕೋಳೂರ,ಐನೋಳ್ಳಿ, ನಿಡಗುಂದಾ, ಹಸರಗುಂಡಗಿ,ಚೆತ್ರಸಾಲ,ಕರ್ಚಖೇಡ,ಸೇರಿದಂತೆ ವಿವಿಧ ಗ್ರಾಮಗಳಲ್ಲಿ ರಂಜಾನ್ ಹಬ್ಬದ ಈದ್ ಉಲ್ ಫೀತರ್ ನಮಾಜ್ ಪ್ರಾರ್ಥನೆ ಮಾಡಿ ನಂತರ ಪರಸ್ಪರ ಆಲಂಗಿಸಿಕೊಂಡು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಅನೇಕ ಹಿರಿಯರು,ಯುವಕರು,ಮುದ್ದು ಮಕ್ಕಳು ರಾಜಕೀಯ ಗಣ್ಯ ನಾಯಕರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳ ಜೀವನದಲ್ಲಿ ಪ್ರತಿಯೊಂದು ಅಂಕದ ಹಿಂದೆ ಅವರ ಕಥೆ ಹಾಗೂ ವ್ಯಥೆ ಇರುತ್ತದೆ: ಶಾಸ್ತ್ರೀ

• ಉದಯವಾಹಿನಿ ಕಲಬುರಗಿ

ವಿದ್ಯಾರ್ಥಿಗಳ ಪ್ರತಿಯೊಂದು ಅಂಕದ ಹಿಂದೆ ಪರಿಶ್ರಮ, ಸಾಧನೆ, ಸಂತೋಷ, ನೋವು ಎಲ್ಲವನ್ನು ಒಳಗೊಂಡಿರುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಪದವಿಪೂರ್ವ ವಿಭಾಗದ ಉಪನಿರ್ದೇಶಕರಾದ ಅಶೋಕ್ ಶಾಸ್ತ್ರೀ ಹೇಳಿದರು. ಅವರು ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ವ್ಹಿ ಜಿ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ 2025 ನೇ ಸಾಲಿನ ಪಿಯುಸಿ ದ್ವಿತೀಯ ವರ್ಷದ ಪ್ರಥಮ ಪರೀಕ್ಷೆಗಳ ಇತಿಹಾಸ ವಿಷಯದ ಮೌಲ್ಯ ಮಾಪನ ಕೇಂದ್ರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು

ಪ್ರತಿಯೊಬ್ಬ ಮೌಲ್ಯ ಮಾಪಕರು ಅತ್ಯಂತ ನಿಷ್ಠೆಯಿಂದ ಹಾಗೂ ಶ್ರದ್ಧೆಯಿಂದ ಮೌಲ್ಯ ಮಾಪನ ಮಾಡಿದಾಗ ಮಾತ್ರ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಸಾಧ್ಯವಿದೆ ಎಂದು ಹೇಳಿದರು. ಯಾವ ಶಿಕ್ಷಕರು ನಿರಂತರ ಅಧ್ಯಯನ ಶೀಲನಾಗಿ ಪಾಠ ಪ್ರವಚನ ಮಾಡುತ್ತಾರೆಯೋ ಅವರು ಯಶಸ್ವಿ ಶಿಕ್ಷಕರಾಗಿ ಹೊರ ಹೊಮ್ಮುತ್ತಾರೆ ಅಂತಹ ಶಿಕ್ಷಕರು ಯಶಸ್ವಿಯಾಗಿ ಯಾವುದೇ ಲೋಪವಿಲ್ಲದೆ



ಉದಯವಾಹಿನಿ ಚಿತ್ರ

### ಮೌಲ್ಯ ಮಾಪನ ಕೇಂದ್ರದಲ್ಲಿ ಅಚ್ಚುಕಟ್ಟಾಗಿ ವ್ಯವಸ್ಥೆ

**ವ್ಹಿ ಜಿ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಮೌಲ್ಯ ಮಾಪನ ಕೇಂದ್ರವು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿ ಇಲ್ಲಿ ಕಾರ್ಯ ನಿರ್ವಹಿಸಿದ ಎಲ್ಲಾ ಮೌಲ್ಯ ಮಾಪಕರ ಮನ ಗೆದ್ದಿದೆ ಎಂದು ಹೇಳಿದರು. ಸಂಸ್ಥೆಯವರು ಉಪನ್ಯಾಸಕರಿಗೆ ಯಾವುದೇ ತೊಂದರೆಯಾಗದಂತೆ ಸೌಲಭ್ಯಗಳನ್ನು ಒದಗಿಸಿದ್ದಾರೆ ಎಂದು ಶಿಬಿರಾಧಿಕಾರಿಗಳಿಗೆ ಉಪನ್ಯಾಸಕರ ಪರವಾಗಿ ಅಭಿನಂದನೆಗಳು ತಿಳಿಸಿದರು, ಪ್ರತಿಯೊಬ್ಬ ಮೌಲ್ಯ ಮಾಪಕರಿಗೆ ಯಾವುದೇ ಸಮಸ್ಯೆ ಆಗದ ಹಾಗೆ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದ ಇತಿಹಾಸ ಮೌಲ್ಯಮಾಪನ ಕೇಂದ್ರದ ಕಚೇರಿಯ ಉಪ ಮುಖ್ಯ ಮೌಲ್ಯ ಮಾಪಕರಾದ ಐ.ಕೆ ಪಾಟೀಲ್ ಅವರು ಶ್ರಮ ಜೀವಿಗಳಾಗಿದ್ದು ಅವರ ಹೆಸರಿನಂತೆ ಎಲ್ಲಾ ಉಪನ್ಯಾಸಕರ ಪ್ರೀತಿಗೆ ಪಾತ್ರರಾಗಿ ಅವರ ಮನಸ್ಸಿನಲ್ಲಿ ಆಯ್ಕೆಯಾಗಿದ್ದಾರೆ ಎಂದು ಹೇಳಿದರು.**

ಮೌಲ್ಯಮಾಪನ ಮಾಡುತ್ತಾರೆ ಎಂದು ಹೇಳಿದರು. ಶಿಕ್ಷಣದಲ್ಲಿ, ಮೌಲ್ಯಮಾಪನ ಎಂಬ ಪದವು ವಿದ್ಯಾರ್ಥಿಗಳ ಶೈಕ್ಷಣಿಕ ಸಿದ್ಧತೆ, ಕಲಿಕೆಯ ಪ್ರಗತಿ, ಕೌಶಲ್ಯ ಸಂಪಾದನೆ ಅಥವಾ ಶೈಕ್ಷಣಿಕ ಅಗತ್ಯಗಳನ್ನು ಮೌಲ್ಯಮಾಪನ ಮಾಡಲು, ಅಳೆಯಲು ಮತ್ತು ದಾಖಲಿಸಲು ಶಿಕ್ಷಕರು ಬಳಸುವ ವಿವಿಧ ವಿಧಾನಗಳು ಅಥವಾ ಸಾಧನಗಳನ್ನು ಸೂಚಿಸುತ್ತದೆ ಎಂದು ಹೇಳಿದರು.

ಇದೆ ಸಂದರ್ಭದಲ್ಲಿ ಇತಿಹಾಸ ವಿಭಾಗದಿಂದ ನಿವೃತ್ತರಾದರು 6 ಜನ ಹಾಗೂ ಪಿ ಎಚ್ ಡಿ ಪಡೆದ ಒಬ್ಬ ಉಪನ್ಯಾಸಕರು ಹಾಗೂ ಪ್ರಾಚಾರ್ಯರನ್ನು ಮೌಲ್ಯ ಮಾಪನ ಕೇಂದ್ರದ ಯಶಸ್ವಿಗೆ ಕಾರಣಿಭೂತರಾದ ಗಣಕ ಯಂತ್ರ ಸಹಾಯಕರನ್ನು ಹಾಗೂ ಡಿ ದರ್ಜೆ ನೌಕರರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಚಾರ್ಯರು, ಶಿಬಿರಾಧಿಕಾರಿಗಳಾದ ಡಾ.ಮೋಹನರಾಜ ಪತ್ತಾರ ಮಾತನಾಡಿ ಇಲಾಖೆಯ ವಹಿಸಿದ ಜವಾಬ್ದಾರಿಯನ್ನು ನಮ್ಮ ಸಂಸ್ಥೆಯ ಸಹಕಾರದಿಂದ ನಿರಾಂತಕವಾಗಿ ನಡೆಸಿದ್ದೇನೆ ಎಂದು ಹೇಳಿದರು.

# ಸರ್ಕಾರಿ ಯೋಜನೆಗಳಿಗೆ ನೀಡದ ಸಾಲ

## ರಾಷ್ಟ್ರೀಕೃತ ಬ್ಯಾಂಕುಗಳು ವಿರುದ್ಧ ಯುವ ಕಾಂಗ್ರೇಸ್ ಪ್ರತಿಭಟನೆ

• ಉದಯವಾಹಿನಿ, ಔರಾದ

ಸರ್ಕಾರಿ ಯೋಜನೆಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ನೀಡುತ್ತಿಲ್ಲ ಎಂದು ತಾಲ್ಲೂಕು ಯುವ ಕಾಂಗ್ರೇಸ್ ಕಾರ್ಯಕರ್ತರು ಪಟ್ಟಣದ ಭಾರತೀಯ ಸ್ಟೇಟ್ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಯುವ ಕಾಂಗ್ರೇಸ್ ತಾಲ್ಲೂಕು ಅಧ್ಯಕ್ಷ ಅನಿಲ ಬೇಲೂರೆ ಮಾತನಾಡಿ, ಫಲಾನುಭವಿ ಆಧಾರಿತ ಯೋಜನೆಗಳಲ್ಲಿ ಬ್ಯಾಂಕ್‌ಗಳು ಸಾಲ ನೀಡದೆ ಸತಾಯಿಸುತ್ತಿದ್ದಾರೆ. ಸರ್ಕಾರಿ ಯೋಜನೆಗಳಿಗೆ ಕಡ್ಡಾಯವಾಗಿ ಲೋನ್ ನೀಡುವಂತೆ ಜಿಲ್ಲಾಡಳಿತ ಕ್ರಮಕೈಗೊಳ್ಳಲು ಮುಂದಾಬೇಕು ಎಂದು ಒತ್ತಾಯಿಸಿದರು. ಎಸ್ ಬಿಐ ಬ್ಯಾಂಕ್ ಸೇರಿದಂತೆ ಪಟ್ಟಣದ ರಾಷ್ಟ್ರೀಕೃತ ಬ್ಯಾಂಕುಗಳು ಜನರಿಗೆ ಸರಕಾರ ಯೋಜನೆಗಳ ಲೋನ್ ನೀಡುತ್ತಿಲ್ಲ ಎಂದು ದೂರಿದರು.

ರೈತರ ಕ್ರಾಪ್ ಲೋನ್, ಮುದ್ರಾ ಲೋನ್, ಕಾರ್ಮಿಕರಿಗೆ ಸಂಬಂಧಿಸಿದ ಲೋನ್ ಸೇರಿದಂತೆ ರಾಜ್ಯ ಮತ್ತು ಕೇಂದ್ರ ಸರಕಾರದ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸಾಲ ನೀಡುತ್ತಿಲ್ಲ ಎಂದು ಕಾರ್ಯಕರ್ತರು ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೆಲವರ ಖಾತೆಗಳಿಗೆ ಸಬ್ಸಿಡಿ ಹಣ ಜಮೆಯಾದರೂ ಲೋನ್ ನೀಡುತ್ತಿಲ್ಲ. ಅರ್ಹ ಫಲಾನುಭವಿಗಳಿಗೆ ಲೋನ್ ನೀಡದಿರುವುದು ಇಲ್ಲಿಯ ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ ಎಂದರು.

ಕುಡಲೇ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಸಮಗ್ರ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ರಸ್ತೆ



ಉದಯವಾಹಿನಿ ಚಿತ್ರ

> **ಜನರಿಗೆ ಸರಿಯಾಗಿ ದಾಖಲೆಗಳು ತರುವಂತೆ ತಿಳಿಸುತ್ತಾರೆ. ನಂತರ ಎಲ್ಲಾ ದಾಖಲೆ ಸರಿ ಇದ್ದಾಗಲೂ ಸಾಲ ನೀಡದಿದ್ದರೆ ಹೇಗೆ ಈ ಬಗ್ಗೆ ಮೇಲಾಧಿಕಾರಿಗಳು ಮೌನ ವಹಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.**

ತಡೆ ಮಾಡಿ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿಗಳಿಗೆ ಬರೆದ ಮನವಿಪತ್ರ ತಹಸೀಲ್ದಾರ ಅವರಿಗೆ ಸಲ್ಲಿಸಿದರು. ಪ್ರಮುಖರಾದ ಅನಿಲ್ ನಿರ್ಮಳೆ, ದತ್ತಾತ್ರಿ ಬಾಪೂರೆ, ಚಂದು ಡಿಕೆ, ರಾಜಕುಮಾರ ಮುದಾಳೆ, ಹರಿದೇವ ಸಂಗನಾಳ, ಸಂದೀಪ ಮಾನೆ, ಸಚಿನ ಮೇತ್ರೆ, ಸತೀಶ ಫುಲಾರಿ, ವಿವೇಕ ನಿರ್ಮಳೆ, ರಜನಿಕಾಂತ ದಾಮಾ, ವಿಶಾಲ್ ಸೇರಿದಂತೆ ಅನೇಕರಿದ್ದರು.

## ಪರ್ಯಾಯ ಮಾರ್ಗಗಳಿಗೆ ಸೂಚನೆ

• ಉದಯವಾಹಿನಿ ಮಂಗಳೂರು

ನಗರದಿಂದ ಕೇರಳ ರಾಜ್ಯಕ್ಕೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 66 ರ ಹಳೆಯ ನೇತ್ರಾವತಿ ಸೇತುವೆಯಲ್ಲಿ (ತಲಪಾಡಿ ಮಂಗಳೂರು ನಗರಕ್ಕೆ ಸಂಪರ್ಕ ಕಲ್ಪಿಸುವ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಏ. 1ರಿಂದ ಏ.30ರ ವರೆಗೆ ಅಂದರೆ ಸುಮಾರು 30 ದಿನಗಳು ಪ್ರಮುಖ ದುರಸ್ತಿ ಕಾಮಗಾರಿ ನಡೆಸಲಿದೆ. ಹೀಗಾಗಿ ಒಂದು ಸೇತುವೆಯಲ್ಲಿ (ಮಂಗಳೂರು ನಗರದಿಂದ ತಲಪಾಡಿ ಕಡೆಗೆ ಹೋಗುವ) ವಾಹನಗಳ ಸಂಚಾರಕ್ಕಾಗಿ ದ್ವಿಮುಖ ಸಂಚಾರ ವ್ಯವಸ್ಥೆ ಮಾಡಲಾಗಿರುತ್ತದೆ. ಇದರಿಂದ ಪಂಪ್‌ವೆಲ್ ನಿಂದ ತೊಕ್ಕೊಟ್ಟು ವರೆಗೆ ಸದ್ರಿ ಹೆದ್ದಾರಿಯ ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುತ್ತದೆ.

ಸಾರ್ವಜನಿಕರಿಗಾಗಿ ಪರ್ಯಾಯ ಮಾರ್ಗಗಳು

★ಮುಡಿಪು-ಕೊಣಾಜೆ-ದೇರಳಕಟ್ಟೆ ಕಡೆಯಿಂದ ಮಂಗಳೂರು ನಗರ ಕಡೆಗೆ ಸಂಚರಿಸುವ ಸ್ಥಳೀಯ ಲಘು ವಾಹನಗಳು/ದ್ವಿಚಕ್ರ ವಾಹನಗಳು ಕೊಣಾಜೆ- ಹರೇಕಳ (ಬ್ರಿಡ್ಜ್ ಅಡ್ಯಾರ್ ಮುಖಾಂತರ ಮಂಗಳೂರು ಕಡೆಗೆ ಸಂಚರಿಸಬಹುದಾಗಿದೆ.

★ಮಂಗಳೂರು ಕಡೆಯಿಂದ ಕೊಣಾಜೆ-ಮುಡಿಪು-ದೇರಳಕಟ್ಟೆ ಕಡೆಗೆ ಸಂಚರಿಸುವ ಸ್ಥಳೀಯ ದ್ವಿಚಕ್ರ / ಲಘು ವಾಹನಗಳು ಅಡ್ಯಾರ್-ಹರೇಕಳ(ಬ್ರಿಡ್ಜ್) ಮುಖಾಂತರ ಸಂಚರಿಸುವುದು.

★ತಲಪಾಡಿ, ಉಳ್ಳಾಲ ಕಡೆಯಿಂದ ಬೆಂಗಳೂರು ಉಪ್ಪಿನಂಗಡಿ ಪುತ್ತೂರು ಸುಳ್ಯ ಕಡೆಗೆ ಸಂಚರಿಸುವ ವಾಹನಗಳು ತೊಕ್ಕೊಟ್ಟಿನಿಂದ ಬಲಕ್ಕೆ ತಿರುಗಿ ಮುಡಿಪು ಬೋಳಿಯಾರ್ -ಮೆಲ್ಕಾರ್ ಮೂಲಕ ಸಂಚರಿಸುವುದು

★ಬಿ.ಸಿ ರೋಡ್ ಕಡೆಯಿಂದ ತಲಪಾಡಿ ಮತ್ತು ಕೇರಳ ಕಡೆಗೆ ಸಂಚರಿಸುವ ವಾಹನಗಳು ಮೆಲ್ಕಾರ್-ಮುಡಿಪು-ತೊಕ್ಕೊಟ್ಟು ಮುಖಾಂತರ ಸಂಚರಿಸುವುದು. ರಸ್ತೆ ದುರಸ್ತಿ ಸಂದರ್ಭದಲ್ಲಿ ವಾಹನಗಳ ಸುಗಮ ಸಂಚಾರಕ್ಕಾಗಿ ಸಾರ್ವಜನಿಕರು ಸಹಕರಿಸಬೇಕು. ಅದಕ್ಕೆ ಅನುಗುಣವಾಗಿ ತಮ್ಮ ಪ್ರಯಾಣವನ್ನು ಯೋಜಿಸಬೇಕೆಂದು ಮಂಗಳೂರು ನಗರ ಪೊಲೀಸರು ಸಾರ್ವಜನಿಕರಲ್ಲಿ ವಿನಂತಿಸಿದ್ದಾರೆ.

## ಶ್ರೀ ರೇವಣಸಿದ್ದೇಶ್ವರರ ಅದ್ದೂರಿ ಪಲ್ಲಕ್ಕಿ ಉತ್ಸವ ಶ್ರೀಗಳ ಬೆಳ್ಳಿ ಕಿರೀಟ ಪೂಜೆ

• ಉದಯವಾಹಿನಿ ಯಾದಗಿರಿ

ಹುಣಸಗಿ ತಾಲ್ಲೂಕಿನ ಅಗತೀರ್ಥ ಗ್ರಾಮದ ಶ್ರೀಮದ ಜಗದ್ಗುರು ರೇವಣಸಿದ್ದೇಶ್ವರರ , ಶ್ರೀ ಗುರುಬಸವ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಜಗದ್ಗುರು ರೇವಣ ಸಿದ್ದೇಶ್ವರರ ಪಲ್ಲಕ್ಕಿಯು ತಿಂಥಣಿ ಗ್ರಾಮದ ಹತ್ತಿರ ಇರುವ ಕೃಷ್ಣಾ ನದಿಯಲ್ಲಿ ವಿವಿಧ ಪೂಜಾ ಕಾರ್ಯಕ್ರಮ ಹಾಗೂ ಗಂಗಾ ಸ್ನಾನ ಮುಗಿಸಿಕೊಂಡು ಯುಗಾದಿ ಹಬ್ಬದಂದು ಅಗತೀರ್ಥ ಗ್ರಾಮಕ್ಕೆ ಜಗದ್ಗುರು ಶ್ರೀ ರೇವಣಸಿದ್ದೇಶ್ವರ ಶಾಂತಮಯ ಶಿವಾಚಾರ್ಯಗಳ ನೇತೃತ್ವದಲ್ಲಿ ಗ್ರಾಮ ಪ್ರವೇಶಿಸಿತು.

ಈ ಸಮಯದಲ್ಲಿ ಡೊಳ್ಳು ಬಾಜಾ ಭಜಂತ್ರಿಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಶ್ರೀ ರೇವಣ ಸಿದ್ದೇಶ್ವರರ ದೇವಸ್ಥಾನಕ್ಕೆ ಪಲ್ಲಕ್ಕಿ ಉತ್ಸವ ತಲುಪಿತು ತದನಂತರ ಭಕ್ತರಿಂದ ಶ್ರೀಗಳಿಗೆ ಪಾದಪೂಜೆ ಹಾಗೂ ಬೆಳ್ಳಿಯ ಕಿರೀಟ ಪೂಜೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಸಾಯಂಕಾಲ ಆಧ್ಯಾತ್ಮ ಪ್ರವಚನ ಕಾರ್ಯಕ್ರಮ ಮುಕ್ತಾಯಗೊಂಡಿತು. ಈ ಜಾತ್ರಾ ಮಹೋತ್ಸವಕ್ಕೆ



ಉದಯವಾಹಿನಿ ಚಿತ್ರ

ಜಿಲ್ಲೆ ಹಾಗೂ ಹೊರ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ಕೃಪೆಗೆ ಪಾತ್ರರಾದರು. ಜಾತ್ರೆಗೆ ಬಂದ ಭಕ್ತರಿಗಾಗಿ ಮಠದಲ್ಲಿ ಎರಡು ಕ್ವಿಂಟಲ್ ಶೇಂಗಾ ಹೋಳಿಗೆ ತಯಾರಿಸಲಾಗಿತ್ತು.

ಭಕ್ತರು ಶೇಂಗಾ ಹೋಳಿಗೆ, ಬೊಂದಿ , ಸಜ್ಜೆ ರೊಟ್ಟಿ ,ಜೋಳದ ರೊಟ್ಟಿ, ಪುಂಡಿ ಪಲ್ಯ, ಕಾಳು ಪಲ್ಯ, ಮಜ್ಜಿಗೆ ಮೊಸರು ಸವಿದರು.

ಈ ಸಂದರ್ಭದಲ್ಲಿ ವಿವಿಧ ಮಠದ ಪೂಜ್ಯರು ಪಟ್ಟದ ಪೂಜಾರಿಗಳು ಹಾಗೂ ಗ್ರಾಮದ ಮುಖಂಡರು ಸುತ್ತಮುತ್ತಲಿನ ಗ್ರಾಮದ ಭಕ್ತಾದಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಪ್ರಿಯಾಂಕಾ ಗಾಂಧಿ ಭದ್ರತೆಯಲ್ಲಿ ಭಾರೀ ಲೋಪ!



**ಮಲ್ಲಪುರಂ:** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ಅವರ ಬೆಂಗಾವಲು ಪಡೆ ತಡೆದ ಆರೋಪದ ಮೇಲೆ ಯೂಟ್ಯೂಬರ್ ಒಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಮಾರ್ಚ್ 31 ಮನ್ನುತ್ತಿ ಪೊಲೀಸರು ಆರೋಪಿ ಅನೀಶ್ ಅಬ್ರಹಾಂನನ್ನು ಬಂಧಿಸಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದಾಗ ಈ ಘಟನೆ ಬೆಳಕಿಗೆ ಬಂದಿದೆ. ಆರೋಪಿಯ ಕಾರನ್ನು ಸಹ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಮಲಪ್ಪುರಂ ಜಿಲ್ಲೆಯಿಂದ ಕೊಚ್ಚಿ ವಿಮಾನ ನಿಲ್ದಾಣಕ್ಕೆ ಹೋಗುತ್ತಿದ್ದಾಗ ಈ ಘಟನೆ ಸಂಭವಿಸಿದೆ.

## ಹಸುಗೂಸಿನ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿದ್ದ ಪಾಪಿ ತಂದೆ



**ದಕ್ಷಿಣ ಆಫ್ರಿಕಾ:** ತನ್ನ ಎಂಟು ದಿನದ ಹಸುಗೂಸಿನ ಮೇಲೆ ಅತ್ಯಾಚಾರವೆಸಗಿ ಕೊಲೆಮಾಡಿದ್ದು ನಾನೇ ಎಂದು ಪಾಪಿ ತಂದೆ ತಪ್ಪೊಪ್ಪಿಕೊಂಡಿದ್ದಾನೆ. ದಕ್ಷಿಣ ಆಫ್ರಿಕಾ 37 ವರ್ಷದ ಹ್ಯೂಗೊ ಫೆರೇರಾ ಎಂಬ ವ್ಯಕ್ತಿ ತನ್ನ ನವಜಾತ ಶಿಶುವಿನ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿದ್ದ. 2023ರ ಜೂನ್‌ನಲ್ಲಿ ಈ ಘಟನೆ ನಡೆದಿತ್ತು, ತನ್ನ ಮನೆಯಲ್ಲಿ ಇನ್ನಷ್ಟೇ ಕಣ್ಣು ಬಿಟ್ಟ ಕಂದಮ್ಮನ ಮೇಲೆ ದೌರ್ಜನ್ಯವೆಸಗಿದ್ದ. ಇದರ ಪರಿಣಾಮವಾಗಿ ತಲೆಗೆ ತೀವ್ರವಾದ ಗಾಯಗಳಾಗಿ ಮಗು ಸಾವನ್ನಪ್ಪಿತ್ತು. ಸದಾ ಮಕ್ಕಳನ್ನು ಕಾಯುತ್ತಾ ಅವರ ಶ್ರೀರಕ್ಷೆಯಾಗಿ ನಿಂತು ಮುಂಬರುವ ಎಲ್ಲಾ ಕಷ್ಟಗಳನ್ನು ಮಕ್ಕಳಿಗೆ ಬಾರದಂತೆ ತಡೆಯಬೇಕಿದ್ದ ವ್ಯಕ್ತಿಯೇ ದುಷ್ಕೃತ್ಯವೆಸಗಿದ್ದಾನೆ. ನ್ಯೂಸ್24 ವರದಿಯ ಪ್ರಕಾರ, ಕೋಪ ಮತ್ತು ಮಗುವಿಗೆ ನೋವುಂಟು ಮಾಡುವ ಬಯಕೆಯಿಂದ ಈ ಅಪರಾಧ ನಡೆದಿದೆ ಮತ್ತು ಫೆರೇರಾ ಉದ್ದೇಶಪೂರ್ವಕವಾಗಿ ಮತ್ತು ಕ್ರೂರವಾಗಿ ವರ್ತಿಸಿದ್ದಾಗಿ ಒಪ್ಪಿಕೊಂಡಿದ್ದಾರೆ. ಶಿಶುವಿನ ತಾಯಿ ಮೌರೀನ್ ಬ್ರ್ಯಾಂಡ್ ಮಾತನಾಡಿ, ಮಗುವನ್ನು ಗಂಡನ ಬಳಿ ಬಿಟ್ಟು ಮಗುವಿಗೆ ಬಟ್ಟೆ ಖರೀದಿಸಲು ಶಾಪ್‌ಗೆ ಹೋಗಿದ್ದಳು. ಆಕೆ ಮನೆಗೆ ಹಿಂದಿರುಗಿದಾಗ ಮಗು ಮಾರಣಾಂತಿಕ ಗಾಯಗಳಿಂದ ನರಳುತ್ತಿರುವುದನ್ನು ಕಂಡಿದ್ದಾಳೆ. ಮಗುವನ್ನು ಕೂಡಲೇ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ತೀವ್ರ ಗಾಯಗಳಾಗಿದ್ದ ಕಾರಣ ಮಗು ಮೃತಪಟ್ಟಿದೆ. ನನಗೆ ಮಗುವನ್ನು ನೋಡಿಕೊಳ್ಳಲು ಸಾಧ್ಯವಿಲ್ಲ, ಅದಕ್ಕೆ ಹಾಲುಣಿಸಲು ಐದು ನಿಮಿಷಗಳಲ್ಲಿ ನೀನು ವಾಪಸ್ ಬರಬೇಕು ಎಂದು ಆತ ಷರತ್ತು ಹಾಕಿದ್ದ. ತನ್ನನ್ನು ಮಗುವಿನೊಂದಿಗೆ ಬಿಟ್ಟು ಹೋಗಿದ್ದಕ್ಕೆ ಕೋಪಗೊಂಡು ಈ ಕೃತ್ಯವೆಸಗಿದ್ದ ಎನ್ನಲಾಗಿದೆ.

ಮಗು ಅಳಲು ಶುರು ಮಾಡಿತ್ತು, ಮಗುವಿನ ಕತ್ತಿನ ಹಿಂಭಾಗ ಹಿಡಿದು ಪದೇ ಪದೇ ಏಟು ಕೊಟ್ಟಿದ್ದ. ಬಳಿಕ ಮಗುವಿನ ಮೇಲೆ ಅತ್ಯಾಚಾರವೆಸಗಿದ್ದಾನೆ. ಈಗಾಗಲೇ ತಲೆಗೆ ಪೆಟ್ಟು ಬಿದ್ದು ಮಗು ನರಳುತ್ತಿತ್ತು, ಆ ನೋವನ್ನು ಮತ್ತಷ್ಟು ಹೆಚ್ಚಿಸಲು ಆತ ಲೈಂಗಿಕ ದೌರ್ಜನ್ಯವೆಸಗಿದ್ದಾನೆ. ಮಗು ಸಾಯಬಹುದು ಎಂದು ತಿಳಿದಿದ್ದರೂ ದೌರ್ಜನ್ಯ ಮುಂದುವರೆಸಿದ್ದ.


## 80 ಲಕ್ಷ ಮೌಲ್ಯದ 200 ಕೆ.ಜಿ ಸಮುದ್ರ ಸೌತೆಯನ್ನು ವಶ

**ಚೆನ್ನೈ:** ತಮಿಳುನಾಡಿನ ರಾಮೇಶ್ವರಂ ಬಳಿ 80 ಲಕ್ಷ ಮೌಲ್ಯದ 200 ಕೆ.ಜಿ 'ಸಮುದ್ರ ಸೌತೆ'ಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಭಾರತೀಯ ಕರಾವಳಿ ರಕ್ಷಣಾ ಪಡೆ ತಿಳಿಸಿದೆ.

ರಾಮೇಶ್ವರಂ ಬಳಿಯ ದಕ್ಷಿಣ ಉಚಿಪುಲಿ ಸಮುದ್ರ ತೀರದಲ್ಲಿ ನಿಷಿದ್ಧ ವಸ್ತುಗಳ ಸಾಗಣೆ ಮಾಡುತ್ತಿರುವ ಬಗ್ಗೆ ದೊರಕಿದ ಖಚಿತ ಮಾಹಿತಿ ಮೇರೆಗೆ ಮಂಡಪಂನಲ್ಲಿ ರಕ್ಷಣಾ ಪಡೆಯು ಕಳ್ಳಸಾಗಣೆ ವಿರೋಧಿ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಕಾರ್ಯಾಚರಣೆ ವೇಳೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಸುಮಾರು 200 ಕೆ.ಜಿ ತೂಕದ ಸಮುದ್ರ ಸೌತೆಯನ್ನು ಹೊಂದಿರುವ ಐದು ಡ್ರಮ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಮಾರುಕಟ್ಟೆ ಮೌಲ್ಯ 80 ಲಕ್ಷ ಎಂದು ಅಂದಾಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಸಮುದ್ರ ಸೌತೆಯ ಮಾರಾಟಕ್ಕೆ ಸರ್ಕಾರವು ನಿಷೇಧ ಹೇರಿದೆ.



## 3 ಕಾರ್ಖಾನೆಗಳು ಸ್ಥಳದಲ್ಲೇ ಸುಟ್ಟು ಭಸ್ಮ



**ನೊಯ್ಡಾ:** ಗ್ರೇಟರ್ ನೋಯ್ಡಾದ ಇಕೋಟೆಕ್ 3 ಪೊಲೀಸ್ ಠಾಣೆ ಪ್ರದೇಶದ ಕೂಲರ್ ಉತ್ಪಾದನಾ ಘಟಕದಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡಿದ್ದು, 3 ಕಾರ್ಖಾನೆಗಳು ಬೆಂಕಿ ಹೊತ್ತಿ ಉರಿದಿವೆ.

30 ಅಗ್ನಿಶಾಮಕ ವಾಹನಗಳು ಭೀಕರ ಬೆಂಕಿಯನ್ನು ನಿಯಂತ್ರಣಕ್ಕೆ ತರುವಲ್ಲಿ ನಿರತವಾಗಿವೆ. ಈ ಘಟನೆಯ ವೀಡಿಯೊಗಳು ಸ್ಥಳದಿಂದ ದಟ್ಟ ಕಪ್ಪು ಬಣ್ಣದ ಹೊಗೆ ಹೊರಬರುತ್ತಿರುವುದನ್ನು ತೋರಿಸಿವೆ. ಕಾರ್ಖಾನೆಯಲ್ಲಿ ಮಧ್ಯಾಹ್ನ 1.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದ್ದು, ದೂರದಿಂದಲೇ ಹೊಗೆ ಹೊರಬರುತ್ತಿರುವುದು ಕಂಡುಬಂದಿದೆ. ಇಲ್ಲಿಯವರೆಗೆ ಯಾವುದೇ ಸಾವು ನೋವು ಸಂಭವಿಸಿಲ್ಲ ಮತ್ತು ಯಾರೂ ಒಳಗೆ ಸಿಲುಕಿಕೊಂಡಿಲ್ಲ.



## ಮಾತೃಶ್ರೀ ಹಾಗೂ ಕೃಷ್ಣಕುಮಾರ್‌ಗೆ ಕೋಲ್ಕತ್ತಾದಲ್ಲಿ ಗೌರವ

ಕರ್ನಾಟಕ ಅಸೋಸಿಯೇಷನ್(ರಿ) ಕೊಲ್ಕತ್ತಾ ಯುಗಾದಿ ಹಬ್ಬದ ಪ್ರಯುಕ್ತ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕೃಷ್ಣಕುಮಾರ್ ಹಾಗೂ ಚೂಡಾರತ್ನಮ್ಮನವರನ್ನು ಕಾಳಿಮತೆಯ ಭಾವಚಿತ್ರವನ್ನು ನೀಡುವುದರೊಂದಿಗೆ ಆತ್ಮೀಯವಾಗಿ ಗೌರವಿಸಲಾಯಿತು. ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ ರಾಜ್ಯದ ತೀರ್ಥಯಾತ್ರಾ ಸ್ಥಳಗಳನ್ನು ಸಂದರ್ಶಿಸುತ್ತಿರುವ ತಾಯಿ ಮಗರೀರ್ವರು ಇದುವರೆಗೆ 94,882 ಕಿಲೋಮೀಟರ್ಗಳನ್ನು ಪೂರೈಸಿರುತ್ತಾರೆ. ಕಲ್ಕತ್ತಾ ಕರ್ನಾಟಕ ಬಳಗದ ಎಲ್ಲಾ ಸದಸ್ಯರು, ಪದಾಧಿಕಾರಿಗಳು ತಮ್ಮ ಪರಿವಾರದೊಂದಿಗೆ ಉಪಸ್ಥಿತರಿದ್ದರು.

# ಶೀಘ್ರದಲ್ಲೇ ಅಂಡರ್‌ವಾಟರ್ ರೈಲು ಸಂಚಾರ

## ನೀರಿನ ಅಡಿಯಲ್ಲಿ ಪ್ರಯಾಣಿಸುವುದು ಸಂಪೂರ್ಣವಾಗಿ ವಿಭಿನ್ನ ಅನುಭವ

• **ಉದಯವಾಹಿನಿ, ನವದೆಹಲಿ**

ಭಾರತದ ರೈಲ್ವೆ ವಲಯದಲ್ಲಿ ಕ್ರಾಂತಿಯನ್ನುಂಟುಮಾಡುವ ನಿಟ್ಟಿನಲ್ಲಿ ಭಾರತ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ನಡುವೆ ಹೊಸ ರೈಲು ಸೇವೆ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ರೈಲು ಸೇವೆಗಳು ಪ್ರಾರಂಭವಾದ ನಂತರ ಯುಎಇ ಮತ್ತು ಭಾರತದ ನಡುವಿನ ಪ್ರಯಾಣವು ಹೆಚ್ಚು ಸುಲಭವಾಗುತ್ತದೆ. ವರದಿಗಳ ಪ್ರಕಾರ, ದುಬೈ ಮತ್ತು ಮುಂಬೈ ನಡುವೆ 1,200 ಮೈಲಿ (ಸುಮಾರು 2,000 ಕಿಮೀ) ಉದ್ದದ ನೀರೊಳಗಿನ ರೈಲು ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ನೀರಿನ ಅಡಿಯಲ್ಲಿ ಪ್ರಯಾಣಿಸುವುದು ಸಂಪೂರ್ಣವಾಗಿ ವಿಭಿನ್ನ ಅನುಭವವಾಗಿರುತ್ತದೆ. ಇದು ಇದು ಗ್ಲಾಸ್‌ನಿಂದ ನಿರ್ಮಿತವಾದ ರೈಲು ಭೋಗಿಯಾಗಿದ್ದು, ಇದರ ಮೂಲಕ ಪ್ರಯಾಣದ ಸಮಯದಲ್ಲಿ ಜನರು ನೀರೊಳಗಿನ ಪ್ರಪಂಚವನ್ನು ನೋಡಲು ಸಾಧ್ಯವಾಗುತ್ತದೆ. ಆದರೆ ಕ್ಲಾಸ್ಟ್ರೋಫೋಬಿಯಾ ಇರುವವರಿಗೆ ಇದು ಭಯಾನಕವಾಗಬಹುದು.

ಏನಿದರ ವಿಶೇಷತೆ




ಭಾರತ ಮತ್ತು ದುಬೈ ನಡುವೆ ಹೊಸ ಸಾರಿಗೆ ಸೌಲಭ್ಯವನ್ನು ಒದಗಿಸಲು ಯುಎಇಯ ರಾಷ್ಟ್ರೀಯ ಸಲಹೆಗಾರ ಬ್ಯೂರೋ ಲಿಮಿಟೆಡ್ ಈ ಯೋಜನೆಯನ್ನು ಪ್ರಸ್ತಾಪಿಸಿದೆ. ಹೆಚ್ಚುವರಿಯಾಗಿ, ಈ ಯೋಜನೆಯ ಪೂರ್ಣ ಗೊಳಿಸುವಿಕೆಯು ಎರಡೂ ದೇಶಗಳ ನಡುವಿನ ವ್ಯಾಪಾರ ಸಂಬಂಧಗಳನ್ನು ಬಲಪಡಿಸುತ್ತದೆ.

### ಅಂಡರ್‌ವಾಟರ್ ರೈಲಿನ ವಿಶೇಷತೆಗಳು

- ವರದಿಗಳ ಪ್ರಕಾರ, ಈ ಅಂಡರ್‌ವಾಟರ್ ರೈಲಿನ ವೇಗ ಗಂಟೆಗೆ 600ರಿಂದ 1000 ಕಿ.ಮೀ ಇರುತ್ತದೆ.
- ಮುಂಬೈನಿಂದ ದುಬೈಗೆ ಪ್ರಯಾಣವು ಕೇವಲ 2 ಗಂಟೆಗಳಲ್ಲಿ ಪೂರ್ಣಗೊಳ್ಳುತ್ತದೆ.
- ಈ ನೀರೊಳಗಿನ ರೈಲು ಯೋಜನೆಯು ಅಗ್ಗವಾಗುವುದಿಲ್ಲ. ಇದಕ್ಕೆ ಶತಕೋಟಿ ಡಾಲರ್‌ಗಳ ಹೂಡಿಕೆಯ ಅಗತ್ಯವಿರುತ್ತದೆ.
- ಈ ರೈಲು ಪ್ರಯಾಣಿಕರ ಅನುಕೂಲವನ್ನು ಹೆಚ್ಚಿಸುವುದಲ್ಲದೆ, ದುಬೈನಿಂದ ಭಾರತಕ್ಕೆ ಕಚ್ಚಾ ತೈಲ ಮತ್ತು ಇತರ ಸರಕುಗಳನ್ನು ತ್ವರಿತವಾಗಿ ಸಾಗಿಸಲು ಹೊಸ ಮಾರ್ಗವನ್ನು ಸೃಷ್ಟಿಸುತ್ತದೆ.
- ಈ ಯೋಜನೆಯ ಕುರಿತು ಪ್ರಸ್ತುತ ಚರ್ಚೆಗಳು ನಡೆಯುತ್ತಿವೆ. ಇದು ಅನುಮೋದನೆ ಪಡೆದರೆ 2030ರ ವೇಳೆಗೆ ಪೂರ್ಣಗೊಳ್ಳಲಿದೆ.
- ಈ ರೈಲು ವಾಯು ಸೇವೆಗಳಿಗೆ ಕಠಿಣ ಸ್ಪರ್ಧೆಯನ್ನು ನೀಡುತ್ತದೆ. ಈ ರೈಲು ಆರಂಭವಾದ ನಂತರ ಎರಡೂ ದೇಶಗಳ ನಡುವಿನ ಪ್ರಯಾಣವು ಅತ್ಯಂತ ಸುಲಭವಾಗುತ್ತದೆ.
- ಅಂಡರ್‌ವಾಟರ್ ರೈಲಿನಲ್ಲಿ ಜನರು ಕೇವಲ 2 ಗಂಟೆಗಳಲ್ಲಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ತಲುಪಲು ಸಾಧ್ಯವಾಗುತ್ತದೆ.

# ರಾವತ್ ವಿರುದ್ಧ ಫಡ್ನವಿಸ್ ವಾಗ್ದಾಳಿ

• **ಉದಯವಾಹಿನಿ, ನವದೆಹಲಿ**



ಭಾನುವಾರ ಪ್ರಧಾನಿ ನರೇಂದ್ರ ಮೋದಿ ನಾಗ್ಪುರದ ಆರ್‌ಎಸ್‌ಎಸ್ ಕಚೇರಿಗೆ ತೆರಳಿದ್ದರು. ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡಿದ ಮೊದಲ ಪ್ರಧಾನಿಯೆಂಬ ಹೆಗ್ಗಳಿಕೆ ಮೋದಿಯವರದ್ದು. ಆದರೆ, ಈ ಬಗ್ಗೆ ಟೀಕಿಸಿರುವ ಶಿವಸೇನಾ ನಾಯಕ ಸಂಜಯ್ ರಾವತ್ , ಪ್ರಧಾನಿ ನರೇಂದ್ರ ಮೋದಿ ಸೆಪ್ಟೆಂಬರ್‌ನಲ್ಲಿ ಪಿಎಂ ಸ್ಥಾನ ತ್ಯಜಿಸುತ್ತಾರೆಯೇ, ನಿವೃತ್ತರಾಗುತ್ತಾರೆಯೇ ಎಂದು ಪ್ರಶ್ನಿಸಿದ್ದಾರೆ. ಅಲ್ಲದೆ, ಮುಂದಿನ ಪ್ರಧಾನಮಂತ್ರಿಯನ್ನು ಆರ್‌ಎಸ್‌ಎಸ್ ಆಯ್ಕೆ ಮಾಡುತ್ತದೆ. ಆರ್‌ಎಸ್‌ಎಸ್ ದೇಶದಲ್ಲಿ ಬದಲಾವಣೆ ಬಯಸುತ್ತಿದೆ. ಹೀಗಾಗಿ, ಮೋದಿ ಅಧಿಕಾರದಿಂದ ಕೆಳಗಿಳಿಯಲಿದ್ದಾರೆ ಎಂಬ ಹೇಳಿಕೆಯನ್ನೂ ಸಂಜಯ್ ರಾವತ್ ನೀಡಿದ್ದರು. ಇದನ್ನು ತಳ್ಳಿಹಾಕಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ''ಮೋದಿ ತಮ್ಮ ಉತ್ತರಾಧಿಕಾರಿಯನ್ನು ಹುಡುಕುವ ಅಗತ್ಯವಿಲ್ಲ. ಅವರು ನಮ್ಮ ನಾಯಕ ಮತ್ತು ನಮ್ಮ ನಾಯಕರಾಗಿ ಮುಂದಿನ ಅವಧಿಗೂ ಮುಂದುವರಿಯುತ್ತಾರೆ'' ಎಂದು ನಾಗ್ಪುರದಲ್ಲಿ ಘೋಷಿಸಿದರು.

ಸೆಪ್ಟೆಂಬರ್ 17ರಂದು 75 ವರ್ಷ ತುಂಬಲಿರುವ ಪ್ರಧಾನಿ ಮೋದಿ ಆಡಳಿತ ಪಕ್ಷದ ಅಘೋಷಿತ ನಿಯಮಕ್ಕೆ ಅನುಗುಣವಾಗಿ ಈ ವರ್ಷ ರಾಜೀನಾಮೆ ನೀಡುತ್ತಾರೆ ಎಂಬ ಶಿವಸೇನೆಯ ನಾಯಕ ಸಂಜಯ್ ರಾವತ್ ಅವರ ಹೇಳಿಕೆಗೆ ದೇವೇಂದ್ರ ಫಡ್ನವೀಸ್ ತಿರುಗೇಟು ನೀಡಿದ್ದಾರೆ. ಬಿಜೆಪಿಯಲ್ಲಿ ಅಂತಹ ಯಾವುದೇ ನಿಯಮ ಅಸ್ತಿತ್ವದಲ್ಲಿಲ್ಲ ಮತ್ತು ಕೇಂದ್ರ ಸಚಿವ ಸಂಪುಟದಲ್ಲಿ ಕನಿಷ್ಠ ಒಬ್ಬ ಸದಸ್ಯರು ಆ 'ವಯಸ್ಸಿನ ಮಿತಿ'ಯನ್ನು ಮೀರಿದ್ದಾರೆ ಎಂದು ಪಕ್ಷ ಹೇಳಿದೆ. 80 ವರ್ಷದ ಬಿಹಾರ ನಾಯಕ ಜಿತನ್ ರಾಮ್ ಮಾಂಝಿ ಅವರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವರಾಗಿದ್ದಾರೆ. ನರೇಂದ್ರ ಮೋದಿ ಸೇರಿದಂತೆ ಇತರರು ಆ ಮಿತಿಯ ಒಂದು ಅಥವಾ ಎರಡು ವರ್ಷಗಳ ಒಳಗೆ ಇದ್ದಾರೆ.

ಕಳೆದ ವರ್ಷದ ಚುನಾವಣೆಯ ಸಮಯದಲ್ಲಿ ಗೃಹ ಸಚಿವ ಅಮಿತ್ ಶಾ ಅವರನ್ನು ಪ್ರಧಾನಿಯಾಗಿ ಘೋಷಿಸಲು ಸಿದ್ಧಪಡಿಸಲಾಗುತ್ತಿದೆ ಎಂಬ ಸುದ್ದಿಗಳು ಹರಿದಾಡಿತ್ತು. ಆಗ ಮೋದಿ ಅವರ 'ಭವಿಷ್ಯ'ದ ಬಗ್ಗೆ ಗುಸುಗುಸು ಮೂಡಿತ್ತು. ಇದೀಗ ಪ್ರಧಾನಿ ಮೋದಿ ನಾಗ್ಪುರ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಧಾನ ಕಚೇರಿಗೆ ಭೇಟಿ ನೀಡಿದ ನಂತರ ಮತ್ತೆ ಆ ಬಗ್ಗೆ ಚರ್ಚೆಗಳು ಶುರುವಾಗಿವೆ. ಆರ್‌ಎಸ್‌ಎಸ್ ಅನ್ನು ಆಡಳಿತ ಪಕ್ಷದ ಸೈದ್ಧಾಂತಿಕ ಮಾರ್ಗದರ್ಶಕ ಎಂದು ಪರಿಗಣಿಸಲಾಗಿದೆ.

''ಪಿಎಂ ಮೋದಿ ಸೆಪ್ಟೆಂಬರ್‌ನಲ್ಲಿ ತಮ್ಮ ನಿವೃತ್ತಿ ಪ್ಲಾನ್ ಘೋಷಿಸಲು ಆರ್‌ಎಸ್‌ಎಸ್ ಪ್ರಧಾನ ಕಚೇರಿಗೆ ಹೋಗಿರಬಹುದು'' ಎಂದು ಸಂಜಯ್ ರಾವತ್ ಘೋಷಿಸಿದ್ದರು. ಅವರ ಉತ್ತರಾಧಿಕಾರಿಯೂ ಮಹಾರಾಷ್ಟ್ರದವರಾಗಿರುತ್ತಾರೆ.

ಮೋದಿಯವರ ಉತ್ತರಾಧಿಕಾರಿ ಮಹಾರಾಷ್ಟ್ರದವರಾಗಿರುತ್ತಾರೆ. ಆ ಬಗ್ಗೆ ಆರ್‌ಎಸ್‌ಎಸ್ ನಿರ್ಧರಿಸುತ್ತದೆ. ನಾನು ಅರ್ಥಮಾಡಿಕೊಂಡಂತೆ 'ಸಂಘ ಪರಿವಾರ' ದೇಶದ ನಾಯಕತ್ವದಲ್ಲಿ ಬದಲಾವಣೆಯನ್ನು ಬಯಸುತ್ತಿದೆ. ಪ್ರಧಾನಿ ಮೋದಿಯವರ ಸಮಯ ಮುಗಿದಿದೆ. ಅವರು ಬದಲಾವಣೆಯನ್ನು ಬಯಸುತ್ತಾರೆ ಮತ್ತು ಮುಂದಿನ ಬಿಜೆಪಿ ಮುಖ್ಯಸ್ಥರನ್ನು ಆಯ್ಕೆ ಮಾಡಲು ಬಯಸುತ್ತಾರೆ'' ಎಂದು ಸಂಜಯ್ ರಾವತ್ ಹೇಳಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ದೇವೇಂದ್ರ ಫಡ್ನವೀಸ್, ''2029ರಲ್ಲಿ ನಾವು ಮೋದಿಯನ್ನು ಮತ್ತೆ ಪ್ರಧಾನಿಯಾಗಿ ನೋಡುತ್ತೇವೆ. ಮೋದಿ ನಮ್ಮ ತಂದೆಯಿದ್ದಂತೆ. ನಮ್ಮ ಸಂಸ್ಕೃತಿಯಲ್ಲಿ ತಂದೆ ಜೀವಂತವಾಗಿರುವಾಗ ಉತ್ತರಾಧಿಕಾರದ ಬಗ್ಗೆ ಮಾತನಾಡುವುದು ಸೂಕ್ತವಲ್ಲ. ಅದು ಮೊಘಲ್ ಸಂಸ್ಕೃತಿ. ಅದನ್ನು ಚರ್ಚಿಸಲು ಈಗ ಸಮಯ ಬಂದಿಲ್ಲ'' ಎಂದು ಅವರು ಹೇಳಿದರು.



ಮೋದಿ ನಮ್ಮ ತಂದೆ ಇದ್ದಂತೆ

## ಪಾಕಿಸ್ತಾನದಲ್ಲಿ ಉಗ್ರ ಹಫೀಜ್ ಸಯೀದ್ ಆಪ್ತ ಅಬ್ದುಲ್ ಹತ್ಯೆ



**ಇಸ್ಲಾಮಾಬಾದ್:** ಪಾಕಿಸ್ತಾನದಲ್ಲಿ ಉಗ್ರ, ಹಫೀಜ್ ಸಯೀದ್ ಆಪ್ತ ಲಷ್ಕರ್ ಎ ತೊಯ್ಬಾದ ಹಣಕಾಸು ವ್ಯವಹಾರ ನೋಡಿಕೊಳ್ಳುತ್ತಿದ್ದ ಅಬ್ದುಲ್ ರೆಹಮಾನ್‌ನನ್ನು ಹತ್ಯೆ ಮಾಡಲಾಗಿದ್ದು, ವಿಡಿಯೋ ಹೊರಬಿದ್ದಿದೆ. ಅಪರಿಚಿತ ವ್ಯಕ್ತಿಗಳು ಬೈಕ್‌ನಲ್ಲಿ ಬಂದು ಅಂಗಡಿಯೊಳಗಿದ್ದ ರೆಹಮಾನ್ ಮೇಲೆ ಗುಂಡು ಹಾರಿಸಿ ಪರಾರಿಯಾಗಿದ್ದಾರೆ.


ಪಾಕಿಸ್ತಾನ ಮತ್ತು ಭಾರತದಾದ್ಯಂತ ವಿವಿಧ ದಾಳಿಗಳಲ್ಲಿ ಭಾಗಿಯಾಗಿರುವುದರಿಂದ ಹಲವಾರು ದೇಶಗಳು ಈ ಸಂಘಟನೆಯನ್ನು ಭಯೋತ್ಪಾದಕ ಸಂಘಟನೆ ಕರೆದಿದೆ. ಈ ಗುಂಪಿಗೆ ಆರ್ಥಿಕ ನೆರವು ಸಂಗ್ರಹಿಸುವುದು ಆತನ ಜವಾಬ್ದಾರಿಯಾಗಿತ್ತು. ಮಾರ್ಚ್ 16ರಂದು ಪಾಕಿಸ್ತಾನದಲ್ಲಿ ಮತ್ತೊಬ್ಬ ಭಯೋತ್ಪಾದಕ ಮತ್ತು ಹಫೀಜ್ ಸಯೀದ್‌ನ ಆಪ್ತ ಸಹಾಯಕನನ್ನು ಹತ್ಯೆ ಮಾಡಿದ ಕೆಲವು ದಿನಗಳ ನಂತರ ಇದು ಸಂಭವಿಸಿದೆ. ಮೃತನನ್ನು ಅಬು ಕತಾಲ್ ಎಂದು ಗುರುತಿಸಲಾಗಿದೆ.

# ಭೂಕಂಪಕ್ಕೆ ಸತ್ತವರ ಸಂಖ್ಯೆ 2056ಕ್ಕೆ ಏರಿಕೆ

ಮ್ಯಾನ್ಮಾರ್ ಪ್ರಸ್ತುತ ಎರಡು ದುರಂತಗಳನ್ನು ಎದುರಿಸುತ್ತಿದೆ. ಒಂದೆಡೆ, ವಿನಾಶಕಾರಿ ಭೂಕಂಪವು 2,056 ಕ್ಕೂ ಹೆಚ್ಚು ಜನರ ಜೀವಗಳನ್ನು ಬಲಿತೆಗೆದುಕೊಂಡಿದೆ. ಮತ್ತೊಂದೆಡೆ, ಸೇನೆಯು ತನ್ನ ವಾಯುಪಡೆ ಮೂಲಕ ಮೂಲಕ ಸಾಮಾನ್ಯ ಜನರ ಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ. ಏತನ್ಮಧ್ಯೆ, ಭೂಕಂಪದ ವರದಿ ಮಾಡಲು ಸಿದ್ದತೆ ನಡೆಸಿದ್ದ ವಿದೇಶಿ ಪತ್ರಿಕಾ ಮಾಧ್ಯಮಗಳನ್ನು ಮ್ಯಾನ್ಮಾರ್‌ಗೆ ಪ್ರವೇಶಿಸುವುದನ್ನು ನಿರ್ಬಂಧಿಸಿ ಜುಂಟಾ ಆದೇಶಿಸಿದೆ.

**ನೈಪಿಡಾವ್:** ಮ್ಯಾನ್ಮಾರ್ ಪ್ರಸ್ತುತ ಎರಡು ದುರಂತಗಳನ್ನು ಎದುರಿಸುತ್ತಿದೆ. ಒಂದೆಡೆ, ವಿನಾಶಕಾರಿ ಭೂಕಂಪವು 2,056 ಕ್ಕೂ ಹೆಚ್ಚು ಜನರ ಜೀವಗಳನ್ನು ಬಲಿತೆಗೆದುಕೊಂಡಿದೆ. ಮತ್ತೊಂದೆಡೆ, ಸೇನೆಯು ತನ್ನ ವಾಯುಪಡೆ ಮೂಲಕ ಮೂಲಕ ಸಾಮಾನ್ಯ ಜನರ ಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ. ದೇಶಕ್ಕೆ ಪರಿಹಾರ ಕಾರ್ಯಗಳು ಅತ್ಯಂತ ಅಗತ್ಯವಾಗಿರುವಾಗ, ಮ್ಯಾನ್ಮಾರ್ ಸೇನೆ (ಜುಂಟಾ) ನಾಗರಿಕ ಪ್ರದೇಶಗಳಲ್ಲಿ ವಾಯುದಾಳಿಗಳನ್ನು ತೀವ್ರಗೊಳಿಸುತ್ತಿದೆ ಎಂದು ಆರೋಪಿಸಲಾಗಿದೆ. ಮ್ಯಾನ್ಮಾರ್‌ನ ಅತ್ಯಂತ ಹಳೆಯ ಸಶಸ್ತ್ರ ಬಂಡಾಯ ಗುಂಪುಗಳಲ್ಲಿ ಒಂದಾದ ಕರೆನ್ ನ್ಯಾಷನಲ್ ಯೂನಿಯನ್ ಸೇನೆಯು ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಬದಲು ತನ್ನದೇ ಆದ ಜನರ ಮೇಲೆ ದಾಳಿ ಮಾಡುತ್ತಿದೆ ಎಂದು ಟೀಕಿಸಿದೆ.

ಇನ್ನೊಂದೆಡೆ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೀಕರ ಭೂಕಂಪಗಳಲ್ಲಿ ಸಾವನ್ನಪ್ಪಿದವರ ಸಂಖ್ಯೆ 2,056 ಕ್ಕೆ ಏರಿದೆ ಎಂದು ಆಡಳಿತಾರೂಢ ಮಿಲಿಟರಿ ಜುಂಟಾ ಹೇಳಿದೆ. ಏತನ್ಮಧ್ಯೆ, ಭೂಕಂಪದ ವರದಿ ಮಾಡಲು ಸಿದ್ದತೆ ನಡೆಸಿದ್ದ ವಿದೇಶಿ ಪತ್ರಿಕಾ ಮಾಧ್ಯಮಗಳನ್ನು ಮ್ಯಾನ್ಮಾರ್‌ಗೆ ಪ್ರವೇಶಿಸುವುದನ್ನು ನಿರ್ಬಂಧಿಸಿ ಜುಂಟಾ ಆದೇಶಿಸಿದೆ.




ಬದುಕುಳಿದ ಸಂತ್ರಸ್ತರ ಮೇಲೆ ಮ್ಯಾನ್ಮಾರ್ ಸೇನೆ ದೌರ್ಜನ್ಯ!



# 243 ಸ್ಥಾನಗಳಲ್ಲಿ ಗರಿಷ್ಠ ಸೀಟು ಗೆಲ್ಲಲು ಶಾ ಮಾಸ್ಟರ್ ಪ್ಲ್ಯಾನ್

## ದುರ್ಬಲ ಬೂತ್‌ಗಳನ್ನು ಗುರುತಿಸಿ ಕಾರ್ಯಾಚರಣೆ ಆರಂಭಿಸಲು ಪಕ್ಷದ ನಾಯಕರಿಗೆ ಗೃಹ ಸಚಿವ



**ಬಿಹಾರ:** ಈ ಬಾರಿಯ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ 225ಕ್ಕಿಂತ ಹೆಚ್ಚು ಸ್ಥಾನ ಗೆಲ್ಲುವ ಗುರಿಯೊಂದಿಗೆ ಅಮಿತ್ ಶಾ ತಮ್ಮ ತಂತ್ರಗಳನ್ನು ತೆರೆದಿಟ್ಟಿದ್ದಾರೆ. ಬಿಹಾರದಲ್ಲಿ ದುರ್ಬಲ ಬೂತ್‌ಗಳನ್ನು ಗುರುತಿಸಿ ಕಾರ್ಯಾಚರಣೆ ಆರಂಭಿಸಲು ಪಕ್ಷದ ನಾಯಕರಿಗೆ ಗೃಹ ಸಚಿವ ಅಮಿತ್ ಶಾ ಸೂಚಿಸಿದ್ದಾರೆ. ಅಕ್ಟೋಬರ್ - ನವೆಂಬರ್ ವೇಳೆ ಬಿಹಾರದಲ್ಲಿ ವಿಧಾನಸಭೆ ಚುನಾವಣೆ ನಡೆಯುವ ಸಾಧ್ಯತೆ ಇದೆ.

ಈ ವರ್ಷದ ದ್ವಿತಿಯಾರ್ಧದಲ್ಲಿ ನಡೆಯಲಿರುವ ಬಿಹಾರ ಚುನಾವಣೆಯಲ್ಲಿ ಬಿಜೆಪಿ ಈಗಿನಿಂದಲೇ ತಯಾರಿ ಆರಂಭಿಸಿದೆ. ಚುನಾವಣೆ ಹಿನ್ನೆಲೆಯಲ್ಲಿ ಬಿಹಾರಕ್ಕೆ ಒಂದೂವರೆ ದಿನಗಳ ಪ್ರವಾಸ ಕೈಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ 243ರಲ್ಲಿ 225ಕ್ಕೂ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಗುರಿ ಹಾಕಿಕೊಂಡಿದ್ದಾರೆ. 243 ಸ್ಥಾನಗಳ ವಿಧಾನಸಭೆಯಲ್ಲಿ ಎನ್‌ಡಿಎ 225ಕ್ಕೂ ಹೆಚ್ಚು ಸ್ಥಾನ ಗೆಲ್ಲಬೇಕು ಎಂದಿರುವ ಅವರು 'ಮಿಷನ್ -225 ಪ್ಲಸ್' ಗುರಿಯನ್ನು ನಿಗದಿಪಡಿಸಿದ್ದಾರೆ. ಬಿಹಾರ ರಾಜಧಾನಿ ಪಾಟ್ನಾದಲ್ಲಿ ಇಳಿದಿದ್ದ ಅಮಿತ್ ಶಾ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಸ್ಥಳೀಯ ಪರಿಸ್ಥಿತಿಯನ್ನು ಅವಲೋಕಿಸಲು ಪಕ್ಷದ ನಾಯಕರೊಂದಿಗೆ ಸತತ ಎರಡು ಗೌಪ್ಯ ಸಭೆಗಳನ್ನು ನಡೆಸಿದರು. ಮುಂದಿನ ಆರು ತಿಂಗಳ ವಿವರವಾದ ಕಾರ್ಯಸೂಚಿಯನ್ನು ಬಹಿರಂಗಪಡಿಸಿದ ಅವರು, ಎನ್‌ಡಿಎ ಪಕ್ಷಗಳೊಂದಿಗೆ ಸಮನ್ವಯದಿಂದ ಕೆಲಸ ಮಾಡುವಂತೆ ಪಕ್ಷದ ನಾಯಕರಿಗೆ ಸೂಚಿಸಿದರು.

ಪಕ್ಷಗಳ ಉನ್ನತ ನಾಯಕರೊಂದಿಗೆ ಚರ್ಚಿಸಿ ಸಮನ್ವಯದಿಂದ ಸೀಟು ಹಂಚಿಕೆಯನ್ನು ಅಂತಿಮಗೊಳಿಸಲಾಗುವುದು ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದರು.

ಮಿಷನ್ 225 ಪ್ಲಸ್

### ಮಧ್ಯ ಪ್ರದೇಶ, ಮಹಾರಾಷ್ಟ್ರ ಉದಾಹರಣೆ ನೀಡಿದ ಶಾ

**ಸಭೆಯಲ್ಲಿ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದ ಮಾದರಿಯಲ್ಲಿ ಮತದಾರರ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ಕೆಲಸ ಮಾಡಬೇಕು ಎಂದು ಅಮಿತ್ ಶಾ ಪಕ್ಷದ ನಾಯಕರಿಗೆ ಕರೆ ನೀಡಿದರು. ನಿರ್ದಿಷ್ಟ ಉದಾಹರಣೆಗಳನ್ನು ನೀಡಿದ ಅವರು, ಮಧ್ಯಪ್ರದೇಶದ ಕೆಲವು ಪ್ರದೇಶಗಳಲ್ಲಿ ಬಿಜೆಪಿ ಎಂದೂ ಶೇ. 23ಕ್ಕಿಂತ ಹೆಚ್ಚಿನ ಮತಗಳನ್ನು ಗಳಿಸಿರಲಿಲ್ಲ. ಅದೇ ರೀತಿ ಮಹಾರಾಷ್ಟ್ರದ ಕೆಲವು ಪ್ರದೇಶಗಳಲ್ಲಿಯೂ ಬಿಜೆಪಿಯ ಮತ ಗಳಿಕೆ ಶೇ. 21ಕ್ಕಿಂತ ಕಡಿಮೆ ಇತ್ತು. ಆದರೆ, ದುರ್ಬಲ ಬೂತ್‌ಗಳನ್ನು ಗುರುತಿಸಿ, ಆ ಭಾಗದಲ್ಲಿ ಬಿಜೆಪಿ ಪರ ಅಲೆ ಸೃಷ್ಟಿಸಲು ಕೆಲಸ ಮಾಡಲಾಯಿತು. ಪರಿಣಾಮ ಫಲಿತಾಂಶ ಉತ್ತಮ ರೀತಿಯಲ್ಲಿ ಬಂತು. ಅದೇ ರೀತಿಯಲ್ಲಿ ಬಿಹಾರದಲ್ಲಿ ದುರ್ಬಲ ಬೂತ್‌ಗಳನ್ನು ಗುರುತಿಸುವ ಕಾರ್ಯವನ್ನು ನಾಯಕರಿಗೆ ವಹಿಸಲಾಗಿದ್ದು, ಶೀಘ್ರದಲ್ಲೇ ಇದರ ಕೆಲಸ ಪ್ರಾರಂಭವಾಗುತ್ತದೆ ಎಂದರು.**

## ಮಾಜಿ ಸಚಿವರ ಏಕೈಕ ಪುತ್ರಿ ಕಟ್ಟಡದಿಂದ ಹಾರಿ ಸ್ಥಳದಲ್ಲೇ ಸಾವು!

**ಗುವಾಹಟಿ:** ಕಳೆದ ಕೆಲವು ದಿನಗಳಿಂದ, ರಾಜಕೀಯ ವಲಯಗಳಲ್ಲಿ ಒಂದರ ನಂತರ ಒಂದರಂತೆ ಆಘಾತಕಾರಿ ಘಟನೆಗಳು ನಡೆಯುತ್ತಲೆ ಇದೆ. ಇತ್ತೀಚೆಗಷ್ಟೇ ಮಧ್ಯ ಪ್ರದೇಶದಲ್ಲಿ ಹಿರಿಯ ಬಿಜೆಪಿ ನಾಯಕ ಗುಲ್ಫಮ್ ಸಿಂಗ್ ಯಾದವ್ ಅವರನ್ನು ವಿಷಪೂರಿತ ಇಂಜೆಕ್ಷನ್ ಮೂಲಕ ಹತ್ಯೆ ಮಾಡಲಾಯಿತು. ಇದಾದ ನಂತರ, ಶಿಂಧೆ ಗುಂಪಿನ ಜಿಲ್ಲಾಧ್ಯಕ್ಷರನ್ನು ಪಂಜಾಬ್‌ನಲ್ಲಿ ಗುಂಡಿಕ್ಕಿ ಕೊಲ್ಲಲಾಯಿತು. ಇದಲ್ಲದೆ, ಛತ್ತೀಸ್‌ಗಢದ ಕಾಂಗ್ರೆಸ್ ನಾಯಕ ದುರ್ಗೇಶ್ ದ್ವಿವೇದಿ ಅವರ ಸೊಸೆ ಅಲಿಕೇಡಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.



ಈ ಘಟನೆಗಳು ಮಾಸುವ ಮುನ್ನವೇ ಇದೀಗ ಮತ್ತೊಬ್ಬ ಮಾಜಿ ಸಚಿವರ ಮಗಳು ಕಟ್ಟಡದಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಜಕೀಯ ವಲಯವನ್ನು ಬೆಚ್ಚಿಬೀಳಿಸುವ ಮತ್ತೊಂದು ಘಟನೆ ಇದೀಗ ಬೆಳಕಿಗೆ ಬಂದಿದೆ. ಈಗ ಮಾಜಿ ಸಚಿವರ 28 ವರ್ಷದ ಮಗಳು ತನ್ನ ಮನೆಯ ಎರಡನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

# ಸಿಎಸ್‌ಕೆಯನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದ ಆರ್‌ಸಿಬಿ

2025ರ ಐಪಿಎಲ್‌ನಲ್ಲಿ ಎರಡು ಪಂದ್ಯಗಳನ್ನು ಗೆದ್ದಿರುವ ಆರ್‌ಸಿಬಿ, ಇನ್‌ಸ್ಟಾಗ್ರಾಮ್‌ನಲ್ಲಿ ಅತಿ ಹೆಚ್ಚು ಅನುಯಾಯಿಗಳನ್ನು ಹೊಂದಿರುವ ತಂಡವಾಗಿ ಹೊರಹೊಮ್ಮಿದೆ. ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಹಿಂದಿಕ್ಕಿ ಆರ್‌ಸಿಬಿ ಮೊದಲ ಸ್ಥಾನಕ್ಕೇರಿದೆ. 17.8 ಮಿಲಿಯನ್ ಅನುಯಾಯಿಗಳೊಂದಿಗೆ ಆರ್‌ಸಿಬಿ ಅಗ್ರಸ್ಥಾನದಲ್ಲಿದ್ದರೆ, ಸಿಎಸ್‌ಕೆ 17.7 ಮಿಲಿಯನ್ ಅನುಯಾಯಿಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಮುಂಬೈ ಇಂಡಿಯನ್ಸ್ ಮೂರನೇ ಸ್ಥಾನದಲ್ಲಿದೆ.

2025 ರ ಐಪಿಎಲ್‌ನಲ್ಲಿ ಆಡಿರುವ ಎರಡೂ ಪಂದ್ಯಗಳನ್ನು ಏಕಪಕ್ಷೀಯವಾಗಿ ಗೆದ್ದುಕೊಂಡಿರುವ ಆರ್‌ಸಿಬಿಗೆ ಇದೀಗ ಮತ್ತೊಂದು ಸಿಹಿ ಸುದ್ದಿ ಸಿಕ್ಕಿದೆ. ತನ್ನ ಎರಡನೇ ಪಂದ್ಯದಲ್ಲಿ ಸಿಎಸ್‌ಕೆ ತಂಡವನ್ನು 50 ರನ್‌ಗಳಿಂದ ಮಣಿಸಿದ್ದ ಆರ್‌ಸಿಬಿ ಇದೀಗ ಸೋಶಿಯಲ್ ಮೀಡಿಯಾ ಹ್ಯಾಂಡಲ್ ಇನ್‌ಸ್ಟಾಗ್ರಾಮ್‌ನಲ್ಲೂ ಚೆನ್ನೈ ತಂಡವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದೆ. 2025 ರ ಐಪಿಎಲ್‌ನಲ್ಲಿ ಆಡಿರುವ ಎರಡೂ ಪಂದ್ಯಗಳನ್ನು ಏಕಪಕ್ಷೀಯವಾಗಿ ಗೆದ್ದುಕೊಂಡಿರುವ ಆರ್?ಸಿಬಿಗೆ ಇದೀಗ ಮತ್ತೊಂದು ಸಿಹಿ ಸುದ್ದಿ ಸಿಕ್ಕಿದೆ. ತನ್ನ ಎರಡನೇ ಪಂದ್ಯದಲ್ಲಿ ಸಿಎಸ್?ಕೆ ತಂಡವನ್ನು 50 ರನ್‌ಗಳಿಂದ ಮಣಿಸಿದ್ದ ಆರ್‌ಸಿಬಿ ಇದೀಗ ಸೋಶಿಯಲ್ ಮೀಡಿಯಾ ಹ್ಯಾಂಡಲ್ ಇನ್‌ಸ್ಟಾಗ್ರಾಮ್‌ನಲ್ಲೂ ಚೆನ್ನೈ ತಂಡವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದೆ. ವಾಸ್ತವವಾಗಿ ಇನ್‌ಸ್ಟಾಗ್ರಾಮ್‌ನಲ್ಲಿ ಅತ್ಯಧಿಕ ಫಾಲೋವರ್ಸ್‌ಗಳನ್ನು ಹೊಂದಿರುವ ಐಪಿಎಲ್ ತಂಡಗಳ ಪೈಕಿ ಇಷ್ಟು ದಿನ ಚೆನ್ನೈ ಸೂಪರ್ ಕಿಂಗ್ಸ್ ತಂಡ ಅಗ್ರಸ್ಥಾನದಲ್ಲಿತ್ತು. ಆದರೆ ಈ ಸೀಸನ್‌ನಲ್ಲಿ ಕಳಪೆ ಪ್ರದರ್ಶನ



ನೀಡುತ್ತಿರುವ ಸಿಎಸ್‌ಕೆ ತಂಡ ಇನ್‌ಸ್ಟಾಗ್ರಾಮ್‌ನಲ್ಲಿ ತನ್ನ ಅನುಯಾಯಿಗಳ ಸಂಖ್ಯೆಯಲ್ಲಿ ಇಳಿಮುಖ ಕಂಡಿದೆ. ವಾಸ್ತವವಾಗಿ ಇನ್‌ಸ್ಟಾಗ್ರಾಮ್‌ನಲ್ಲಿ ಅತ್ಯಧಿಕ ಫಾಲೋವರ್ಸ್‌ಗಳನ್ನು ಹೊಂದಿರುವ ಐಪಿಎಲ್ ತಂಡಗಳ ಪೈಕಿ ಇಷ್ಟು ದಿನ ಚೆನ್ನೈ ಸೂಪರ್ ಕಿಂಗ್ಸ್ ತಂಡ ಅಗ್ರಸ್ಥಾನದಲ್ಲಿತ್ತು. ಆದರೆ ಈ ಸೀಸನ್‌ನಲ್ಲಿ ಕಳಪೆ ಪ್ರದರ್ಶನ ನೀಡುತ್ತಿರುವ ಸಿಎಸ್‌ಕೆ ತಂಡ ಇನ್‌ಸ್ಟಾಗ್ರಾಮ್‌ನಲ್ಲಿ ತನ್ನ ಅನುಯಾಯಿಗಳ ಸಂಖ್ಯೆಯಲ್ಲಿ ಇಳಿಮುಖ ಕಂಡಿದೆ. ಪ್ರಸ್ತುತ ಸಿಎಸ್‌ಕೆ ಫ್ರಾಂಚೈಸಿ ತನ್ನ ಅಧಿಕೃತ ಇನ್‌ಸ್ಟಾಗ್ರಾಮ್‌ನಲ್ಲಿ 17.7 ಮಿಲಿಯನ್ ಫಾಲೋವರ್ಸ್‌ಗಳನ್ನು ಹೊಂದಿದ್ದು, ಅತ್ಯಧಿಕ ಫಾಲೋವರ್ಸ್‌ಗಳನ್ನು ಹೊಂದಿರುವ ಐಪಿಎಲ್ ತಂಡಗಳ ಪೈಕಿ ಎರಡನೇ ಸ್ಥಾನಕ್ಕೆ ಕುಸಿದಿದೆ. ಐಪಿಎಲ್‌ನ ಮತ್ತೊಂದು ಜನಪ್ರಿಯ ತಂಡವಾದ ಆರ್‌ಸಿಬಿ ಮೊದಲ ಸ್ಥಾನಕ್ಕೇರಿದೆ. ಪ್ರಸ್ತುತ ಸಿಎಸ್‌ಕೆ ಫ್ರಾಂಚೈಸಿ ತನ್ನ ಅಧಿಕೃತ ಇನ್‌ಸ್ಟಾಗ್ರಾಮ್‌ನಲ್ಲಿ 17.7 ಮಿಲಿಯನ್ ಫಾಲೋವರ್ಸ್‌ಗಳನ್ನು ಹೊಂದಿದ್ದು, ಅತ್ಯಧಿಕ ಫಾಲೋವರ್ಸ್ ಗಳನ್ನು ಹೊಂದಿರುವ ಐಪಿಎಲ್ ತಂಡಗಳ ಪೈಕಿ ಎರಡನೇ ಸ್ಥಾನಕ್ಕೆ ಕುಸಿದಿದೆ. ಐಪಿಎಲ್‌ನ ಮತ್ತೊಂದು ಜನಪ್ರಿಯ ತಂಡವಾದ ಆರ್‌ಸಿಬಿ ಮೊದಲ ಸ್ಥಾನಕ್ಕೇರಿದೆ.

**ಉಳಿದ 7 ತಂಡಗಳಲ್ಲಿ ಯಾವ ತಂಡಕ್ಕೂ 10 ಮಿಲಿಯನ್ ಪಾಲೋವರ್ಸ್‌ಗಳಿಲ್ಲ. 4ನೇ ಸ್ಥಾನದಲ್ಲಿರುವ ಕೆಕೆಆರ್ 7 ಮಿಲಿಯನ್, ಸನ್‌ರೈಸರ್ಸ್ ಹೈದರಾಬಾದ್ 5.1 ಮಿಲಿಯನ್, ರಾಜಸ್ಥಾನ್ ರಾಯಲ್ಸ್ 4.7 ಮಿಲಿಯನ್, ಗುಜರಾತ್ 4.5 ಮಿಲಿಯನ್, ಡೆಲ್ಲಿ ಕ್ಯಾಪಿಟಲ್ಸ್ 4.3 ಮಿಲಿಯನ್, ಪಂಜಾಬ್ 3.7 ಮಿಲಿಯನ್ ಕೊನೆಯದಾಗಿ ಲಕ್ನೋ 3.5 ಮಿಲಿಯನ್ ಫಾಲೋವರ್ಸ್‌ಗಳನ್ನು ಹೊಂದಿವೆ.**

## ಆರ್‌ಸಿಬಿ ಮೊದಲ ಸ್ಥಾನಕ್ಕೆ

ಪ್ರಸ್ತುತ ಆರ್‌ಸಿಬಿ 17.8 ಮಿಲಿಯನ್ ಪಾಲೋವರ್ಸ್‌ಗಳನ್ನು ಹೊಂದಿದ್ದು, ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ 16.2 ಮಿಲಿಯನ್ ಪಾಲೋವರ್ಸ್‌ಗಳನ್ನು ಹೊಂದಿದೆ. ಈ ಮೂರು ತಂಡಗಳು ಮಾತ್ರ 15 ಮಿಲಿಯನ್‌ಗಿಂತಲೂ ಅಧಿಕ ಪಾಲೋವರ್ಸ್ ಗಳನ್ನು ಹೊಂದಿವೆ. ಪ್ರಸ್ತುತ ಆರ್‌ಸಿಬಿ 17.8 ಮಿಲಿಯನ್ ಪಾಲೋವರ್ಸ್‌ಗಳನ್ನು ಹೊಂದಿದ್ದು, ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ 16.2 ಮಿಲಿಯನ್ ಪಾಲೋವರ್ಸ್‌ಗಳನ್ನು ಹೊಂದಿದೆ. ಈ ಮೂರು ತಂಡಗಳು ಮಾತ್ರ 15 ಮಿಲಿಯನ್‌ಗಿಂತಲೂ ಅಧಿಕ ಪಾಲೋವರ್ಸ್‌ಗಳನ್ನು ಹೊಂದಿವೆ.

# ಕೆಕೆಆರ್ ವಿರುದ್ಧ ಮುಂಬೈಗೆ 8 ವಿಕೆಟ್‌ಗಳ ಜಯ

## ಅಶ್ವನಿ ದಾಳಿಗೆ ಕೆಕೆಆರ್ ತತ್ತರ



ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಇಂದಿನ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡ, ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿದೆ. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಸೋತರು ಮುಂಬೈ ಎದುರು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಕೆಕೆಆರ್, 16.2 ಓವರ್‌ಗಳಲ್ಲಿ 116ರನ್‌ಗಳಿಸಿ ಆಲೌಟ್ ಆಗಿತ್ತು. ಗುರಿ ಬೆನ್ನತ್ತಿದ್ದ ಮುಂಬೈ ಎರಡು ವಿಕೆಟ್ ನಷ್ಟಕ್ಕೆ 121 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಕೊನೆಯಲ್ಲಿ ರಸೆಲ್ ಬೌಲಿಗೆ ಸೂರ್ಯ ಕುಮಾರ್ ಯಾದವ್ ಅದ್ಭುತ ಸಿಕ್ಸ್ ಸಿಡಿಸಿದರು. ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ಇಂಡಿಯನ್ಸ್ ಪ್ರಸ್ತಕ ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಸೋಲು ಕಂಡಿದ್ದು, ಇಂದಿನ ಪಂದ್ಯದಲ್ಲಿ ಗೆಲುವು ಸಾಧಿಸಿದೆ.ಇತ್ತ ಅಜಿಂಕ್ಯ ರಹಾನೆ ನಾಯಕತ್ವದ ಕೆಕೆಆರ್ ತಂಡವು ಮೊದಲ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ 7 ವಿಕೆಟ್ ಅಂತರದಿಂದ ಸೋಲು ಅನುಭವಿಸಿತ್ತು. ಬಳಿಕ ಎರಡನೇ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ 8 ವಿಕೆಟ್ ಅಂತರದಿಂದ ಗೆಲುವು ಸಾಧಿಸಿತ್ತು. ಇಂದು ಮುಂಬೈ ವಿರುದ್ಧ ಸೋಲನುಭವಿಸಿದೆ.

**ಹಾಲಿ ಚಾಂಪಿಯನ್ ಕೆಕೆಆರ್ ತಂಡಕ್ಕೆ ಆಘಾತ ಕೊಟ್ಟ ಅಶ್ವನಿ ಕುಮಾರ್ ಯಾರು:** ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಹಾಲಿ ಚಾಂಪಿಯನ್ ಕೋಲ್ಕತಾ ನೈಟ್ ರೈಡರ್ಸ್ ತಂಡಕ್ಕೆ ಮುಂಬೈ ಇಂಡಿಯನ್ಸ್‌ನ ಯುವ ವೇಗಿ ಅಶ್ವನಿ ಕುಮಾರ್ ಆಘಾತ ನೀಡಿದ್ದಾರೆ. ಪ್ರಮುಖ 4 ವಿಕೆಟ್ ಪಡೆಯುವ ಮೂಲಕ ಕೆಕೆಆರ್ ತಂಡವನ್ನು ಕೇವಲ 116 ರನ್‌ಗಳಿಗೆ ಆಲೌಟ್ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಆಡಿದ ಮೊದಲ ಪಂದ್ಯದಲ್ಲೇ ಅಶ್ವನಿ ಕುಮಾರ್ ಅತ್ಯುತ್ತಮ ಪ್ರದರ್ಶನ ನೀಡಿದ್ದು ಕ್ರಿಕೆಟ್ ಅಭಿಮಾನಿಗಳ ಗಮನ ಸೆಳೆದಿದ್ದಾರೆ. ಮೊದಲ ಎರಡು ಪಂದ್ಯಗಳಲ್ಲಿ ಪ್ಲೇಯಿಂಗ್ ಇಲೆವೆನ್ ಆಯ್ಕೆ ಮಾಡುವಲ್ಲೇ ಎಡವಿದ್ದ ಮುಂಬೈ ಇಂಡಿಯನ್ಸ್ ಮೂರನೇ ಪಂದ್ಯದಲ್ಲಿ ತಪ್ಪುಗಳನ್ನು ತಿದ್ದಿಕೊಂಡಿತು. ಗುಜರಾತ್ ಟೈಟಾನ್ಸ್ ವಿರುದ್ಧ ಅಷ್ಟೇನೂ ಉತ್ತಮ ಪ್ರದರ್ಶನ ನೀಡದ ಸತ್ಯನಾರಾಯಣ ರಾಜು ಅವರನ್ನು ಕೈಬಿಟ್ಟು ಅಶ್ವನಿ ಕುಮಾರ್ ಅವರಿಗೆ ಅವಕಾಶ ನೀಡಲಾಯಿತು. ತಮ್ಮ ಬೌಲಿಂಗ್ ಆರಂಭಿಸುವ ಮುನ್ನವೇ ಕ್ವಿಂಟನ್ ಡಿಕಾಕ್ ಅವರ ಕ್ಯಾಚ್ ಹಿಡಿದರು. ಬಳಿಕ ತಮ್ಮ ಮೊದಲ ಓವರ್‌ನ ಮೊದಲ ಎಸೆತದಲ್ಲೇ ಕೋಲ್ಕತ್ತಾ ನೈಟ್ ರೈಡರ್ಸ್ ನಾಯಕ ಅಜಿಂಕ್ಯ ರಹಾನೆಯನ್ನು ಔಟ್ ಮಾಡುವ ಮೂಲಕ ತಂಡ ತಮ್ಮ ಮೇಲಿಟ್ಟಿದ್ದ ನಂಬಿಕೆಯನ್ನು ಉಳಿಸಿಕೊಂಡರು. ಅಜಿಂಕ್ಯ ರಹಾನೆ ಬೌಂಡರಿ ಹೊಡೆಯುವ ಪ್ರಯತ್ನದಲ್ಲಿ ತಿಲಕ್ ವರ್ಮಾಗೆ ಕ್ಯಾಚ್ ಕೊಟ್ಟರು. ಕ್ಯಾಚ್ ಹಿಡಿಯುವ ಸಂದರ್ಭದಲ್ಲಿ ತಿಲಕ್ ವರ್ಮಾ ಆರಂಭದಲ್ಲಿ ಎಡವಿದರೂ ಬಳಿಕ ಚೆಂಡನ್ನು ಹಿಡಿದು ಕೊಳ್ಳುವಲ್ಲಿ ಯಶಸ್ವಿಯಾದರು. ಯಾರು ಈ ಅಶ್ವನಿ ಕುಮಾರ್ ಅಶ್ವನಿ ಕುಮಾರ್ ಪಂಜಾಬ್‌ನ ಮೊಹಾಲಿಯಲ್ಲಿ ಜನಿಸಿದವರು. ಪಂಜಾಬ್‌ನ ಟಿ20 ಪಂದ್ಯಾವಳುಯಲ್ಲಿ ಶೇರ್-ಎ-ಪಂಜಾಬ್ ತಂಡಕ್ಕಾಗಿ ಆಡುತ್ತಾರೆ. ಇನ್ನಿಂಗ್ಸ್‌ನ ಕೊನೆಯಲ್ಲಿ ಬೌಲಿಂಗ್ ಮಾಡುವಲ್ಲಿ ಅವರು ಹೆಸರು ಮಾಡಿದ್ದಾರೆ. ಎರಡು ಪ್ರಥಮದರ್ಜೆ ಪಂದ್ಯಗಳನ್ನು ಆಡಿದ್ದು, 4 ಲಿಸ್ಟ್ ಎ ಮತ್ತು 4 ಟಿ20 ಪಂದ್ಯಗಳನ್ನು ಮಾತ್ರ ಆಡಿದ್ದಾರೆ. ಇಷ್ಟು ಕಡಿಮೆ ಪಂದ್ಯಗಳನ್ನು ಆಡಿದ್ದರೂ, ಅವ ರಲ್ಲಿನ ಪ್ರತಿಭೆಯನ್ನು ಗುರುತಿಸಿರುವ ಮುಂಬೈ ಇಂಡಿಯನ್ಸ್ ಸ್ಕೌಟ್ಸ್ ತಂಡಕ್ಕೆ ಅಭಿನಂದನೆ ಸಲ್ಲಿಸಬೇಕು.




# ಏಯ್ ನಿನ್ನ...: ಔಟಾದಾಗ ಧೋನಿಗೆ ಬೈದ ಲೇಡಿ

ಇಂಡಿಯನ್ ಪ್ರೀಮಿಯರ್ ಲೀಗ್ 2025ರಲ್ಲಿ ಮಾರ್ಚ್ 30 ರಂದು ನಡೆದ ಚೆನ್ನೈ ಸೂಪರ್ ಕಿಂಗ್ಸ್ ರಾಜಸ್ಥಾನ್ ರಾಯಲ್ಸ್ ನಡುವಿನ ಪಂದ್ಯದ ವೇಳೆ ಎಂಎಸ್ ಧೋನಿ ಔಟಾದ ವೇಳೆ ಮಹಿಳೆಯೊಬ್ಬರು ನೀಡಿದ ಪ್ರತಿಕ್ರಿಯೆ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ಗುವಾಹಟಿಯ ಬರ್ಸಪರ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಹೈ-ವೋಲ್ಟೇಜ್ ಪಂದ್ಯದ ಸಮಯದಲ್ಲಿ, 15.5 ಓವರ್‌ನಲ್ಲಿ ವನಿಂದು ಹಸರಂಗ ಎಸೆತದಲ್ಲಿ ರುತುರಾಜ್ ಗಾಯಕ್ವಾಡ್ ಔಟ್ ಆದ ನಂತರ ಎಂಎಸ್ ಧೋನಿ 7 ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದರು. ಎಂಎಸ್‌ಡಿ ಕಣಕ್ಕೆ ಉಳಿದ ಕಾರಣ ಪ್ರೇಕ್ಷಕರು ಸಾಕಷ್ಟು ಉತ್ಸುಕರಾಗಿದ್ದರು, ಆದರೆ ಇದೆಲ್ಲ ವ್ಯರ್ಥವಾಯಿತು.

ಕೊನೆಯ ಓವರ್‌ನಲ್ಲಿ ಚೆನ್ನೈ ತಂಡಕ್ಕೆ 20 ರನ್‌ಗಳು ಬೇಕಾಗಿದ್ದವು ಮತ್ತು ಧೋನಿ ಸ್ಟ್ರೈಕ್‌ನಲ್ಲಿದ್ದರು. ಧೋನಿ ಕ್ಲಾಸಿಕ್ ಫಿನಿಶಿಂಗ್ ನೀಡುತ್ತಾನೆ ಎಂದೇ ಎಲ್ಲರ ಅಂದುಕೊಂಡಿದ್ದರು. ಆದರೆ ಸಂದೀಪ್ ಶರ್ಮಾ ಅವರ ಲೋ ವೈಡ್ ಫುಲ್ ಟಾಸ್‌ನಲ್ಲಿ ಧೋನಿ ಲಾಂಗ್-ಆನ್ ಕಡೆಗೆ ದೊಡ್ಡ ಶಾಟ್ ಹೊಡೆಯಲು ಹೋದರು. ಈ ಸಂದರ್ಭ ಚೆಂಡು ಬ್ಯಾಟ್‌ಗೆ ಸರಿಯಾಗಿ ಕನೆಕ್ಟ್ ಆಗದ ಪರಿಣಾಮ, ಶಿಮ್ರಾನ್ ಹೆಟ್ಮೆಯರ್ ಡೈವ್ ಮೂಲಕ ಕ್ಯಾಚ್ ಪಡೆದರು. ಧೋನಿ ಔಟಾದಾಗ ಇಡೀ ಕ್ರೀಡಾಂಗಣ ಸ್ತಬ್ಧವಾಯಿತು. ಈ ಪೈಕಿ ಸಿಎಸ್‌ಕೆ ಅಭಿಮಾನಿಯೊಬ್ಬಳ ಪ್ರತಿಕ್ರಿಯೆ ಟಿವಿ ಪರದೆಯ ಮೇಲೆ ಕಾಣಿಸಿತು.


ಧೋನಿ ಔಟ್ ಆದ ತಕ್ಷಣ ಯುವ ಮಹಿಳಾ ಅಭಿಮಾನಿ



ಯೊಬ್ಬರು ಕೋಪದಿಂದ ಕೆರಳಿದ್ದನ್ನು ಕ್ಯಾಮೆರಾ ಸೆರೆಹಿಡಿದಿದೆ. ಧೋನಿಯ ಹೊಡೆತದಿಂದ ಅವರು ಸಂತೋಷವಾಗಿಲ್ಲ. ತನ್ನ ಕೈಯನ್ನು ಚಾಚಿ ಏಯ್.. ಎಂದು ಏನೋ ಹೇಳಲು ಬಯಸಿದಳು, ಆದರೆ ನಂತರ ಕಂಟ್ರೋಲ್ ಮಾಡಿಕೊಂಡು ಮೌನವಾದಳು. ಈ ದೃಶ್ಯವು ಸಾಮಾಜಿಕ ಮಾಧ್ಯಮದಲ್ಲಿ ಕಾಡ್ಗಿಚ್ಚಿನಂತೆ ಹರಡಿದೆ. ಅಂತಿಮವಾಗಿ ಚೆನ್ನೈ ಸೂಪರ್ ಕಿಂಗ್ಸ್ ಕೇವಲ ಆರು ರನ್‌ಗಳಿಂದ ಪಂದ್ಯವನ್ನು ಸೋತಿತು. ಜೇಮೀ ಓವರ್ಟನ್ ಕೊನೆಯ ಓವರ್‌ನಲ್ಲಿ ಸಿಕ್ಸರ್ ಬಾರಿಸಿದರು, ಆದರೆ ಅದು ಗೆಲ್ಲಲು ಸಾಕಾಗಲಿಲ್ಲ. ರಾಜಸ್ಥಾನದ 182 ರನ್‌ಗಳಿಗೆ ಉತ್ತರವಾಗಿ ಚೆನ್ನೈ 176 ರನ್‌ಗಳನ್ನು ಮಾತ್ರ ಗಳಿಸಲು ಶಕ್ತವಾಯಿತು. ಈ ಸೋಲಿನೊಂದಿಗೆ, ಸಿಎಸ್‌ಕೆ ಸತತ ಎರಡನೇ ಸೋಲನ್ನು ಎದುರಿಸಬೇಕಾಯಿತು. ರುತುರಾಜ್ ಗಾಯಕ್ವಾಡ್ ನೇತೃತ್ವದ ತಂಡವು ಏಪ್ರಿಲ್ 5 ರಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಮುಂದಿನ ಪಂದ್ಯದಲ್ಲಿ ಮತ್ತೆ ಕಣಕ್ಕಿಳಿಯಲಿದೆ.

# ಅಂತಿಮ ಘಟ್ಟ ತಲುಪಿಕೊಂಡ ಪದ್ಮಗಂಧಿ

ಒಂದು ಹೊಸ ಸಿನಿಮಾ ರೂಪುಗೊಳ್ಳುತ್ತಿದೆ ಎಂಬ ಸುಳಿವು ಸಿಕ್ಕಾಕ್ಷಣವೇ ಅದರಲ್ಲಿ ಅಡಕವಾಗಿರಬಹುದಾದ ಕಥೆಯ ಬಗ್ಗೆ ಕುತೂಹಲವೊಂದು ಹರಳುಗಟ್ಟಲಾರಂಭಿಸುತ್ತೆ. ಸಾಮಾನ್ಯವಾಗಿ, ಇಂಥಾ ಕಲ್ಪನೆಗಳೆಲ್ಲವೂ ಮಾಮೂಲು ಶೈಲಿಯ ಬಿಂದುವಿನಲ್ಲಿಯೇ ಗಿರಕಿ ಹೊಡೆಯುತ್ತವೆ. ಆದರೆ, ನಮ್ಮೆಲ್ಲರ ಪಾಲಿಗೆ ಚಿರಪರಿಚಿತವಾಗಿರುವ, ದೈವೀಕ ಗಂಧ ಮೆತ್ತಿಕೊಂಡಿರುವ ಕಮಲದ ಹೂವಿನ ಬಗ್ಗೆಯೇ ಒಂದು ಸಿನಿಮಾ ರೂಪುಗೊಳ್ಳುತ್ತದೆ ಎಂದರೆ ಸಹಜವಾಗಿಯೇ ಅಚ್ಚರಿ ಮೂಡಿಕೊಳ್ಳುತ್ತೆ. ಅಂಥಾದ್ದೊಂದು ಕುತೂಹಲ ತಾನೇತಾನಾಗಿ ಮೂಡಿಕೊಂಡಿರುವುದು 'ಪದ್ಮಗಂಧಿ' ಎಂಬ ಸಿನಿಮಾದ ಬಗ್ಗೆ. ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ರೂಪುಗೊಳ್ಳುತ್ತಿರುವ ಈ ಚಿತ್ರವನ್ನು ಸುಚೇಂದ್ರ ಪ್ರಸಾದ್ ನಿರ್ದೇಶನ ಮಾಡುತ್ತಿದ್ದಾರೆ. ಮಾಜಿ ಎಂಎಲ್‌ಸಿ, ಪ್ರಸಿದ್ಧ ಅಂಕಣಕಾರ್ತಿ, ಸಂಸ್ಕೃತದ ಭೂಮಿಕೆಯಲ್ಲಿ ನಾನಾ ದಿಕ್ಕಿನ ಅಧ್ಯಯನ, ಪಾಂಡಿತ್ಯದ ಮೂಲಕ ಹೆಸರಾಗಿರುವ ಎಸ್.ಆರ್ ಲೀಲಾ ಈ ಚಿತ್ರಕ್ಕೆ ಕಥೆ ಸಿದ್ಧಪಡಿಸುವುದರ ಜೊತೆಗೆ ನಿರ್ಮಾಪಕಿಯಾಗಿಯೂ ಜೊತೆಯಾಗಿದ್ದಾರೆ. ನಮ್ಮಲ್ಲಿ ದೈವೀಕ ಅನುಭೂತಿ ಸ್ಫುರಿಸುವ ಕಮಲ ಪುಷ್ಪದ ಬಗ್ಗೆ ಆಳವಾಗಿ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾ ಸಾಗಿದ್ದ ಲೀಲಾ ಅವರ ಪಾಲಿಗೆ, ಅದರ ಅಗಾಧತೆ ಮೊಗೆದರೂ ಮುಗಿಯದ ಅಕ್ಷಯ ಪಾತ್ರೆಯಂತೆ ಭಾಸವಾಗಲಾರಂಭಿಸಿತ್ತು. ಕಡೆಗೂ ಕಮಲ ಪುಷ್ಪದ ಬಗ್ಗೆ ನಿರಂತರವಾಗಿ ಆರೇಳು ವರ್ಷ ಅಧ್ಯಯನ ನಡೆಸಿದ್ದ ಅವರು ಕಡೆಗೂ ಅಪರೂಪದ ಕಥೆಯೊಂದನ್ನು ಸಿದ್ಧಪಡಿಸಿ, ನಂತರ ಸುಚೇಂದ್ರ ಪ್ರಸಾದ್ ನಿರ್ದೇಶನದ ಜವಾಬ್ದಾರಿ ಹೊತ್ತುಕೊಂಡಿದ್ದರು. ಪ್ರಾಧ್ಯಾಪಕಿಯಾಗಿ, ಲೇಖಕಿಯಾಗಿ, ಸಂಶೋಧಕಿಯಾಗಿ ಸದಾ ಹೊಸ ಅರಿವು ಸೃಷ್ಟಿಯತ್ತ ತುಡಿಯುವ ಮನಃಸ್ಥಿತಿ ಹೊಂದಿರುವ ಎಸ್.ಆರ್ ಲೀಲಾ ಸಿನಿಮಾ ರಂಗಕ್ಕೇನು ಅಪರಿಚಿತರಲ್ಲ. ಅಂಥಾ ಅಗಾಧ ತಿಳಿವಳಿಕೆ, ಭಿನ್ನ ಗ್ರಹಿಕೆಗಳ ಭೂಮಿಕೆಯಲ್ಲಿಯೇ ಅವರು ಪದ್ಮಗಂಧಿಯ ಕಥನವನನು ಕಟ್ಟಿಕೊಟ್ಟಿದ್ದಾರೆ. ಸುಚೇಂದ್ರ ಪ್ರಸಾದ್ ರ ಸಮರ್ಥ ಸಾರಥ್ಯದಲ್ಲಿ, ಪ್ರತಿಭಾನ್ವಿತರ ತಂಡದ ಮೂಲಕ ಪದ್ಮಗಂಧಿ ಅಂತಿಮ ಘಟ್ಟ ತಲುಪಿಕೊಂಡಿದೆ. ಮಿಕ್ಕುಳಿದ ಒಂದಷ್ಟು ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ಪದ್ಮಗಂಧಿಯ ಬಗ್ಗೆ ಮತ್ತೊಂದಷ್ಟು ಕೌತುಕದ ವಿಚಾರಗಳನ್ನು ಚಿತ್ರತಂಡ ಪ್ರೇಕ್ಷಕರ ಮುಂದೆ ತೆರೆದಿಡಲಿದೆ. ಇದೇ ಮೇ ತಿಂಗಳ ನಂತರ ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ತಯಾರಾಗಿರುವ ಪದ್ಮಗಂಧಿ ಬಿಡುಗಡೆ ದಿನಾಂಕ ಘೋಷಣೆಯಾಗಲಿದೆ.



# ನಾನು ಕರ್ನಾಟಕದವಳು ಎಂದಿದ್ದಕ್ಕೂ ರಶ್ಮಿಕಾ ಹಿಗ್ಗಾಮುಗ್ಗಾ ಟ್ರೋಲ್



ರಶ್ಮಿಕಾ ಮಂದಣ್ಣ ಅವರು ಬಾಲಿವುಡ್‌ನಲ್ಲಿ ಯಶಸ್ವಿಯಾಗಿದ್ದಾರೆ, ಆದರೆ ಅವರ ಹೇಳಿಕೆಗಳಿಂದಾಗಿ ಟ್ರೋಲ್ ಆಗುತ್ತಿದ್ದಾರೆ.


ನಾನು ಕರ್ನಾಟಕದವಳು ಎಂದು ಹೇಳಿದ್ದಕ್ಕೆ ಅವರನ್ನು ಟೀಕಿಸಲಾಗಿದೆ. ರಶ್ಮಿಕಾ ಮಂದಣ್ಣ ಅವರು ಈ ಮೊದಲು ನೀಡಿದ ಸಂದರ್ಶನ ಒಂದರಲ್ಲಿ 'ನಾನು ಹೈದರಾಬಾದ್‌ನವಳು' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದರು. ಈಗ ರಶ್ಮಿಕಾ ಕರ್ನಾಟಕದವರು ಎಂದಿದ್ದಾರೆ. ಇದು ಟ್ರೋಲ್ ಆಗಲು ಕಾರಣ, ನಟಿ ರಶ್ಮಿಕಾ ಮಂದಣ್ಣ ಅವರಿಗೆ ಬಾಲಿವುಡ್‌ನಲ್ಲಿ ಬೇಡಿಕೆ ಸೃಷ್ಟಿ ಆಗಿದೆ. ಅವರು ದುಬಾರಿ ಕಾರುಗಳನ್ನು ಖರೀದಿ ಮಾಡುತ್ತಿದ್ದಾರೆ. 500+ ಕೋಟಿ ರೂಪಾಯಿ ಗಳಿಕೆ ಮಾಡಿದ ಮೂರು ಚಿತ್ರಗಳ ಭಾಗವಾಗಿದ್ದಾರೆ ಅವರು. ಇನ್‌ಸ್ಟಾಗ್ರಾಮ್‌ನಲ್ಲಿ ಅವರನ್ನು ನಾಲ್ಕುವರೆ ಕೋಟಿಗೂ ಅಧಿಕ ಜನರು ಫಾಲೋ ಮಾಡುತ್ತಿದ್ದಾರೆ. ಹೀಗಿದ್ದರೂ ರಶ್ಮಿಕಾ ಮಂದಣ್ಣ ಅವರು ಟ್ರೋಲ್ ಆಗುವುದಂತೂ ನಿಂತಿಲ್ಲ. ಈಗ ಅವರು 'ನಾನು ಕರ್ನಾಕದವಳು' ಎಂದಿದ್ದಕ್ಕೂ ಟ್ರೋಲ್ ಮಾಡಲಾಗಿದೆ. **ರಶ್ಮಿಕಾ ಅವರ ಈ ಹಿಂದಿನ ಸಂದರ್ಶನ:** ರಶ್ಮಿಕಾ ಮಂದಣ್ಣ ಅವರು ಈ ಮೊದಲು ನೀಡಿದ ಸಂದರ್ಶನ ಒಂದರಲ್ಲಿ 'ನಾನು ಹೈದರಾಬಾದ್‌ನವಳು ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದರು. ಈಗ ರಶ್ಮಿಕಾ ಕರ್ನಾಟಕದವರು ಎಂದಿದ್ದಾರೆ. ಅವರು ಸಿಂಪತಿ ಪಡೆದುಕೊಳ್ಳಲು ಹಾಗೂ ಪರಿಸ್ಥಿತಿಗೆ ತಕ್ಕಂತೆ ಊರನ್ನು ಬದಲಾಯಿಸುತ್ತಾರೆ ಎಂಬ ಕಾಮೆಂಟ್‌ಗಳು ವ್ಯಕ್ತವಾಗಿದೆ.

**ರಿಷಬ್ ಶೆಟ್ಟಿಗೆ ಈಗಲೂ ಇದೆ ಸಿಟ್ಟು:** ರಶ್ಮಿಕಾ ಮಂದಣ್ಣ ಅವರು ಚಿತ್ರರಂಗಕ್ಕೆ ಪರಿಚಯ ಆಗಿದ್ದು 'ಕಿರಿಕ್ ಪಾರ್ಟಿ' ಚಿತ್ರದ ಮೂಲಕ. ಈ ಚಿತ್ರಕ್ಕೆ ರಕ್ಷಿತ್ ಶೆಟ್ಟಿ ಹೀರೋ. ಸಿನಿಮಾ ಸಂದರ್ಭದಲ್ಲಿ ರಶ್ಮಿಕಾ ಹಾಗೂ ರಕ್ಷಿತ್ ಪ್ರೀತಿಯಲ್ಲಿ ಬಿದ್ದರು. ನಿಶ್ಚಿತಾರ್ಥ ಮಾಡಿಕೊಂಡು ಅದನ್ನು ಮುರಿದುಕೊಂಡರು. ಈ ವಿಚಾರದಲ್ಲಿ ರಿಷಬ್‌ಗೆ ಈಗಲೂ ಸಿಟ್ಟಿದೆ. ಈ ಕಾರಣಕ್ಕೆ ಕಿರಿಕ್ ಪಾರ್ಟಿಗೆ ಸಂಬಂಧಿಸಿದ ಯಾವುದೇ ಪೋಸ್ಟ್ ಹಾಕುವುದಿದ್ದರು ಅವರು ರಶ್ಮಿಕಾನ ಟ್ಯಾಗ್ ಮಾಡುವುದೇ ಇಲ್ಲ.

# ಅಪ್ಸರೆಯಂತೆ ಕಾಣಿಸುತ್ತಿದ್ದಾರೆ ಮಹೇಶ್ ಬಾಬು ಮಗಳು

ಮಹೇಶ್ ಬಾಬು ಅವರ ಮಗಳು ಸಿತಾರಾ ಘಟ್ಟಮನೇನಿ ಅವರ ಇತ್ತೀಚಿನ ಕಾರ್ಯಕ್ರಮದಲ್ಲಿನ ಕಾಣಿಸಿಕೊಂಡಿದ್ದಾರೆ. ಈ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ತಮ್ಮ ಸೌಂದರ್ಯದಿಂದ ಅಭಿಮಾನಿಗಳನ್ನು ಮೋಡಿ ಮಾಡಿದ ಸಿತಾರಾ, ತಮ್ಮ ಯೂಟ್ಯೂಬ್ ಚಾನೆಲ್ ಮತ್ತು ಸರ್ಕಾರು ವಾರಿ ಪಾಟ ಚಿತ್ರದ ಪ್ರಮೋಷನ್ ಮೂಲಕ ಚಿತ್ರರಂಗದೊಂದಿಗೆ ಸಂಪರ್ಕ ಹೊಂದಿದ್ದಾರೆ. ಮಹೇಶ್ ಬಾಬು ಅವರಿಗೆ ಚಿತ್ರರಂಗದಲ್ಲಿ ಸಾಕಷ್ಟು ಬೇಡಿಕೆ ಇದೆ. ಅವರು ಹಲವು ಸೂಪರ್ ಹಿಟ್ ಚಿತ್ರಗಳನ್ನು ನೀಡಿದ್ದಾರೆ. ಅವರ ಬಗ್ಗೆ ಇರುವಷ್ಟೇ ಕ್ರೇಜ್ ಅವರ ಮಕ್ಕಳ ಮೇಲೂ ಇದೆ. ಹೌದು ಗೌತಮ್, ಸಿತಾರಾ ಘಟ್ಟಮನೇನಿ ಅವರ ಬಗ್ಗೆಯೂ ಭರ್ಜರಿ ಕ್ರೇಜ್ ಸೃಷ್ಟಿ ಆಗಿದೆ. ಈಗ ಸಿತಾರಾ ಅವರು ಕಾರ್ಯಕ್ರಮ ಒಂದಕ್ಕೆ ತೆರಳಿದ್ದಾರೆ. ಈ ವೇಳೆ ಅವರು ಅಪ್ಸರೆಯಂತೆ ಕಾಣಿಸಿದ್ದಾರೆ. ಈ ಸಂದರ್ಭದ ವಿಡಿಯೋ , ಫೋಟೋಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿ ಗಮನ ಸೆಳೆದಿವೆ. ಸಿತಾರಾ ಅವರು ಚಿಕ್ಕ ವಯಸ್ಸಿನಲ್ಲೇ ಚಿತ್ರರಂಗದಲ್ಲಿ ಪರೋಕ್ಷವಾಗಿ ಆಕ್ಟೀವ್ ಆಗಿದ್ದಾರೆ. ಹೌದು, ಮಹೇಶ್ ಬಾಬು ಕಾರಣಕ್ಕೆ ಸಿತಾರಾಗೆ ಚಿತ್ರರಂಗದ ಜೊತೆ ಒಡನಾಟ ಬೆಳೆದಿದೆ. ಅವರು ತಮ್ಮದೇ ಯೂಟ್ಯೂಬ್ ಚಾನೆಲ್ ಹೊಂದಿದ್ದು, ಇದರಲ್ಲಿ ಹಲವು ಸೆಲೆಬ್ರಿಟಿಗಳ ಸಂದರ್ಶನ ಮಾಡಿದ್ದಾರೆ. ಇನ್ನು, ಸಿತಾರಾ ಅವರು ಸರ್ಕಾರು ವಾರಿ ಪಾಟ ಚಿತ್ರದ ಪ್ರಮೋಷನಲ್ ಹಾಡಿನಲ್ಲೂ ಕಾಣಿಸಿಕೊಂಡಿದ್ದಾರೆ. ಸಿತಾರಾ ಘಟ್ಟಮನೇನಿ ಅವರು ಇತ್ತೀಚೆಗೆ ತಾಯಿ ನಮ್ರತಾ ಜೊತೆ ಬ್ರ್ಯಾಂಡ್ ಪ್ರಮೋಷನ್ ಒಂದಕ್ಕೆ ಬಂದಿದ್ದಾರೆ. ಈ ವೇಳೆ ಅವರು ಅಪ್ಸರೆಯಂತೆ ಕಾಣಿಸಿಕೊಂಡಿದ್ದಾರೆ.

ಅವರ ವಿಡಿಯೋಗೆ ಫ್ಯಾನ್ಸ್ ನಾನಾ ರೀತಿಯಲ್ಲಿ ಕಮೆಂಟ್ ಮಾಡುತ್ತಿದ್ದಾರೆ. ಅನೇಕರು ಸಿತಾರಾ ಅವರ ಬ್ಯೂಟಿಯನ್ನು ಮೆಚ್ಚಿದ್ದಾರೆ. ಇನ್ನೂ ಕೆಲವರು ಅವರನ್ನು ಶ್ರೀಲೀಲಾಗೆ ಹೋಲಿಕೆ ಮಾಡಿದ್ದು, ಜೂನಿಯರ್ ಶ್ರೀಲೀಲಾ' ಎಂದು ಕರೆದಿದ್ದಾರೆ.



# ಕ್ರೇಜಿ ಕ್ವೀನ್ ರಕ್ಷಿತಾ ಬರ್ತ್‌ಡೇ ಸೆಲೆಬ್ರೇಷನ್



ಕ್ರೇಜಿ ಕ್ವೀನ್ ರಕ್ಷಿತಾ ಪ್ರೇಮ್ 41ನೇ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಈ ಹಿನ್ನೆಲೆ ನಟಿಯ ಬರ್ತ್‌ಡೇಯನ್ನು ಪ್ರೇಮ್ ಅದ್ದೂರಿಯಾಗಿ ಆಚರಿಸಿದ್ದಾರೆ. ಇದೀಗ ಪತ್ನಿ ರಕ್ಷಿತಾ ಹುಟ್ಟುಹಬ್ಬದ ಫೋಟೋಗಳನ್ನು ಪ್ರೇಮ್ ಶೇರ್ ಮಾಡಿ ವಿಶ್ ಮಾಡಿದ್ದಾರೆ. ಹ್ಯಾಪಿ ಬರ್ತ್‌ಡೇ ಮಗನೇ, ಸದಾ ಖುಷಿಯಾಗಿರು. ದೇವರ ಆಶೀರ್ವಾದ ಸದಾ ನಿನ್ನ ಮೇಲಿರಲಿ, ಉತ್ತಮ ಆರೋಗ್ಯ ಮತ್ತು ಸಂತೋಷವನ್ನು ನೀಡಲಿ ಎಂದು ಪ್ರೇಮ್ ಪತ್ನಿಗೆ ಪ್ರೀತಿಯಿಂದ ಶುಭಕೋರಿದ್ದಾರೆ. ನಟಿ ರಕ್ಷಿತಾ ಜನ್ಮದಿನದಂದು ಕೇಕ್ ಕತ್ತರಿಸಿ ಫ್ಯಾಮಿಲಿ ಜೊತೆ ಪಾರ್ಟಿ ಮಾಡಿದ್ದಾರೆ. ಅಮ್ಮ, ಪತಿ ಪ್ರೇಮ್, ಪುತ್ರ, ಸಹೋದರ ರಾಣಾ ದಂಪತಿ ಕೂಡ ಭಾಗಿಯಾಗಿ ಶುಭಹಾರೈಸಿದ್ದಾರೆ. ನಟಿಯ ಬರ್ತ್‌ಡೇಗೆ ಸ್ಯಾಂಡಲ್‌ವುಡ್ ನಟ-ನಟಿಯರು, ಆಪ್ತರು ಸೇರಿದಂತೆ ಅನೇಕರು ವಿಶ್ ಮಾಡಿದ್ದಾರೆ. ರಕ್ಷಿತಾಗೆ ಸೋಶಿಯಲ್ ಮೀಡಿಯಾದಲ್ಲಿ ಶುಭಾಶಯಗಳ ಮಹಾಪೂರವೇ ಹರಿದು ಬರುತ್ತಿವೆ. ರಕ್ಷಿತಾ ನಟನೆಯಿಂದ ಅಂತರ ಕಾಯ್ದುಕೊಂಡಿದ್ದಾರೆ. ನಿರ್ಮಾಪಕಿಯಾಗಿ, ಕಿರುತೆರೆ ಡ್ಯಾನ್ಸ್ ಶೋಗಳಲ್ಲಿ ಜಡ್ಜ್ ಆಗಿ ಅವರು ಆ್ಯಕ್ಟೀವ್ ಆಗಿದ್ದಾರೆ. 2002ರಲ್ಲಿ 'ಅಪ್ಪು' ಸಿನಿಮಾದಲ್ಲಿ ಪುನೀತ್ ರಾಜ್‌ಕುಮಾರ್‌ಗೆ ನಾಯಕಿಯಾಗಿ ರಕ್ಷಿತಾ ನಟನೆಗೆ ಎಂಟ್ರಿ ಕೊಟ್ಟರು. ಅವರು ನಟಿಸಿದ ಮೊದಲ ಸಿನಿಮಾನೇ ಸೂಪರ್ ಹಿಟ್ ಆಗಿತ್ತು. ಕನ್ನಡದ ಜೊತೆ ತೆಲುಗು, ತಮಿಳಿನಲ್ಲಿಯೂ ರಕ್ಷಿತಾ ನಟಿಸಿದ್ದರು. ಹಲವು ವರ್ಷಗಳ ಪ್ರೀತಿಗೆ 2007ರಲ್ಲಿ ಡೈರೆಕ್ಟರ್ ಪ್ರೇಮ್ ಜೊತೆ ರಕ್ಷಿತಾ ಮದುವೆಯ ಮುದ್ರೆ ಒತ್ತಿದ್ದರು. ಈ ದಂಪತಿಗೆ ಸೂರ್ಯ ಎಂಬ ಮಗನಿದ್ದಾರೆ.

# ಕನ್ನಡ ಚಿತ್ರರಂಗದ ಕರಾಳ ಮುಖ ತೆರೆದಿಟ್ಟ ಅಜಯ್

ಅಜಯ್ ರಾವ್ ಅವರು ಸಿನಿಮಾ ಯಶಸ್ಸು ಮತ್ತು ವಿಫಲತೆಯ ಹಿಂದಿನ ನಿಜವಾದ ಚಿತ್ರಣವನ್ನು ಬಹಿರಂಗಪಡಿಸಿದ್ದಾರೆ. ಸಿನಿಮಾ ಹಿಟ್ ಆದರೆ ಇಡೀ ತಂಡಕ್ಕೆ ಹೊಗಳಿಕೆ, ಸೋತರೆ ನಟನಿಗೆ ಮಾತ್ರ ದೂಷಣೆ ಎಂಬ ಸಮಸ್ಯೆಯನ್ನು ಅವರು ಎತ್ತಿ ತೋರಿಸಿದ್ದಾರೆ. ಬರಹಗಾರರು ಮತ್ತು ತಾಂತ್ರಿಕ ವರ್ಗದ ಪಾತ್ರವನ್ನು ಅವರು ಒತ್ತಿಹೇಳಿದ್ದಾರೆ, ತಮ್ಮ ದೊಡ್ಡ ಸಾಲದ ಬಗ್ಗೆಯೂ ಮಾತನಾಡಿದ್ದಾರೆ. ಸಿನಿಮಾ ಹಿಟ್ ಆದಾಗ ಇಡೀ ತಂಡವನ್ನು ಹೊಗಳಲಾಗುತ್ತದೆ. ಅದೇ ಸಿನಿಮಾ ಸೋತಾಗ ಹೀರೋನ ಬಯ್ಯಲಾಗುತ್ತದೆ ಎಂಬ ಮಾತಿದೆ. ಅನೇಕರು ಇದನ್ನು ಒಪ್ಪಿಕೊಳ್ಳುತ್ತಾರೆ. ಇನ್ನೂ ಕೆಲವರು ಇದನ್ನು ಅಲ್ಲಗಳೆಯುತ್ತಾರೆ. ಈ ಬಗ್ಗೆ ಕನ್ನಡದ ನಟ ಅಜಯ್ ರಾವ್ ಅವರು ಮಾತನಾಡಿದ್ದಾರೆ. ರ್‍ಯಾಪಿಡ್ ರಶ್ಮಿ ಯೂಟ್ಯೂಬ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಅವರು ಈ ಬಗ್ಗೆ ಹೇಳಿಕೊಂಡಿದ್ದಾರೆ. ಕನ್ನಡ ಚಿತ್ರರಂಗದ ಕರಾಳ ಮುಖವನ್ನು ಅವರು ತೆರೆದಿಟ್ಟಿದ್ದಾರೆ. ಅವರ ಹೇಳಿಕೆ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆಗಳು ನಡೆಯುತ್ತಿವೆ. ಆರ್ಟಿಸ್ಟ್‌ಗಳ ದುರಂತ ಏನಿರುತ್ತದೆ ಎಂದರೆ ನಾವು ಏನಾದರೂ ಕೇಳಿದರೆ ಎಲ್ಲದರಲ್ಲೂ ಮಧ್ಯೆ ಮೂಗು ತೂರಿಸುತ್ತಾನೆ ಎಂದು ಭಾವಿಸುತ್ತಾರೆ. ನಟ ಏನು ಸಫರ್ ಮಾಡುತ್ತಾ ಇರುತ್ತಾನೆ ಎಂಬುದು ಆತನಿಗೆ ಮಾತ್ರ ಗೊತ್ತಿರುತ್ತದೆ. ಸಿನಿಮಾ ಸೋತಾಗ ಫ್ಲಾಪ್ ಹೀರೋ. ಸಿನಿಮಾ ಹಿಟ್ ಆದಾಗ ಅದಕ್ಕೆ ಸುಮಾರು ಜನ ತಂದೆ ತಾಯಿಯರು ಸಿಗುತ್ತಾರೆ. ಬರಹಗಾರ, ತಾಂತ್ರಿಕ ವರ್ಗದವರ ಮೇಲೆ ಸಿನಿಮಾ ನಿಂತಿದೆ' ಎಂದಿದ್ದಾರೆ ಅಜಯ್ ರಾವ್. 'ಸಿನಿಮಾ ಗೆದ್ದಿದೆ ಎಂದರೆ ಆ ಕ್ರೆಡಿಟ್‌ನ ನಾನು ಬರಹಗಾರ ಹಾಗೂ ನಿರ್ದೇಶಕನಿಗೆ ಕೊಡುತ್ತೇನೆ. ಏಕೆಂದರೆ ನಾನು ಫ್ಲಾಪ್ ಸಿನಿಮಾಗೂ ಅಷ್ಟೇ ಎಫರ್ಟ್ ಹಾಕಿರುತ್ತೇನೆ, ಗೆದ್ದ ಸಿನಿಮಾಗೂ ಅಷ್ಟೇ ಎಫರ್ಟ್ ಹಾಕಿರುತ್ತೇನೆ. ಅವನ ಬರವಣಿಗೆ, ನಿರ್ದೇಶಕನ ಎಫರ್ಟ್, ನಿರ್ಮಾಪಕ ಹಣ ಹಾಕಿದ್ದರಿಂದ ಸಿನಿಮಾ ಗೆದ್ದಿದೆ. ನನ್ನ ಎಫರ್ಟ್ ಸಿನಿಮಾದಲ್ಲಿ ಒಂದೇ ರೀತಿ ಇರುತ್ತದೆ. ಕಥೆನ, ಬರಹಗಾರನ ನಂಬಬೇಕು' ಎಂದು ಅವರು ಹೇಳಿದ್ದಾರೆ. ಅಜಯ್ ರಾವ್ ಅವರು ಹಲವು ಹಿಟ್ ಚಿತ್ರಗಳನ್ನು ನೀಡಿದ್ದಾರೆ. ಈಗ ಅವರು ಅಷ್ಟು ಅಗ್ರೆಸ್ಸಿವ್ ಆಗಿ ಸಿನಿಮಾಗಳನ್ನು ಮಾಡುತ್ತಿಲ್ಲ. ಅದಕ್ಕೆ ಕಾರಣವನ್ನು ಅವರು ವಿವರಿಸಿಲ್ಲ. ಇನ್ನು ಅಜಯ್ ರಾವ್ ಅವರು ತಮಗೆ ಕೋಟಿ ಕೋಟಿ ರೂಪಾಯಿ ಸಾಲ ಇದೆ ಎಂದು ಹೇಳಿಕೊಂಡಿದ್ದಾರೆ. ಈ ಸಾಲ ಹೇಗಾಯಿತು, ಏಕಾಯಿತು ಎಂಬುದನ್ನು ಅವರು ವಿವರಿಸಿಲ್ಲ. ಅಜಯ್ ರಾವ್ ಅವರು ಸದ್ಯ 'ಯುದ್ಧಕಾಂಡ' ಹೆಸರಿನ ಸಿನಿಮಾ ಮಾಡಿದ್ದಾರೆ. ಪವನ್ ಭಟ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ.




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news


ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966